Editor: S.Y.GURUSHANTH Publisher: G.N.NAGARAJ RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE


ಸಂಪುಟ–19 | ಸಂಚಿಕೆ–13 | ಮಾರ್ಚ್ 24–30, 2025 | ಪುಟ 16 | ರೂ.10/–
Volume-19 | Issue-13 | March 24-30, 2025 | Pages:16 | Price: 10/-

ಸ್ಟಾರ್ ಲಿಂಕ್ ಒಪ್ಪಂದದ ಒಳ ಮರ್ಮವೇನು?



ಭಗತ್ ಸಿಂಗ್:


ಕಾಲದ ಹಣೆಯ ಮೇಲೆ ಹೊಳೆಯುವ ಸಿಂಧೂರ



ಮಲ್ಪೆ: ಮೀನು ಕದ್ದ ಆರೋಪದಲ್ಲಿ ದಲಿತ ಮಹಿಳೆಗೆ ಥಳಿತ

ಮೇ 20: ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಕಾರ್ಮಿಕ ಸಂಘಟನೆಗಳ ಕರೆ





ಬೆಂಗಳೂರು ಸುರಂಗ ಮಾರ್ಗ: ಕಿ.ಮೀ. 20ರೂ.ಗಳ ಟೋಲ್ ವಸೂಲಿ!?

ಮಾರ್ಕ್ಸ್‌ವಾದಿಗಳು ಹಿಂದುತ್ವವನ್ನು ಹೇಗೆ ಎದುರಿಸಬೇಕು?

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)–CPI(M)ನ 24ನೇ ಅಖಿಲ ಭಾರತ ಸಮ್ಮೇಳನ ಏಪ್ರಿಲ್ 2ರಿಂದ 6ರವರೆಗೆ ತಮಿಳುನಾಡಿನ ಮದುರೈನಲ್ಲಿ ನಡೆಯಲಿದೆ. ಈ ಸಮ್ಮೇಳನದಲ್ಲಿ ಅಂಗೀಕರಿಸಬೇಕಾದ ರಾಜಕೀಯ ನಿರ್ಣಯದ ಕರಡು ಈಗಾಗಲೇ ಹಲವು ಭಾಷೆಗಳಲ್ಲಿ ಮುದ್ರಣಗೊಂಡು, ದೇಶಾದ್ಯಂತ ವ್ಯಾಪಕ ವಿಮರ್ಶೆಗೆ ಒಳಗಾಗಿದೆ. ಕರಡು ನಿರ್ಣಯ 2.79ರಲ್ಲಿ ‘ಹಿಂದುತ್ವ ಮತ್ತು ಆರೆಸ್ಸೆಸ್ ಸಂಘಟನೆಗಳ ಚಟುವಟಿಕೆಗಳು ಮತ್ತು ಪ್ರಭಾವವನ್ನು ಎದುರಿಸಲು ಪಕ್ಷವು ಸಜ್ಜಾಗಿರಬೇಕು’ ಎಂದು ಹೇಳಲಾಗಿದೆ. ಹಿಂದುತ್ವವನ್ನು ಹೇಗೆ ಎದುರಿಸಬೇಕು ಎಂಬ ಪ್ರಶ್ನೆ ಹಲವರಲ್ಲಿ ಮೂಡುತ್ತದೆ. ಇದಕ್ಕೆ ಉತ್ತರವನ್ನೂ ನಿರ್ಣಯದಲ್ಲಿ ಕೊಡಲಾಗಿದೆ. ಈ ಲೇಖನ ಮತ್ತಷ್ಟು ಸಹಕಾರಿಯಾಗಲಿದೆ.

ಕಳೆದ 11 ವರ್ಷಗಳಿಂದ, ಆರ್‌ಎಸ್‌ಎಸ್ ನೇತೃತ್ವದ ಬಿಜೆಪಿ ಸರ್ಕಾರವು “ಹಿಂದುತ್ವವನ್ನು ರಾಜ್ಯದ ಸಿದ್ಧಾಂತವನ್ನಾಗಿ ಮಾಡುವ ಮತ್ತು ಜಾತ್ಯತೀತ–ಪ್ರಜಾಪ್ರಭುತ್ವ ಗಣರಾಜ್ಯವನ್ನು ಹಿಂದೂ ರಾಷ್ಟ್ರವನ್ನಾಗಿ ಪರಿವರ್ತಿಸುವ ಆರ್‌ಎಸ್‌ಎಸ್ ಕಾರ್ಯಸೂಚಿಯನ್ನು ವ್ಯವಸ್ಥಿತವಾಗಿ ಅನುಸರಿಸುತ್ತಿದೆ. ಕಳೆದ ಒಂದು ದಶಕದಲ್ಲಿ ಹಿಂದುತ್ವ ಶಕ್ತಿಗಳು ತಮ್ಮ ಸೈದ್ಧಾಂತಿಕ ಪ್ರಭಾವದ ಆಧಾರದ ಮೇಲೆ ಗಣನೀಯವಾದ ಬೆಂಬಲದ ನೆಲೆಯನ್ನು ಸೃಷ್ಟಿಸಿವೆ ಎಂಬ ಅಂಶವನ್ನು ಗಮನಿಸಿದರೆ, ಹಿಂದುತ್ವವನ್ನು ಎದುರಿಸಲು ಸಮಗ್ರ ಕಾರ್ಯಕ್ರಮವನ್ನು ಹೊಂದುವುದು ಅಗತ್ಯವಾಗಿದೆ” ಎಂದು ಕರಡು ನಿರ್ಣಯ 2.79ರಲ್ಲಿ ಪಕ್ಷವು ಒತ್ತಿ ಹೇಳುತ್ತದೆ.

ಪ್ರಶ್ನೆ: ಯಾವ ಆಧಾರದಲ್ಲಿ ಈ ಹೋರಾಟ ನಡೆಸಬೇಕೆಂದು ಸಿಪಿಐ(ಎಂ) ಹೇಳುತ್ತದೆ?

ಉತ್ತರ: “ಹಿಂದುತ್ವ ಮತ್ತು ವಿವಿಧ ಆರೆಸ್ಸೆಸ್ ಸಂಘಟನೆಗಳ ಚಟುವಟಿಕೆಗಳು ಮತ್ತು ಪ್ರಭಾವವನ್ನು ಎದುರಿಸಲು, ಸಿಪಿಐ(ಎಂ) ಪಕ್ಷವು ರಾಜಕೀಯ, ಸೈದ್ಧಾಂತಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ನಿರಂತರ ಚಟುವಟಿಕೆಗಳನ್ನು ನಡೆಸಲು ಸಜ್ಜಾಗಿರಬೇಕು. ಕೇವಲ ಚುನಾವಣಾ ಕದನಗಳ ಮೂಲಕ ಬಿಜೆಪಿ ಮತ್ತು ಆರೆಸ್ಸೆಸ್ ಅನ್ನು ಸೋಲಿಸಲು ಸಾಧ್ಯವಿಲ್ಲ. ಮೇಲೆ ಹೇಳಿದ ಕ್ಷೇತ್ರಗಳಲ್ಲಿ ಸೈದ್ಧಾಂತಿಕ ಹೋರಾಟಗಳನ್ನು ನಡೆಸಬೇಕು ಎಂದು ನಿರ್ಣಯಗಳು ಸೂಚಿಸುತ್ತವೆ.

ಪ್ರಶ್ನೆ: ಹಿಂದುತ್ವ ಎಂಬುದು ಹಿಂದೂ ಧರ್ಮವನ್ನು ಸೂಚಿಸುತ್ತದೆಯೇ?

ಉತ್ತರ: ಇಲ್ಲ. 1923ರಲ್ಲಿ, ಸಾವರ್ಕರ್ ತಮ್ಮ "ಹಿಂದುತ್ವದ ಮೂಲಭೂತ ಅಂಶಗಳು" (Essentials of Hindutva) ಪುಸ್ತಕದಲ್ಲಿ, "ಹಿಂದುತ್ವ ಮತ್ತು ಹಿಂದೂ ಧರ್ಮ ಒಂದೇ ಅಲ್ಲ; ಹಿಂದುತ್ವವು ಒಂದು ರಾಜಕೀಯ ಯೋಜನೆಯಾಗಿದೆ" ಎಂದು ಹೇಳಿದರು. ಹಿಂದುತ್ವ ಎಂಬ ಪದವನ್ನು ಮೊದಲು ಹೇಳಿದವರು ಸಾವರ್ಕರ್ ಅವರೇ. ‘ಹಿಂದೂ ರಾಷ್ಟ್ರ’ ಎಂಬುದು ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ ಮಾತ್ರವಲ್ಲ; ಸಮಾಜವನ್ನು ಚಾತುರ್ವರ್ಣ ವ್ಯವಸ್ಥೆಯ ಆಧಾರದ ಮೇಲೆ ರಚಿಸಬೇಕೆಂದು ಅದು ಹೇಳುತ್ತದೆ. ಇದಕ್ಕಾಗಿಯೇ ಗೋಲ್ವಾಲ್ಕರ್ ಭಾರತೀಯ ಸಂವಿಧಾನವು ‘ಮನುಸ್ಮೃತಿ’ಯ ಆಧಾರಿತವಾಗಿರಬೇಕು ಎಂದು ಒತ್ತಾಯಿಸಿದರು.

ನವೆಂಬರ್ 26, 1949ರಂದು ಜಾತ್ಯತೀತ–ಪ್ರಜಾಪ್ರಭುತ್ವ ಸಂವಿಧಾನವನ್ನು ಅಂಗೀಕರಿಸಿದ ನಂತರ, ಆರ್‌ಎಸ್‌ಎಸ್‌ನ ಇಂಗ್ಲಿಷ್ ಮುಖವಾಣಿ ಆರ್ಗನೈಸರ್, ನವೆಂಬರ್ 30, 1949ರ ಸಂಪಾದಕೀಯದಲ್ಲಿ ಹೀಗೆ ದೂರಿತು:

“ಆದರೆ ನಮ್ಮ ಸಂವಿಧಾನದಲ್ಲಿ ಪ್ರಾಚೀನ ಭಾರತದಲ್ಲಿನ ವಿಶಿಷ್ಟ ಸಾಂವಿಧಾನಿಕ ಬೆಳವಣಿಗೆಯ ಬಗ್ಗೆ ಯಾವುದೇ ಉಲ್ಲೇಖವಿಲ್ಲ. ಸ್ಪಾರ್ಟಾದ ಲೈಕರ್ಗಸ್ ಅಥವಾ ಪರ್ಷಿಯಾದ ಸೊಲೊನ್ ಅವರಿಗಿಂತ ಬಹಳ ಹಿಂದೆಯೇ ಮನುವಿನ ಕಾನೂನುಗಳನ್ನು ಬರೆಯಲಾಗಿದೆ. ಇಂದಿಗೂ ಮನುಸ್ಮೃತಿಯಲ್ಲಿ ಪ್ರತಿಪಾದಿಸಲಾದ ಅವನ ಕಾನೂನುಗಳು ಪ್ರಪಂಚದ ಮೆಚ್ಚುಗೆಯನ್ನು ಹುಟ್ಟುಹಾಕುತ್ತವೆ ಮತ್ತು ಸ್ವಯಂಪ್ರೇರಿತ ವಿಧೇಯತೆ ಮತ್ತು ಅನುಸರಣೆಯನ್ನು ಉಂಟುಮಾಡುತ್ತವೆ. ಆದರೆ ನಮ್ಮ ಸಾಂವಿಧಾನಿಕ ಪಂಡಿತರಿಗೆ ಅದು ಏನೂ ಅರ್ಥವಲ್ಲ.”

ಸಾವರ್ಕರ್ ಮತ್ತು ಗೋಲ್ವಾಲ್ಕರ್ ಅವರಂತಹ ಆರ್‌ಎಸ್‌ಎಸ್ ನಾಯಕರು ಮಂಡಿಸಿದ ಹಿಂದುತ್ವದ ರಾಜಕೀಯ ಕಾರ್ಯಕ್ರಮವನ್ನು ಕಳೆದ 11 ವರ್ಷಗಳಿಂದ ಮೋದಿ ನೇತೃತ್ವದ ಸರ್ಕಾರ ಜಾರಿಗೆ ತರುತ್ತಿದೆ.

ಪ್ರಶ್ನೆ: ಹಿಂದುತ್ವ ಸಿದ್ಧಾಂತದ ವಿರುದ್ಧ ನಡೆಸಬೇಕಾದ ಹೋರಾಟದ ಕುರಿತು ಸಮ್ಮೇಳನದ ಕರಡು ನಿರ್ಣಯಗಳಲ್ಲಿ ಉಲ್ಲೇಖಿಸಲಾದ ವಿಧಾನಗಳು ಮತ್ತು ಕರ್ತವ್ಯಗಳು ಯಾವುವು?

ಉತ್ತರ: ಹಲವು ಕಾರಣಗಳಿಂದ ಸಮಾಜದಲ್ಲಿ ಎಲ್ಲಾ ಧರ್ಮದ ಜನರಲ್ಲಿ ಧಾರ್ಮಿಕ ಭಾವನೆ ಬೆಳೆಯುತ್ತಿದೆ. ಜನರ ಧಾರ್ಮಿಕ ಭಾವನೆಗಳನ್ನು ಬಳಸಿಕೊಂಡು, ಧಾರ್ಮಿಕ ನಂಬಿಕೆಯುಳ್ಳ ಭಕ್ತರನ್ನು ಆಕರ್ಷಿಸಲು ಆರೆಸ್ಸೆಸ್ ಧಾರ್ಮಿಕ ಆಚರಣೆಗಳು ಮತ್ತು ದೇವಾಲಯ ಉತ್ಸವಗಳ ಮೂಲಕ ಹಿಂದುತ್ವದ ಮತಾಂಧತೆಯನ್ನು ಉತ್ತೇಜಿಸುತ್ತಿದೆ. ಇದಕ್ಕಾಗಿ ಅವರು ನಿರ್ದಿಷ್ಟವಾಗಿ ಮಹಿಳೆಯರನ್ನು ಗುರಿಯಾಗಿಸಿಕೊಂಡಿದ್ದಾರೆ. ಹೀಗಾಗಿ, ಪೂಜಾ ಸ್ಥಳಗಳನ್ನು, ಧಾರ್ಮಿಕ ನಂಬಿಕೆಗಳನ್ನು ರಾಜಕೀಯ ಉದ್ದೇಶಗಳಿಗಾಗಿ ದುರುಪಯೋಗ ಮಾಡುವುದನ್ನು ನಾವು ಎದುರಿಸಬೇಕಾಗಿದೆ.

ಪ್ರಶ್ನೆ: ಧಾರ್ಮಿಕ ನಂಬಿಕೆಗಳನ್ನು ಹಿಂದುತ್ವವಾದಿಗಳು ತಮ್ಮ ಉದ್ದೇಶಕ್ಕೆ ದುರುಪಯೋಗ ಪಡಿಸಿಕೊಳ್ಳುವುದನ್ನು ಹೇಗೆ ತಡೆಯಬಹುದು?

ಉತ್ತರ: ನಾವು ನಡೆಸುವ ಅಭಿಯಾನಗಳು, ವಿಚಾರ ಸಂಕಿರಣಗಳು, ಸಮಾವೇಶಗಳು ಇತ್ಯಾದಿಗಳು ಅಗತ್ಯ ಚಟುವಟಿಕೆಗಳಾಗಿವೆ. ಆದರೆ, ಇವು ಧಾರ್ಮಿಕ ನಂಬಿಕೆ ಇರುವವರನ್ನು ಸಂಪೂರ್ಣವಾಗಿ ತಲುಪುತ್ತಿಲ್ಲ. ಆದ್ದರಿಂದ, ಇದೆಲ್ಲದರ ಮೇಲೆ ಸಿಪಿಐ(ಎಂ) ಪಕ್ಷವು ಕಾರ್ಯಗತಗೊಳಿಸಬೇಕಾದ ಕರ್ತವ್ಯಗಳ ಬಗ್ಗೆ ಸಮ್ಮೇಳನದ ಕರಡು ರಾಜಕೀಯ ನಿರ್ಣಯಗಳು ಸ್ಪಷ್ಟವಾಗಿ ಹೇಳಿವೆ.

ಇನ್ನೂ ಸ್ವಲ್ಪ ಹೆಚ್ಚು ವಿವರವಾಗಿ ಹೇಳುವುದಾದರೆ.... "ಧಾರ್ಮಿಕ ನಂಬಿಕೆ ಇರುವ ಜನರ ನಡುವೆ ನಿಕಟವಾಗಿದ್ದುಕೊಂಡು ಕೆಲಸ ಮಾಡಬೇಕು. ಜನರ ಧಾರ್ಮಿಕ ನಂಬಿಕೆಗಳು ಮತ್ತು ಇಂತಹ ನಂಬಿಕೆಗಳನ್ನು ಅನ್ಯ ಧರ್ಮಗಳ ಮೇಲೆ ದಾಳಿ ಮಾಡುವ ಉದ್ದೇಶಕ್ಕಾಗಿ ಹಾಗೂ ರಾಜಕೀಯ ಉದ್ದೇಶಗಳಿಗಾಗಿ ಧರ್ಮದ ದುರುಪಯೋಗ ಇವುಗಳ ನಡುವಿನ ವ್ಯತ್ಯಾಸವನ್ನು ಅರ್ಥಮಾಡಿಕೊಳ್ಳಲು ಅವರಿಗೆ ಸಹಾಯಮಾಡುವ ವಿಧಾನವನ್ನು ನಾವು ಅಭಿವೃದ್ಧಿಪಡಿಸಬೇಕಾಗಿದೆ" ಎಂದು ಕರಡು ರಾಜಕೀಯ ನಿರ್ಣಯ ಹೇಳುತ್ತದೆ.

ಪ್ರಶ್ನೆ: ಇದರ ಅರ್ಥ ಏನು?

ಉತ್ತರ: ನಮ್ಮ ದೇಶದ ಬಹುಪಾಲು ಜನರು ಧಾರ್ಮಿಕ ನಂಬಿಕೆಯುಳ್ಳವರಾಗಿದ್ದಾರೆ. ಇದು ಮಾನವ ಸ್ವಭಾವ. ಸಂಘಪರಿವಾರದ ಸಂಘಟನೆಗಳು ಈ ಧಾರ್ಮಿಕ ನಂಬಿಕೆಯನ್ನು ಧಾರ್ಮಿಕ ಭಾವನೆಯಾಗಿ ಪರಿವರ್ತಿಸಿ; ಮುಂದಿನ ಹಂತವಾಗಿ ಇತರ ಧರ್ಮಗಳ ಮೇಲೆ ದ್ವೇಷವನ್ನು ಪ್ರಚೋದಿಸುವ ಮೂಲಕ, ಅವರನ್ನು ಮತಾಂಧರನ್ನಾಗಿ ಮಾಡುತ್ತಾರೆ. ಸಂಘಪರಿವಾರದ ಸಂಘಟನೆಗಳ ಇಂತಹ ಕೋಮು ಚಟುವಟಿಕೆಗಳನ್ನು ತಡೆಯಲು ಸಿಪಿಐ(ಎಂ) ಕಾರ್ಯಕರ್ತರೂ ಸೇರಿದಂತೆ ಜಾತ್ಯತೀತ ಕಾರ್ಯಕರ್ತರು ಧಾರ್ಮಿಕ ನಂಬಿಕೆಯುಳ್ಳವರೊಂದಿಗೆ ಬಾಂಧವ್ಯವನ್ನು ಬೆಳೆಸಿಕೊಳ್ಳಬೇಕು. ಅವರೊಂದಿಗೆ ಮಾತನಾಡಿ ಮತ್ತು ಅವರ ಮನಸ್ಸಿನಲ್ಲಿ ಧಾರ್ಮಿಕ ಸಾಮರಸ್ಯದ ಭಾವನೆಯನ್ನು ಮೂಡಿಸಿ, ಮುಂದಿನ ಹೆಜ್ಜೆಯಾಗಿ ಜಾತ್ಯತೀತತೆ ದೃಷ್ಟಿಕೋನವನ್ನು ಸೃಷ್ಟಿಸಿಕೊಳ್ಳಬೇಕು. "ಜಾತ್ಯತೀತತೆಯ ಹೋರಾಟವು ಮಾನವ ಮನಸ್ಸುಗಳನ್ನು ಗೆಲ್ಲುವ ಹೋರಾಟವಾಗಿದೆ" ಎಂದು ಪ್ರೊಫೆಸರ್ ಕೆ.ಎನ್.ಪಣಿಕರ್ ಹೇಳುತ್ತಾರೆ.

’ಕಾರ್ಪೊರೇಟ್–ಕೋಮುವಾದಿ’ ಸರ್ಕಾರ

ಪ್ರಶ್ನೆ: ಸಿಪಿಐ(ಎಂ) ಪಕ್ಷವು ಮೋದಿ ನೇತೃತ್ವದ ಸರ್ಕಾರವನ್ನು ’ಕಾರ್ಪೊರೇಟ್–ಕೋಮುವಾದಿ’ ಸರ್ಕಾರ ಎಂದು ಕರೆಯುತ್ತಿದೆಯೇ?

ಉತ್ತರ: ಹೌದು. ಇಂದಿನ ಮೋದಿ ಸರ್ಕಾರವು ಕೋಮುವಾದಿ ಸರ್ಕಾರ ಎಂಬುದನ್ನು ನಾವು ನೋಡಿದ್ದೇವೆ. 2014ರಲ್ಲಿ ಮೋದಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ, ಅದು ಭಾರತದ ಆರ್ಥಿಕತೆಯನ್ನು ಅದಾನಿ ಮತ್ತು ಅಂಬಾನಿಯಂತಹ ದೊಡ್ಡ ಕಾರ್ಪೊರೇಟ್ ಕಂಪನಿಗಳಿಗೆ ಹಸ್ತಾಂತರಿಸಲು ಪ್ರಯತ್ನಿಸುತ್ತಿದೆ. ಇದು ತುಂಬಾ ಪ್ರತಿಕೂಲ ಪರಿಣಾಮಗಳನ್ನು ಉಂಟುಮಾಡುತ್ತಿದೆ. ಕರಡು ರಾಜಕೀಯ ನಿರ್ಣಯ 2.7 ಹೀಗೆ ಹೇಳುತ್ತದೆ, “ಭಾರತವು ವಿಶ್ವದ ಅತ್ಯಂತ ಅಸಮಾನತೆ ಇರುವ ರಾಷ್ಟ್ರಗಳಲ್ಲಿ ಒಂದಾಗಿದೆ. ವಿಶ್ವ ಅಸಮಾನತೆ ವರದಿಯ ಪ್ರಕಾರ, 2022–23ರ ವೇಳೆಗೆ, ಜನಸಂಖ್ಯೆಯ ಅಗ್ರ 1 ಪ್ರತಿಶತ ಜನರು ದೇಶದ ಎಲ್ಲಾ ಆದಾಯದ 22.6 ಪ್ರತಿಶತವನ್ನು ವಶಪಡಿಸಿಕೊಂಡಿದ್ದಾರೆ ಮತ್ತು ದೇಶದ ಒಟ್ಟು ಸಂಪತ್ತಿನ 40.1 ಪ್ರತಿಶತವನ್ನು ಹೊಂದಿದ್ದಾರೆ. ಇದು ಭಾರತದ ಇತಿಹಾಸದಲ್ಲಿ ಬ್ರಿಟಿಷರ ಆಳ್ವಿಕೆಗಿಂತ ಹೆಚ್ಚು ಅಸಮಾನ ಪಾಲು. ಭಾರತದ ಅಗ್ರ ಒಂದು ಪ್ರತಿಶತದಷ್ಟು ಜನರ ಆದಾಯದ ಪಾಲು ವಿಶ್ವದಲ್ಲೇ ಅತ್ಯಧಿಕವಾಗಿದೆ. ಮತ್ತೊಂದೆಡೆ, ಭಾರತದಲ್ಲಿನ ಕೆಳಭಾಗದ ಶೇ. 50ರಷ್ಟು ಜನರು ದೇಶದ ಸಂಪತ್ತಿನ ಶೇ. 3ರಷ್ಟು ಮಾತ್ರ ಹೊಂದಿದ್ದಾರೆ" ಎಂದು ವಿವರಿಸಲಾಗಿದೆ.

ನಿರ್ಣಯ 2.8ರಲ್ಲಿ, "ಫೋರ್ಬ್ಸ್ ಶತಕೋಟ್ಯಾಧಿಪತಿಗಳ ಪಟ್ಟಿಯ ಪ್ರಕಾರ, ಮೋದಿ ಪ್ರಧಾನಿಯಾದ 2014ರಲ್ಲಿ ದೇಶದಲ್ಲಿ 100 ಶತಕೋಟ್ಯಾಧಿಪತಿಗಳಿದ್ದರು (ಬಿಲಿಯನೇರ್‌ಗಳು). ಆ ಸಂಖ್ಯೆಯು 2024ರ ವೇಳೆಗೆ 200ಕ್ಕೆ ದ್ವಿಗುಣಗೊಂಡಿದೆ. ಅವರಲ್ಲಿ 100 ಶ್ರೀಮಂತ ಜನರ ಒಟ್ಟು ಸಂಪತ್ತು ಮೊದಲ ಬಾರಿಗೆ ಒಂದು ಟ್ರಿಲಿಯನ್ ಡಾಲರ್‌ಗಳನ್ನು ಮೀರಿದೆ. ಇದು ಮೋದಿ ಆಡಳಿತದಲ್ಲಿ ಅಪಾರ ಪ್ರಮಾಣದ ಸಂಪತ್ತಿನ ಕ್ರೋಢೀಕರಣವನ್ನು ವಿವರಿಸುತ್ತದೆ.” ಎಂದು ಹೇಳಿದೆ.

ನಿರ್ಣಯ 2.9ರಲ್ಲಿ, “ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ (NCRB) ದತ್ತಾಂಶದ ಪ್ರಕಾರ, 2014ರಿಂದ (ಮೋದಿ ಆಡಳಿತದ ಮೊದಲ ವರ್ಷ) 2022ರವರೆಗೆ (ಡೇಟಾ ಲಭ್ಯವಿರುವ ಕೊನೆಯ ವರ್ಷ), ಭಾರತದಲ್ಲಿ 1,00,474 ರೈತರು ಮತ್ತು ಕೃಷಿ ಕಾರ್ಮಿಕರು ಆತ್ಮಹತ್ಯೆ ಮಾಡಿಕೊಳ್ಳುವಂತೆ ಒತ್ತಾಯಿಸಲ್ಪಟ್ಟಿದ್ದಾರೆ ಎಂದು ಅದು ತೋರಿಸುತ್ತದೆ. ಜಾಗತಿಕ ಹಸಿವು ಸೂಚ್ಯಂಕದ ಪ್ರಕಾರ, 2024ರಲ್ಲಿ ಭಾರತವು 127 ದೇಶಗಳಲ್ಲಿ 105ನೇ ಸ್ಥಾನದಲ್ಲಿದೆ.” ಎಂದು ಹೇಳಿದೆ.

ನಿರ್ಣಯ 2.19ರಲ್ಲಿ, “15ರಿಂದ 29 ವರ್ಷ ವಯಸ್ಸಿನ ಯುವಕರಲ್ಲಿ ಒಟ್ಟಾರೆ ನಿರುದ್ಯೋಗ ದರವು ಶೇ. 10ಕ್ಕಿಂತ ಹೆಚ್ಚಾಗಿದೆ. ನಗರ ಪ್ರದೇಶಗಳಲ್ಲಿ ಇದು ಶೇ. 15 ಎಂದು ಸರ್ಕಾರಿ ಅಂಕಿಅಂಶಗಳು ಹೇಳುತ್ತವೆ” ಎಂದು ಹೇಳಿದೆ.

"ಸಮಾಜವಾದವೇ ಪರ್ಯಾಯ"

ಪ್ರಶ್ನೆ: ಇದಕ್ಕೆ ಪರ್ಯಾಯವೇನು?

ಉತ್ತರ: ಜೀವನೋಪಾಯ, ಜೀವನಮಟ್ಟ, ಒಟ್ಟಾರೆಯಾಗಿ ದುಡಿಯುವ ಜನರ ಕಲ್ಯಾಣವನ್ನು ರಕ್ಷಿಸಲು ಜನರ ಬೇಡಿಕೆಗಳಿಗಾಗಿ ವರ್ಗಹೋರಾಟ ಮತ್ತು ನಿರಂತರ ಸ್ಥಳೀಯ ಹೋರಾಟಗಳನ್ನು ನಡೆಸಬೇಕು. ಇದರೊಂದಿಗೆ ಆಳುವ ವರ್ಗಗಳ ವಿರುದ್ಧ ನಮ್ಮ ಪರ್ಯಾಯ ನೀತಿಯನ್ನು ಮಂಡಿಸುವ ಮೂಲಕ ನಾವು ಹೋರಾಟ ನಡೆಸಬೇಕಿದೆ. ಕಳೆದ 78 ವರ್ಷಗಳ ಸ್ವತಂತ್ರ ಭಾರತದಲ್ಲಿ ಆಳುವ ವರ್ಗದ ಸರ್ಕಾರವು ಅಳವಡಿಸಿಕೊಂಡ ಆರ್ಥಿಕ ನೀತಿಗಳು ಮತ್ತು ಯೋಜನೆಗಳು ಜನರ ನಡುವೆ ದೊಡ್ಡ ಪ್ರಮಾಣದಲ್ಲಿ ಆರ್ಥಿಕ ಅಂತರವನ್ನು ಸೃಷ್ಟಿಸಿವೆ. ಜನರ ಸಮಸ್ಯೆಗಳನ್ನು ಪರಿಹರಿಸಲು ಬಂಡವಾಳಶಾಹಿಯಿಂದ ಸಾಧ್ಯವಿಲ್ಲ ಎಂಬುದು ಸ್ಪಷ್ಟವಾಗಿದೆ. "ಸಮಾಜವಾದವೇ ಪರ್ಯಾಯ" ಎಂಬ ಘೋಷಣೆಯನ್ನು ಜನರ ಬಳಿಗೆ ಕೊಂಡೊಯ್ಯಲು ಬಯಸುತ್ತದೆ ಎಂದು ಸಿಪಿಐ(ಎಂ) ಹೇಳುತ್ತದೆ. ಕರಡು ರಾಜಕೀಯ ವಿಮರ್ಶೆ ವರದಿಯಲ್ಲಿ, ಕಲ್ಕತ್ತಾ ಪ್ಲೀನಮ್ ವರದಿಯಲ್ಲಿ ಉಲ್ಲೇಖಿಸಲಾದ ಈ ಅಂಶವನ್ನು ಒತ್ತಿಹೇಳಲಾಗಿದೆ:

"ಸಮಾಜವಾದದ ದೃಷ್ಟಿಕೋನವನ್ನು, ಭಾರತೀಯ ಪರಿಸ್ಥಿತಿಗಳಲ್ಲಿ ಅಂತಹ ಸಮಾಜವಾದಿ ಸಮಾಜವನ್ನು ಹೇಗೆ ಸಾಧಿಸಬಹುದು ಎಂಬುದನ್ನು ಸಹ ವಿಶಿಷ್ಟ ರೀತಿಯಲ್ಲಿ ಎತ್ತಿ ತೋರಿಸಬೇಕು. ನಮ್ಮೆಡೆಗೆ ಯುವ ಪೀಳಿಗೆಯನ್ನು ಆಕರ್ಷಿಸಲು ಅತ್ಯಂತ ಮುಖ್ಯವಾದದ್ದು ಸಮಕಾಲೀನ ಭಾರತೀಯ ಸನ್ನಿವೇಶದಲ್ಲಿ ಸಮಾಜವಾದದ ದೃಷ್ಟಿಕೋನವನ್ನು ಹರಡುವುದು." (ಪ್ಯಾರಾಗ್ರಾಫ್ 1.176)

“ಸಮಾಜವಾದದ ದೃಷ್ಟಿಕೋನ ಮತ್ತು ಭಾರತೀಯ ಪರಿಸ್ಥಿತಿಗಳಲ್ಲಿ ಅಂತಹ ಸಮಾಜವಾದಿ ಸಮಾಜವನ್ನು ಹೇಗೆ ಸಾಧಿಸಬಹುದು ಎಂಬುದನ್ನು ಎತ್ತಿ ತೋರಿಸಬೇಕು. ಯುವ ಪೀಳಿಗೆಯನ್ನು ನಮ್ಮ ಕಡೆಗೆ ಆಕರ್ಷಿಸಲು ಅತ್ಯಂತ ಮುಖ್ಯವಾದ ವಿಷಯವೆಂದರೆ ಸಮಕಾಲೀನ, ಭಾರತೀಯ ಸಂದರ್ಭದಲ್ಲಿ ಸಮಾಜವಾದದ ದೃಷ್ಟಿಕೋನವನ್ನು ಹರಡುವುದು." (ಪ್ಯಾರಾಗ್ರಾಫ್ 1.176)

ಪಾಳೇಗಾರಿ 'ರಿಪಬ್ಲಿಕ್'ಗೆ ತಲೆಬಾಗುತ್ತಿರುವ ಸರ್ಕಾರ

ಸಂಪಾದಕೀಯ

ಧರ್ಮಸ್ಥಳ 'ರಿಪಬ್ಲಿಕ್'ನಲ್ಲಿ, ಸೌಜನ್ಯಳ ಮೇಲಿನ ಅತ್ಯಾಚಾರ-ಕೊಲೆ ಪ್ರಕರಣ ಸೇರಿದಂತೆ ಕಳೆದ ಹಲವು ದಶಕಗಳುದ್ದಕ್ಕೂ ನಡೆದುಕೊಂಡು ಬಂದ ಕೊಲೆ, ಅಪಹರಣ, ಅತ್ಯಾಚಾರಗಳಂತಹ ಘೋರ ಅಪರಾಧ ಪ್ರಕರಣಗಳ ವಿಷಯ ಮತ್ತೊಮ್ಮೆ ಮೇಲೆದ್ದು ಬಂದಿದೆ. ಸಮೀರ್ ಎಂಬ ಯುವಕ ಪ್ರಸ್ತುತ ಪಡಿಸಿರುವ ಒಂದು ಯೂಟ್ಯೂಬ್ ವಿಡಿಯೋ ಎರಡು ವಾರಗಳಲ್ಲಿ ಸುಮಾರು 1.9 ಕೋಟಿ ಜನರ ವೀಕ್ಷಣೆ ಗಳಿಸಿ, ಹತ್ತಾರು ಅಘಾತಕಾರಿ ವಿಷಯಗಳನ್ನು ಮತ್ತೊಮ್ಮೆ ಬಯಲಿಗೆಳೆದು ಸಮಾಜದಲ್ಲಿ ಹೊಸ ಸಂಚಲನವೇ ಸೃಷ್ಟಿಸಿದೆ.. ಸೌಜನ್ಯ ಪ್ರಕರಣದಲ್ಲಿ ನ್ಯಾಯಕ್ಕಾಗಿ ಆಗ್ರಹಿಸಿ ನಡೆದ ದೀರ್ಘ ಹೋರಾಟಕ್ಕೆ ಮತ್ತೊಮ್ಮೆ ಬಲ ತುಂಬುವಂತಹ ಪ್ರಯತ್ನಗಳು ಆರಂಭಗೊಂಡಿರುವಾಗ ಕರ್ನಾಟಕ ರಾಜ್ಯ ಸರಕಾರ ಮತ್ತು ಪೊಲೀಸ್ ಇಲಾಖೆಯ ಪಕ್ಷಪಾತದ ನಡವಳಿಕೆ ಅತ್ಯಂತ ಪ್ರಜಾಪ್ರಭುತ್ವ ವಿರೋಧಿಯಾಗಿದ್ದು ಬಹಳ ವಿಷಾದನೀಯವೂ, ಆಘಾತಕಾರಿಯೂ, ತೀವ್ರ ಖಂಡನೀಯವೂ ಆಗಿದೆ.

ಸೌಜನ್ಯ ಪ್ರಕರಣದ ವಿಷಯದಲ್ಲಿ ಮುಂದಿನ ನಡೆಯನ್ನು ನಿರ್ಧರಿಸಲು ಸಾಹಿತಿ ಚಿಂತಕರು, ಹೋರಾಟಗಾರರು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಸಭೆ ಸೇರಲು ಹೊರಟಾಗ ಪೊಲೀಸ್ ಇಲಾಖೆ ಪರಿಷತ್‌ನ ಮೇಲೆ ಒತ್ತಡ ತಂದು ಸಭಾಂಗಣದಲ್ಲಿ ಸಭೆ ನಡೆಸಲು ನೀಡಿದ್ದ ಅನುಮತಿಯನ್ನು ರದ್ದು ಮಾಡಿಸಿತ್ತು. ಸೌಜನ್ಯ ಪ್ರಕರಣದ ವಿಷಯದಲ್ಲಿ ಬೆಳೆದು ಬಂದ ತೀವ್ರ ಜನಚಳುವಳಿಯಿಂದ ಬೆಚ್ಚಿರುವ 'ಖಾವಂದರು', 'ಮುಂಡಾಸುಧಾರಿ ಗೌಡರು', ಎಂದೆಲ್ಲಾ ಕರೆಯಲಾಗುತ್ತಿರುವ ಪ್ರಭಾವಿ ವ್ಯಕ್ತಿ ಮತ್ತು ಶಕ್ತಿಗಳು ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ, ಈ ಪ್ರಕರಣದ ವಿಷಯವಾಗಿ ಯಾವುದೇ ಮಾಧ್ಯಮದಲ್ಲಿ ತಮ್ಮ ವಿರುದ್ಧ ಯಾವುದೇ 'ಅವಹೇಳನಕಾರಿ' ಮಾತುಗಳನ್ನು ಆಡದಂತೆ ತಮ್ಮ ಹೆಸರನ್ನು ಉಲ್ಲೇಖಿಸದಂತೆ 2023 ರಲ್ಲಿ ಆದೇಶವನ್ನು ಪಡೆದುಕೊಂಡಿದ್ದಾರೆ.

ಈ ಆದೇಶವನ್ನೇ ನೆಪವಾಗಿಟ್ಟುಕೊಂಡಿರುವ ಈ 'ರಿಪಬ್ಲಿಕ್'ನ ಧಣಿಗಳು ಸೌಜನ್ಯ ಮತ್ತು ಅಂತಹ ಪ್ರಕರಣಗಳ ಕುರಿತ ಯಾವುದೇ ಸಾರ್ವಜನಿಕ ಚರ್ಚೆ ನಡೆಯದಂತೆ ಮಾಡಲು ಹವಣಿಸುತ್ತಿದ್ದಾರೆ. ಇದೇ ಮಾರ್ಚ್ 18, 2025 ರಂದು ಬೆಂಗಳೂರಿನ ಶೇಶಾದ್ರಿಪುರಂನಲ್ಲಿರುವ ಎಐಟಿಯುಸಿ ಕಾರ್ಯಾಲಯದಲ್ಲಿ ದಿಕ್ಸೂಚಿ ಸಭೆ ನಡೆಸಲು ಹೊರಟಾಗಲೂ ಪೊಲೀಸರು ಸಭೆಯನ್ನು 'ಪ್ರತಿಭಟನೆ' ಎಂದು ತಪ್ಪಾಗಿ ಬಿಂಬಿಸಿದ್ದಲ್ಲದೇ, ಉದ್ದೇಶಿತ ಸಭೆಯನ್ನು ನಡೆಸಿದರೆ ಅದರಲ್ಲಿ ಪಾಲ್ಗೊಂಡವರನ್ನು ಹಾಗೂ ಸಭೆಗೆ ಸ್ಥಳಾವಕಾಶ ನೀಡಿದವರನ್ನು ಬಂಧಿಸುತ್ತೇವೆ ಎಂದು ಬೆದರಿಕೆ ಒಡ್ಡಿದ್ದರು. ಈ ಸಂಬಂಧ ಶೇಷಾದ್ರಿಪುರ ಪೊಲೀಸರು ನೋಟಿಸ್ ನೀಡಿದ್ದು, ಸಭೆಯ ಹಿಂದಿನ ದಿನ ರಾತ್ರಿ 10:22 ಕ್ಕೆ. ಅದೂ ವಾಟ್ಸಾಪ್ ಮೂಲಕ. ಆದರೆ ಇದೇ ಹೈಕೋರ್ಟ್ ನ ತೀರ್ಪಿನ ಪ್ರಕಾರ ಇಂತಹ ನೋಟಿಸ್‌ಗಳನ್ನು ವ್ಯಾಟ್ಸ್ ಆಪ್‌ಗಳ ಮೂಲಕ ನೀಡುವಂತಿಲ್ಲ. ಖುದ್ದಾಗಿ ತಲುಪಿಸಬೇಕು, ಇಲ್ಲವೇ ಮನೆಯ ಬಾಗಿಲಿಗೆ ಅಂಟಿಸಿ ಬರಬೇಕು ಎಂದಿದೆ. ಈ ತೀರ್ಪನ್ನು ಸರಿಯಾಗಿ ವಿಶ್ಲೇಷಿಸಿದರೆ ಸಭೆ, ಪ್ರತಿಭಟನೆಗಳನ್ನು ನಡೆಸಲು ಯಾವುದೇ ನಿರ್ಬಂಧ ಇಲ್ಲ, ಆ ಸಂಬಂಧ ನಿರ್ದಿಷ್ಟ ಕೆಲವು ವ್ಯಕ್ತಿಗಳ ಹೆಸರನ್ನು ಉಲ್ಲೇಖಿಸುವಂತಿಲ್ಲ ಎಂಬುದು ಮತ್ತು ಈ ನಿರ್ಬಂಧವು ಪ್ರತಿವಾದಿಗಳಿಗೆ ಮಾತ್ರ ಅನ್ವಯಿಸುತ್ತದೆ ಎಂಬುದು ತಿಳಿಯುತ್ತದೆ. ಪೊಲೀಸರ ಬೆದರಿಕೆಗೆ ಸಂಘಟಕರಾಗಲಿ ಅಥವಾ ಕಾರ್ಮಿಕ ಸಂಘಟನೆಯಾಗಲಿ ಜಗ್ಗಿಲ್ಲದಿರುವುದು ಅಭಿನಂದನೀಯ. ಸಭೆ ಸೇರುವ ಪ್ರಜಾಸತ್ತಾತ್ಮಕ ಹಕ್ಕನ್ನು ದಮನ ಮಾಡುವ ಧೋರಣೆಯ ವಿರುದ್ಧ ಹೈಕೋರ್ಟಿನಲ್ಲಿ ರಿಟ್ ಪಿಟಿಷನ್ ಅನ್ನು ಸಲ್ಲಿಸಲಾಹಿತ್ತು.. ಸಂಜೆ ಸಭೆ ಸೇರುವ ಹೊತ್ತಿಗೆ ನ್ಯಾಯಾಲಯವು "ಪೊಲೀಸರು, ಸರ್ಕಾರ ಸಭೆಯನ್ನು, ಪ್ರತಿಭಟನೆಯನ್ನು ತಡೆಯುವಂತಿಲ್ಲ. ಪ್ರತಿಭಟನೆಗಳನ್ನು ಊಹೆಯ ಆಧಾರದಲ್ಲಿ ತಡೆಯುವಂತಿಲ್ಲ" ಎಂದು ಆದೇಶವನ್ನು ಸಹ ನೀಡಿದ್ದು ಅತ್ಯಂತ ಸ್ವಾಗತಾರ್ಹವಾದುದು.

ದೊಡ್ಡ ಸಂಖ್ಯೆಯ ಜನರು ಪಾಲೊಂಡಿದ್ದ ಸಭೆಯೇನೋ ನಡೆಯಿತು. ಆದರೆ ಕನಿಷ್ಟ ಇಂತಹ ಸಮಾಲೋಚನಾ ಸಭೆಗಳೂ ನಡೆಯದಂತೆ ಸರಕಾರವು ಸಾಮಾಜಿಕ ಕಾರ್ಯಕರ್ತರು ಮತ್ತು ಹೋರಾಟಗಾರರ ಮೇಲೆ ಹದ್ದಿನ ಕಣ್ಣಿಟ್ಟು ಅಡೆ ತಡೆ ಒಡ್ಡುವಂತೆ ಸರಕಾರವನ್ನು 'ಕುಣಿಸುತ್ತಿರುವ' ಶಕ್ತಿಗಳು ಯಾವುವು ಎಂಬ ಗಂಭೀರ ಪ್ರಶ್ನೆ ಹುಟ್ಟಿಕೊಂಡಿದೆ. ಜನತೆಯಿಂದ ಚುನಾಯಿತಗೊಂಡ ಸಂವಿಧಾನ ಬದ್ಧ ಸರ್ಕಾರವೊಂದು ಅಂತಹ ಸ್ಥಾಪಿತ ಹಿತಾಸಕ್ತಿಗಳಿಗೆ ಮಣಿಯುವುದು ಎಂದರೇನರ್ಥ? ಎರಡು ಕೋಟಿ ಜನರನ್ನು ತಲುಪಿರುವ ವಿಡಿಯೋಗೆ ಸಂಬಂಧ ಹೊಂದಿರುವ ಒಂದು ಸಭೆಗೆ ಒಡ್ಡಿರುವ ನಿರ್ಬಂಧದ ವಿಷಯ ರಾಜ್ಯದ ಗೃಹ ಸಚಿವರಿಗೆ, ಮುಖ್ಯಮಂತ್ರಿಗಳಿಗೆ ಗೊತ್ತಿಲ್ಲ ಎಂದರೆ ಅದನ್ನು ಒಪ್ಪುವುದು ಸಾಧ್ಯವಿಲ್ಲ. ಗೊತ್ತಿಲ್ಲ ಎಂದಾದರೆ ರಾಜ್ಯ ಕಾಂಗ್ರೆಸ್ ಸರಕಾರ ಮತ್ತು ಗೃಹ ಸಚಿವಾಲಯ ತನ್ನ ಕಾರ್ಯ ನಿರ್ವಹಣೆಯಲ್ಲಿ ದಯನೀಯವಾಗಿ ವಿಫಲವಾಗಿ ಅದಕ್ಷವಾಗಿ ನಡೆದುಕೊಳ್ಳುತ್ತಿದೆ ಎಂದಾಗುತ್ತದೆ. ಅದನ್ನೂ ಸಹ ಒಪ್ಪಿಕೊಳ್ಳುವುದು ಸಾಧ್ಯವಿಲ್ಲ.

ಸಭೆಯು ಸೌಜನ್ಯ ಮತ್ತು ಇತರ ಹಲವು ಪ್ರಕರಣಗಳ ಸಂಬಂಧವಾಗಿ ವಿವರವಾಗಿ ಚರ್ಚಿಸಿ ಹೋರಾಟದ ಮುಂದಿನ ಹೆಜ್ಜೆಯಾಗಿ ಬೆಂಗಳೂರಿನಿಂದ ಧರ್ಮಸ್ಥಳಕ್ಕೆ ಬೈಕ್ ಜಾಥಾ, ಅಥವಾ ವಾಹನ ಜಾಥಾ, ಕೊನೆಯಲ್ಲಿ ರಾಜ್ಯ ಮಟ್ಟದ ಬೃಹತ್ ಪ್ರತಿಭಟನಾ ಸಭೆಯನ್ನು ನಡೆಸುವುದು ಎಂದು ಸ್ಥೂಲವಾಗಿ ನಿಧರಿಸಿದೆ.

ಮುಗ್ಧ ಪಿಯುಸಿ ವಿದ್ಯಾರ್ಥಿನಿಯ ಮೇಲೆ ಭೀಕರ ಅತ್ಯಾಚಾರ-ಕೊಲೆ, ವ್ಯವಸ್ಥಿತವಾದ ಸಾಕ್ಷ್ಯ ನಾಶ, ನಿರಪರಾಧಿಯನ್ನು ಸಿಲುಕಿಸಿದ ಸಂಚು, 'ಉಳುವವನಿಗೆ ಭೂಮಿ' ಹೋರಾಟದ ಕಮ್ಯೂನಿಸ್ಟ್ ಮುಖಂಡನ ಸಜೀವ ದಹನಕ್ಕೆ ಯತ್ನ-ಅಂಗಡಿಗೆ ಬೆಂಕಿ, ಖಾವಂದರ ಪಾಳೇಗಾರಿ ಹುಕುಂಗೆ ಸೆಡ್ಡು ಹೊಡೆದು ಪಂಚಾಯತ್ ಚುನಾವಣೆಗೆ ನಿಂತಿದ್ದಕ್ಕಾಗಿ ಕಮ್ಯೂನಿಸ್ಟ್ ಮುಖಂಡನ ಮಗಳಾದ ಪದ್ಮಲತಾಳ ಅಪಹರಣ-ಭೀಕರ ಕೊಲೆ, ದೇವಸ್ಥಾನದಲ್ಲಿ ಸಲ್ಲಿಸಿದ ದೀರ್ಘ ಸೇವೆಗಾಗಿ ಹಿಂದೆ ಸಿಕ್ಕಿದ್ದ ಜಮೀನು ವಾಪಸ್ ಕೊಡದ ಆನೆ ಮಾವುತ ನಾರಾಯಣ ಮತ್ತು ಸಹೋದರಿಯ ಭೀಕರ ಕೊಲೆ, ಹೈಸ್ಕೂಲಿನಲ್ಲಿ ಜಾತಿ ತಾರತಮ್ಯ ಮಾಡಿ ಮುಖ್ಯೋಪಾಧ್ಯಾಯಿನಿ ಹುದ್ದೆ ತಪ್ಪಿಸಿದ್ದನ್ನು ಪ್ರತಿಭಟಿಸಿದ ಶಿಕ್ಷಕಿಯ ಭೀಕರ ಕೊಲೆ, ಬಹುತೇಕ ಈ ಎಲ್ಲ ಪ್ರಕರಣಗಳಲ್ಲಿ ದೂರು ದಾಖಲಿಸಲು ಪೊಲೀಸರ ನಿರಾಕರಣೆ, ವಿಳಂಬ, ಎಲ್ಲ ಹಂತಗಳಲ್ಲಿನ ಸಾಕ್ಷ್ಯ ನಾಶ ಹೀಗೆ ಪ್ರಕರಣಗಳ ವಿವರಗಳನ್ನು ನೋಡುತ್ತಿದ್ದರೆ ನಾವು ಯಾವ ಯುಗದಲ್ಲಿದ್ದೇವೆ, ಯಾವ ದೇಶದಲ್ಲಿದ್ದೇವೆ ಎಂದು ಅಘಾತವಾಗದೇ ಇರದು. ಇಂತಹ ಘಟನೆಗಳು ನಡೆದ ಬಳಿಕ ಅದರ ಫಲಾನುಭವಿಗಳು ಯಾರು ಎನ್ನುವುದನ್ನು ಗಮನಿಸಿದರೂ ಉದ್ದೇಶ, ಕುರುಹುಗಳು ಸಿಕ್ಕುತ್ತವೆ. ಮಾಹಿತಿಯಂತೆ ಹಿಂದಿನ ಹತ್ತು ವರ್ಷಗಳಲ್ಲಿ 416 ಇಂತಹ ಪ್ರಕರಣಗಳು ದಾಖಲಾಗಿರುವುದು ಅವು ತನಿಖೆಯ ತಾರ್ಕಿಕ ಹಂತ ತಲುಪದಿರುವುದು ಏನನ್ನು ಸೂಚಿಸುತ್ತವೆ? ಧರ್ಮಸ್ಥಳ ಎಂದು ಹೆಸರು ಇಟ್ಟುಕೊಂಡು ಬಿಟ್ಟರೆ ಅದು 'ಧರ್ಮಸ್ಥಳ' ಆಗುವುದಿಲ್ಲ. ಮುಗ್ಧ ಜನರ ಕೊಲೆ-ಶೋಷಣೆ-ಅತ್ಯಾಚಾರ-ದೌರ್ಜನ್ಯ-ಅಪರಾಧಗಳು ನಿಂತು ಖಾವಂದರ 'ರಿಪಬ್ಲಿಕ್' ಅಂತ್ಯವಾದರೆ, ಅಪರಾಧಿಗಳಿಗೆ ಕಾನೂನಿನ ಅನ್ವಯ ಶಿಕ್ಷೆಯಾದರೆ ಆಗ ಆ ಹೆಸರಿಗೆ ಕೊಂಚ ಅರ್ಥ ಬರಬಹುದು. ●

ಮಲ್ಪೆ ಮೀನು ಕದ್ದ ಆರೋಪ ದಲಿತ ಮಹಿಳೆಗೆ ಥಳಿತ

ಮೀನು ಸಾಗಾಟ ಮಾಡುವ ವೃತ್ತಿ ಮಾಡುವ ದಲಿತ ಮಹಿಳೆ ಒಂದು ಬುಟ್ಟಿ ಮೀನು ಕಳವು ಮಾಡಿದ್ದಾಳೆ ಎಂದು ಆರೋಪಿಸಿ, ಮಹಿಳೆಗೆ ಅವಾಚ್ಯವಾಗಿ ಬೈದು ಎಳೆದಾಡಿ, ನಂತರದಲ್ಲಿ ಮರಕ್ಕೆ ಕಟ್ಟಿ ಗುಂಪಾಗಿ ಥಳಿಸಿದ ಘಟನೆ ಉಡುಪಿಯ ಮಲ್ಪೆ ಬಂದರಿನಲ್ಲಿ ನಡೆದಿದೆ.ಮೊಬೈಲ್ ವಿಡಿಯೋ ತುಣುಕುಗಳ ಮುಖಾಂತರ ಘಟನೆಯು ಬೆಳಕಿಗೆ ಬರುತ್ತಿದ್ದಂತೆ ಎಚ್ಚೆತ್ತ ಜಿಲ್ಲಾಡಳಿತ ಸಾರ್ವಜನಿಕ ಹೇಳಿಕೆ ನೀಡುವುದರೊಂದಿಗೆ ಘಟನೆಗೆ ಸಂಬಂಧ ಪಟ್ಟಂತೆ ಕೆಲವರನ್ನು ಬಂಧಿಸಿದೆ. ಘಟನೆಗೆ ಜಿಲ್ಲೆಯಾದ್ಯಂತ ಸಂಘಟನೆ ಹಾಗೂ ಸಾರ್ವಜನಿಕರಿಂದ ವ್ಯಾಪಕ ಆಕ್ರೋಶ ಕಂಡು ಬಂದಿದೆ. ಮೇಲ್ನೋಟಕ್ಕೆ ಸಾಮಾನ್ಯ ಕಳವಿನ ಘಟನೆ ಆಗಿ ಕಂಡುಬಂದರೂ ಈ ಘಟನೆಯ ಹಿನ್ನಲೆ ಒಂದಷ್ಟು ಅರ್ಥಮಾಡಿಕೊಳ್ಳುವ ಅಗತ್ಯವಿದೆ.

2025ರ ಮಾರ್ಚ್ 19ರಂದು ಈ ಘಟನೆ ನಡೆದಿದ್ದು, ಇದರ ವಿಡಿಯೋ ಜಿಲ್ಲಾ ದಲಿತ ಸಂಘರ್ಷ ಸಮಿತಿ ಮುಖಂಡರಿಗೆ ತಲುಪಿದೆ. ತಕ್ಷಣವೇ ಈ ವಿಡಿಯೋ ತುಣುಕನ್ನು ಜಿಲ್ಲಾಧಿಕಾರಿ ಹಾಗೂ ಎಸ್‌ಪಿ ಯವರ ಗಮನಕ್ಕೆ ತರಲಾಗಿದೆ. ಆದರೆ ಜಿಲ್ಲಾಡಳಿತ ಯಾವುದೇ ಕ್ರಮ ಕೈಗೊಳ್ಳದಿದ್ದಾಗ ರಾಜ್ಯದ ಮುಖ್ಯಮಂತ್ರಿ ಹಾಗೂ ಗೃಹ ಮಂತ್ರಿಯವರಿಗೆ ವಿಡಿಯೋ ರವಾನಿಸಿ ಗಮನಕ್ಕೆ ತರಲಾಯಿತು. ಅಧಿವೇಶನ ನಡೆಯುವ ಸಂದರ್ಭದಲ್ಲಿ ಮುಖ್ಯಮಂತ್ರಿಯವರು ಈ ಬಗ್ಗೆ ಗಮನ ಹರಿಸಿ ಜಿಲ್ಲಾಡಳಿತಕ್ಕೆ ಸೂಚನೆ ನೀಡಿದ್ದಲ್ಲದೆ ತಮ್ಮ ಎಕ್ಸ್ ಖಾತೆಯಲ್ಲಿ ಈ ಬಗ್ಗೆ ಖಂಡಿಸಿ ಹಾಗೂ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ನಂತರವಷ್ಟೆ ಜಿಲ್ಲಾಡಳಿತ ಗಮನ ಹರಿಸಿ ಎಫ್‌ಐಆರ್ ದಾಖಲಿಸಿ ಕೆಲವರನ್ನು ಬಂದಿಸಿದೆ.

ಹಲ್ಲೆಗೊಳಗಾದ ಮಹಿಳೆ ಬಂಜಾರಾ ಸಮುದಾಯಕ್ಕೆ ಸೇರಿದ್ದು, ಈ ಸಮುದಾಯ ಬೇರೆ ಜಿಲ್ಲೆಯಿಂದ ಆಗಮಿಸಿ ಉಡುಪಿ ಹಾಗೂ ಮಲ್ಪೆಬಂದರು ಪ್ರದೇಶದಲ್ಲಿ ಮೀನು ವ್ಯಾಪಾರ ಇತರ ವ್ಯಾಪಾರ ಹಾಗೂ ಕೂಲಿಗಳಾಗಿಯೂ ಕೆಲಸ ಮಾಡಿಕೊಂಡಿರುತ್ತಾರೆ. ಇದು ಸುಮಾರು 20 ವರ್ಷಗಳಿಂದಲೂ ನಡೆದು ಬಂದಿದೆ. ಇವರದ್ದೇ ಆದ ಸಂಘಟನೆಯನ್ನು ಕಟ್ಟಿಕೊಂಡಿರುತ್ತಾರೆ. ಈ ವಿಭಾಗದಲ್ಲಿ ಕೆಲವರು ಸಾಕಷ್ಟು ಆರ್ಥಿಕ ಸಬಲತೆಯನ್ನು ಪಡೆದಿರುತ್ತಾರೆ. ಸಹಜವಾಗಿ ಮಲ್ಪೆ ಬಂದರು ಪ್ರದೇಶದಲ್ಲಿ ಹಾಗೂ ಮೀನುಗಾರಿಕೆ ಕ್ಷೇತ್ರದಲ್ಲಿ ಮೇಲುಗೈ ಸಾಧಿಸಿರುವ ಒಂದು ಸಮುದಾಯ ಈ ಬಗ್ಗೆ ಅಸಮಧಾನ ಹೊಂದಿದ್ದು, ಈ ರೀತಿಯ ಘಟನೆಗಳು ಸಹಜವೆಂಬಂತೆ ನಿರಂತರವಾಗಿ ನಡೆಯುತ್ತಿರುತ್ತದೆ.

ದಂಡ ವಿಧಿಸಿದ ನಂತರವೂ ಹಲ್ಲೆ

ಪ್ರಸ್ತುತ ಘಟನೆಯಲ್ಲೂ ಕೂಡ ದಲಿತ ಮಹಿಳೆ ಸಮುದ್ರದಿಂದ ಬಂದ ಬೋಟಿನಿಂದ ಮೀನು ಇಳಿಸುವ ಕೂಲಿ ವೃತ್ತಿ ಮಾಡುತ್ತಿದ್ದು ಇವರು ಒರ್ವ ಮೀನು ಖಾಲಿ ಮಾಡುವ ಕಂಟ್ರಾಕ್ಟ್ ಕೈಕೆಳಗೆ ಕೆಲಸ ಮಾಡುತ್ತಾರೆ. ಹಲವಾರು ಬಾರಿ ಕಂಟ್ರಾಕ್ಟರ್‌ನ ಆದೇಶದ ಮೇರೆಗೆ 1 ಅಥವಾ 2 ಬುಟ್ಟಿ ಮೀನು ಅಡಗಿಸಿಡುವ ಪ್ರವೃತ್ತಿಯೂ ಇದೆ. ಆದರೂ ಘಟನೆ ನಡೆದ ತಕ್ಷಣ ತಪ್ಪಿತಸ್ಥ ಮಹಿಳೆಗೆ 9000 ರೂ. ದಂಡ ವಿಧಿಸಲಾಗಿತ್ತು. ನಂತರ ಈ ಅಮಾನವೀಯ ಹಲ್ಲೆ ನಡೆಸಲಾಗಿದೆ.

ಪ್ರತಿಕ್ರಿಯೆ ನೀಡದ ಸ್ಥಳೀಯ ಶಾಸಕರು

ಇದೀಗ ಸಮಾಜ ಕಲ್ಯಾಣ ಇಲಾಖೆ ಹಲ್ಲೆಗೊಳಗಾದ ಮಹಿಳೆಗೆ ರೂ.50,000 ಪರಿಹಾರ ಘೋಷಿಸಿದೆ. ಹಾಗೂ ಎಫ್‌ಐಆರ್ ಆದ ತಕ್ಷಣ ರೂ.1,00,000 ಪರಿಹಾರ ತಲುಪಿಸುವುದಾಗಿ ತಿಳಿಸಿದೆ. ಇದು ದಲಿತ ವಿಭಾಗದ ಮೇಲೆ ಹಲ್ಲೆಗೊಳಗಾದಾಗ ಸಿಗಬಹುದಾದ ಪರಿಹಾರವಾಗಿದೆ. ಘಟನೆ ಇಷ್ಟೆಲ್ಲಾ ಪ್ರಚಾರ ಪಡೆದರೂ ಕ್ಷೇತ್ರದ ಶಾಸಕರು ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಘಟನೆಯನ್ನು ಖಂಡಿಸಿಯೂ ಇಲ್ಲ. ಹಲ್ಲೆಗೊಳಗಾದವರ ಬಗೆ ಸಹಾನುಭೂತಿಯೂ ತೋರಿಲ್ಲ.

2005ರಲ್ಲಿ ಗೋಸಾಗಾಟ ಆರೋಪದ ಮೇಲೆ ಹಾಜಬ್ಬ ಮತ್ತು ಹಸನಬ್ಬ ಎನ್ನುವ ಇಬ್ಬರು ವ್ಯಾಪಾರಿಗಳನ್ನು ನಗ್ನಗೊಳಿಸಿ ಸಾರ್ವಜನಿಕವಾಗಿ ಥಳಿಸಿದ ಘಟನೆಯ ರುವಾರಿ ಇಂದಿನ ಶಾಸಕರು, ಅಂದಿನಿಂದ ಇಂದಿನವರೆಗೂ ಇದೇ ಪ್ರವೃತ್ತಿಯ ರಾಜಕಾರಣ ಮಾಡಿಕೊಂಡೆ ಅಧಿಕಾರಕ್ಕೆ ಏರಿರುತ್ತಾರೆ.

ಪುಟ 4 ಕ್ಕೆ



ವಿದ್ಯುತ್ ಗ್ರಾಹಕರ ಸುಲಿಗೆ! ಅಪ್ಪ ಅಮ್ಮನ ಜಗಳದಲ್ಲಿ ಕೂಸು ಬಡವಾಯ್ತು!!

ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಕರ್ನಾಟಕ ಹೈಕೋರ್ಟಿನ ತೀರ್ಪಿನ ಆಧಾರದಲ್ಲಿ ರಾಜ್ಯದ ವಿದ್ಯುತ್ ಗ್ರಾಹಕರ ಮೇಲೆ ಏಪ್ರಿಲ್ 1, 2025 ರಿಂದ ಭಾರಿ ಪ್ರಮಾಣದ ಹೊರೆಯನ್ನು ಹೊರಿಸುವ ಆದೇಶ ಹೊರಡಿಸಿದೆ.

ಇದನ್ನು ಸಿ.ಪಿ.ಐ. (ಎಂ) ಕರ್ನಾಟಕ ರಾಜ್ಯ ಸಮಿತಿಯು ವಿರೋಧಿಸಿದೆ.

ಈ ಆದೇಶ ತಮ್ಮ ಸರ್ಕಾರ ಹೊರಡಿಸಿದ ಆದೇಶವಲ್ಲ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಮ್ಮ ಹೊಣೆಗಾರಿಕೆಯಿಂದ ನುಣುಚಿಕೊಳ್ಳಲು ಯತ್ನಿಸುತ್ತಿದ್ದಾರೆ.

ವಾಸ್ತವದಲ್ಲಿ ಈ ಹೊರೆಯನ್ನು ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಹೊರಿಸುವ ಪ್ರಯತ್ನ ಮಾಡಲಾಗಿತ್ತು. ಈ ಹಿಂದೆ ಇದ್ದ ಕರ್ನಾಟಕ ವಿದ್ಯುತ್ ಮಂಡಳಿ (ಕೆಇಬಿ) ಯನ್ನು ರದ್ದುಗೊಳಿಸಿ ಕೆಪಿಟಿಸಿಎಲ್ ಮತ್ತು ಐದು ಎಸ್ಕಾಂಗಳನ್ನು ರಚಿಸಲಾಗಿತ್ತು. 2022 ರ ಮಾರ್ಚ್ ತಿಂಗಳಲ್ಲಿ ಬಿಜೆಪಿ ನೇತೃತ್ವದ ಸರ್ಕಾರವು ವಿದ್ಯುತ್ ಇಲಾಖೆಯ ನೌಕರರ ಪಿಂಚಣಿ ಮತ್ತು ಗ್ರಾಚುಯಿಟಿ ಪಾಲನ್ನು ಗ್ರಾಹಕರಿಂದ ಪಡೆಯಲು ಆದೇಶಿಸಬೇಕೆಂದು ಕೆ.ಇ.ಆರ್.ಸಿ. ಮುಂದೆ ಮೊದಲ ಬಾರಿಗೆ ಪ್ರಸ್ತಾಪವನ್ನು ಸಲ್ಲಿಸಿತ್ತು. ಇದನ್ನು ಕೆ.ಇ.ಅರ್.ಸಿ. ಒಪ್ಪಿರಲಿಲ್ಲ ಎಂದು ಜಾರ್ಜ್ ಅವರು ವಿವರಣೆ ನೀಡಿದ್ದಾರೆ.

ಸರ್ಕಾರದ ಈ ಪ್ರಸ್ತಾಪವನ್ನು ವಿರೋಧಿಸಿ ಎಫ್.ಕೆ.ಸಿ.ಸಿ.ಐ. ಹೈಕೋರ್ಟಿಗೆ ಸಲ್ಲಿಸಿದ ಅರ್ಜಿಯನ್ನು 2024 ಮಾರ್ಚ್ ನಲ್ಲಿ ಹೈಕೋರ್ಟ್ ತಿರಸ್ಕರಿಸಿತ್ತು. ಇದನ್ನು ಆಧರಿಸಿ ಕೆಪಿಟಿಸಿಎಲ್ ಮತ್ತು ಎಸ್ಕಾಂಗಳು ಮತ್ತೆ ಕೆ.ಇ.ಆರ್.ಸಿ.ಗೆ ಅರ್ಜಿ ಸಲ್ಲಿಸಿದ್ದವು. ಅದನ್ನು ಪುರಸ್ಕರಿಸಿ ಸಣ್ಣ ಪುಟ್ಟ ಬದಲಾವಣೆಗಳನ್ನು ಮಾಡಿ ಕೆ.ಇ.ಅರ್.ಸಿ. ಆದೇಶ ಹೊರಡಿಸಿದೆ ಎಂದು ಇಂಧನ ಸಚಿವ ಜಾರ್ಜ್ ಅವರು ಹೇಳುತ್ತಿದ್ದಾರೆ. ಆ ಎರಡು ವಿದ್ಯುತ್ ಸಂಸ್ಥೆಗಳು ತಮ್ಮ ಸರ್ಕಾರದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ ಎಂಬ ಸತ್ಯಾಂಶವನ್ನು ಮರೆಮಾಚುತ್ತಿದ್ದಾರೆ.

ಜೊತಗೇ ನೌಕರರಿಗೆ ಅವರ ಹಕ್ಕಿನ ಭಾಗವಾಗಿ ಸಿಗಬೇಕಾದ ನಿವೃತ್ತಿ ವೇತನ, ಗ್ರಾಚ್ಯುಯಿಟಿಗಳಿಗೆ ಗ್ರಾಹಕರಿಂದ ಸುಲಿದು ಜನ ಸಾಮಾನ್ಯರನ್ನು ನೌಕರವರ್ಗದವರ ವಿರುದ್ಧ ಎತ್ತಿಕಟ್ಟುವ ಸಂಚು ಇದರಲ್ಲಿ ಅಡಗಿದೆ ಎಂಬುದನ್ನು ಗುರುತಿಸಬೇಕು.

ಹೀಗೆ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಪಕ್ಷಗಳು ಪರಸ್ಪರ ದೋಷಾರೋಪಣೆ ಮಾಡಿಕೊಳ್ಳುತ್ತಾ ವಿದ್ಯುತ್ ಗ್ರಾಹಕರನ್ನು ಯಾಮಾರಿಸಲು ನೋಡುತ್ತಿವೆ.

ಈ ಹಿನ್ನೆಲೆಯಲ್ಲಿ ವಿದ್ಯುತ್ ಗ್ರಾಹಕರು ಮತ್ತು ನಾಡಿನ ಎಲ್ಲಾ ಜನಪರ ಸಂಘ ಸಂಸ್ಥೆಗಳು ಸರ್ಕಾರದ ಸುಲಿಗೆ ತಂತ್ರವನ್ನು ವಿರೋಧಿಸದೆ ಗತ್ಯಂತರವಿಲ್ಲ ಎಂದಿದೆ.

ಹಿರಿಯ ನಾಗರಿಕರ ಆಯೋಗ ರಚಿಸಿದ ಕೇರಳದ ಎಲ್‌ಡಿಎಫ್ ಸರ್ಕಾರ–ಮಹತ್ವದ ಹೆಜ್ಜೆ

ಹಿರಿಯ ನಾಗರಿಕರ ಆಯೋಗ ಮಸೂದೆ 2025 ಅನ್ನು ಕೇರಳ ವಿಧಾನಸಭೆ ಇದೇ 19ರಂದು ಸರ್ವಾನುಮತದಿಂದ ಅಂಗೀಕರಿಸಿದೆ. ಆ ಮೂಲಕ ಕೇರಳವು ಭಾರತದಲ್ಲಿ ಹಿರಿಯ ನಾಗರಿಕರ ಆಯೋಗವನ್ನು ಸ್ಥಾಪಿಸಿದ ಮೊದಲ ರಾಜ್ಯವಾಗಿದೆ. ಶಾಸನಬದ್ಧವಾಗಿ ಸ್ಥಾಪಿಸಲಾದ ಸಂಸ್ಥೆ ಇದಾಗಿದೆ. ಇದು ಹಿರಿಯ ನಾಗರಿಕರ ಹಕ್ಕುಗಳು ಮತ್ತು ಕಲ್ಯಾಣವನ್ನು ರಕ್ಷಿಸುತ್ತದೆ ಮತ್ತು ನೀತಿ ನಿರೂಪಣೆಗೆ ಸಲಹಾ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ. ಹಿರಿಯ ನಾಗರಿಕರ ಆಯೋಗವು 2024ರ ಡಿಸೆಂಬರ್ 21ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರಲಿದೆ.

ಆಯೋಗವು ಸರ್ಕಾರದ ಅಧ್ಯಕ್ಷ, ಪದನಿಮಿತ್ತ ಕಾರ್ಯದರ್ಶಿಯನ್ನು ಹೊಂದಿರಬೇಕು ಮತ್ತು ನಾಲ್ಕು ಸದಸ್ಯರಿಗಿಂತ ಹೆಚ್ಚಿರಬಾರದು. ಅಧ್ಯಕ್ಷರು ಸೇರಿದಂತೆ ಎಲ್ಲರೂ ಹಿರಿಯರು. ಅವರಲ್ಲಿ ಒಬ್ಬರು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದವರು ಮತ್ತು ಇನ್ನೊಬ್ಬರು ಮಹಿಳೆಯಾಗಿರಬೇಕು. ಅಧ್ಯಕ್ಷರು ಮತ್ತು ಸದಸ್ಯರ ಅಧಿಕಾರಾವಧಿ ಮೂರು ವರ್ಷಗಳು.

ಅರೆ–ನ್ಯಾಯಾಂಗ ಅಧಿಕಾರ ಹೊಂದಿರುವ ಈ ಆಯೋಗವು ಕೇರಳದ ಸಾಮಾಜಿಕ–ಆರ್ಥಿಕ ಅಭಿವೃದ್ಧಿಯ ಮೇಲೆ ಗಣನೀಯವಾಗಿ ಪ್ರಭಾವ ಬೀರುವ ಸಾಧ್ಯತೆಯಿದೆ. 60 ರ ದಶಕದ ನಂತರದ ಕಲ್ಯಾಣ, ರಕ್ಷಣೆ ಮತ್ತು ಪುನರ್ವಸತಿಯನ್ನು ಖಚಿತಪಡಿಸಿಕೊಳ್ಳಲು ಮತ್ತು ಅವರ ಉತ್ಪಾದಕತೆ ಮತ್ತು ಸಮಾಜಕ್ಕೆ ಮೂಲ ಮತ್ತು ನವೀನ ಕಲ್ಪನೆಗಳು ಅಥವಾ ಪರಿಹಾರಗಳೊಂದಿಗೆ ಬರುವ ಸಾಮರ್ಥ್ಯವನ್ನು ಬಳಸಿಕೊಳ್ಳಲು ಆಯೋಗವು ಅಸ್ತಿತ್ವಕ್ಕೆ ಬರುತ್ತದೆ.

ಹಿರಿಯರ ಕಲ್ಯಾಣ ಮತ್ತು ರಕ್ಷಣೆಗಾಗಿ ಮಾರ್ಗಸೂಚಿಗಳನ್ನು ಒದಗಿಸಲು ಮತ್ತು ವೃದ್ಧರ ಪುನರ್ವಸತಿಗೆ ನೆರವು ನೀಡಲು ಆಯೋಗವು ಕೆಲಸ ಮಾಡುತ್ತದೆ ಎಂದು ಉನ್ನತ ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸಚಿವರಾದ ಆರ್.ಬಿಂದು ಹೇಳಿದ್ದಾರೆ. ಈ ಬೆಳವಣಿಗಯನ್ನು ಶ್ಲಾಘಿಸಿರುವ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು, "ಈ ಹೊಸ ಆಯೋಗವು ವೃದ್ಧರ ಹಕ್ಕುಗಳು, ಕಲ್ಯಾಣ ಮತ್ತು ಪುನರ್ವಸತಿಯನ್ನು ರಕ್ಷಿಸುವತ್ತ ಗಮನಹರಿಸುತ್ತದೆ" ಎಂದು ಹೇಳಿದ್ದಾರೆ.

2030ರ ವೇಳೆಗೆ ಕಾಲು ಭಾಗದಷ್ಟು ವೃದ್ಧರಾಗುತ್ತಾರೆ

ಜನಸಂಖ್ಯಾ ನಿಯಂತ್ರಣವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿದ ರಾಜ್ಯ ಕೇರಳ. 2011ರ ಜನಗಣತಿಯ ಪ್ರಕಾರ, ಜನಸಂಖ್ಯೆಯ ಶೇ.12.6ರಷ್ಟು ವಯಸ್ಸಾದವರಿದ್ದರು. ಈ ಸಂಖ್ಯೆ 2018ರಲ್ಲಿ, ಶೇ.23 ರಷ್ಟಾಯಿತು. 2030ರ



ವೇಳೆಗೆ ಜನಸಂಖ್ಯೆಯ ಕಾಲು ಭಾಗದಷ್ಟು ಜನರು ವೃದ್ಧರಾಗಿರುತ್ತಾರೆ ಎಂದು ಅಂದಾಜಿಸಲಾಗಿದೆ. ಆರೈಕೆ, ರಕ್ಷಣೆ ಮತ್ತು ಕಲ್ಯಾಣವು ವರದಾನವಲ್ಲ, ಆದು ಹಿರಿಯರ ಹಕ್ಕು ಎಂಬ ಮನವರಿಕೆಯಿಂದ ಎಲ್‌ಡಿಎಫ್ ಸರ್ಕಾರ ಇಂತಹ ಕಾನೂನಿಗೆ ಮುತುವರ್ಜಿ ವಹಿಸಿದೆ.

ಈ ಹಿನ್ನೆಲೆಯಲ್ಲಿ ವಯೋವೃದ್ಧರ ರಕ್ಷಣೆಗೆ ಬಲಿಷ್ಠ ವ್ಯವಸ್ಥೆ ಕಲ್ಪಿಸುವ ಉದ್ದೇಶದಿಂದ ಈ ಕಾಯ್ದೆ ಪ್ರಸ್ತುತವಾಗುತ್ತದೆ. ಈ ಮಸೂದೆ ಮೂಲಕ ಕೇರಳ ದೇಶವನ್ನು ಮುನ್ನಡೆಸುತ್ತಿದೆ, ಇದು ಹಿರಿಯರ ಹಕ್ಕುಗಳನ್ನು ರಕ್ಷಿಸುವ ಗುರಿಯನ್ನು ಹೊಂದಿದೆ. ವೃದ್ಧಾಪ್ಯ ಕಲ್ಯಾಣಕ್ಕಾಗಿ ಬೇರೆ ಯಾವ ರಾಜ್ಯದ ಶಾಸಕಾಂಗವೂ ಇಂತಹ ಕಾನೂನು ಜಾರಿಗೆ ತಂದಿಲ್ಲ.

ಅನಾರೋಗ್ಯ ಮತ್ತು ಒಂಟಿತನ ವೃದ್ಧಾಪ್ಯದ ಸಂಗಾತಿಗಳು. ವೃದ್ಧಾಪ್ಯದಲ್ಲಿ ಮಹಿಳೆಯರ ಸ್ಥಿತಿ ಹೆಚ್ಚು ಐತಿಹಾಸಿಕವಾಗಿ ದುಃಖಕರವಾಗಿದೆ. ಪರಿತ್ಯಕ್ತ ಮತ್ತು ಅನಾಥ ವೃದ್ಧಾಪ್ಯವು ಸುಸಂಸ್ಕೃತ ಸಮಾಜಕ್ಕೆ ಎಂದಿಗೂ ಭೂಷಣವಲ್ಲ. ಜೀವನದ ಕೊನೆಯಲ್ಲಿ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಹೊಂದಿರುವ ಹುರುಪಿನ ಹಿರಿಯರ ಜನಸಂಖ್ಯೆಯು ಕೇರಳದಂತಹ ಪ್ರಗತಿಪರ ಚಿಂತನೆಯ ಸಮಾಜಕ್ಕೆ ಬಹಳಷ್ಟು ಕೊಡುಗೆಯನ್ನು ನೀಡುತ್ತದೆ. ಈ ಶಾಸನವು ಆ ನಿಟ್ಟಿನಲ್ಲಿ ಒಂದು ಹೆಜ್ಜೆಯಾಗಿದೆ.

ಹಿರಿಯರ ಸೇವೆಗಳು ಮತ್ತು ಕೌಶಲ್ಯಗಳನ್ನು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡುವ ಕ್ರಮಗಳ ಜೊತೆಗೆ ನಿರ್ಲಕ್ಷ್ಯ, ಶೋಷಣೆ ಮತ್ತು ಅನಾಥತೆ ಸೇರಿದಂತೆ ಬಡತನದಲ್ಲಿ ವಾಸಿಸುವ ವೃದ್ಧರ ಹೆಚ್ಚುತ್ತಿರುವ ಕಾಳಜಿಯನ್ನು ಪರಿಹರಿಸಲು ಆಯೋಗದ ಕೆಲಸವನ್ನು ವಿನ್ಯಾಸಗೊಳಿಸಲಾಗಿದೆ. ಎಲ್‌ಡಿಎಫ್ ಸರಕಾರವು ಆಯೋಗದ ಮೂಲಕ ಕೇರಳವನ್ನು ವಯೋಮಿತಿಯನ್ನು ಹೆಚ್ಚು ಮಾಡುವ ಗುರಿಯನ್ನು ಮತ್ತು ಅದಕ್ಕೆ ಮಾರ್ಗಸೂಚಿಗಳನ್ನು ಮುಂದಿಡುತ್ತಿದೆ.

ಆಯೋಗದ ಉದ್ದೇಶ:

ಹಿರಿಯ ನಾಗರಿಕರ ಪುನರ್ವಸತಿ, ರಕ್ಷಣೆ ಮತ್ತು ಸಬಲೀಕರಣವನ್ನು ಖಚಿತಪಡಿಸಿಕೊಳ್ಳುವುದು. ಪ್ರಗತಿಪರ ಮತ್ತು ಎಲ್ಲರನ್ನೂ ಒಳಗೊಂಡ ಕೇರಳವನ್ನು ನಿರ್ಮಿಸುವಲ್ಲಿ ಹಿರಿಯ ನಾಗರಿಕರ ಸಕ್ರಿಯ ಭಾಗವಹಿಸುವಿಕೆಯನ್ನು ಉತ್ತೇಜಿಸುವುದು.

ಪ್ರಮುಖ ಲಕ್ಷಣಗಳು ಮತ್ತು ಕಾರ್ಯಗಳು

ನೀತಿ ಸಲಹಾ ಸಮಿತಿ: ಹಿರಿಯ ನಾಗರಿಕರ ಕಲ್ಯಾಣಕ್ಕಾಗಿ ನೀತಿಗಳನ್ನು ರೂಪಿಸುತ್ತದೆ ಮತ್ತು ಶಿಫಾರಸು ಮಾಡುತ್ತದೆ.

ಕುಂದುಕೊರತೆ ಪರಿಹಾರ: ಹಿರಿಯ ನಾಗರಿಕರಲ್ಲಿ ನಿರ್ಲಕ್ಷ್ಯ, ನಿಂದನೆ, ಶೋಷಣೆ ಮತ್ತು ಒಂಟಿತನಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸುತ್ತದೆ.

ಕೌಶಲ್ಯ ಬಳಕೆ: ಹಿರಿಯ ನಾಗರಿಕರ ಕೌಶಲ್ಯ ಮತ್ತು ಜ್ಞಾನವನ್ನು ಸಾಮಾಜಿಕ ಪ್ರಯೋಜನಕ್ಕಾಗಿ ಬಳಸುವುದನ್ನು ಪ್ರೋತ್ಸಾಹಿಸುತ್ತದೆ.

ಕಾನೂನು ನೆರವು ಮತ್ತು ರಕ್ಷಣೆ: ದುರುಪಯೋಗ ಅಥವಾ ಆಸ್ತಿ ವಿವಾದಗಳನ್ನು ಎದುರಿಸುತ್ತಿರುವ ಹಿರಿಯ ನಾಗರಿಕರಿಗೆ ಕಾನೂನು ಬೆಂಬಲವನ್ನು ಒದಗಿಸಲು ಇದು ಸಹಾಯ ಮಾಡುತ್ತದೆ.

ಜಾಗೃತಿ ಅಭಿಯಾನಗಳು: ಹಿರಿಯರ ಹಕ್ಕುಗಳು ಮತ್ತು ಕುಟುಂಬಗಳ ಜವಾಬ್ದಾರಿಗಳ ಬಗ್ಗೆ ಜಾಗೃತಿ ಮೂಡಿಸಲು ಶೈಕ್ಷಣಿಕ ಉಪಕ್ರಮಗಳನ್ನು ನಡೆಸಲಾಗುತ್ತದೆ.

ಆವರ್ತಕ ವರದಿಗಳು: ನೀತಿ ಸುಧಾರಣೆಗಾಗಿ ರಾಜ್ಯ ಸರ್ಕಾರಕ್ಕೆ ನಿಯಮಿತ ವರದಿಗಳು ಮತ್ತು ಸಲಹೆಗಳನ್ನು ಸಲ್ಲಿಸಲಾಗುತ್ತದೆ.

ಮಲ್ಪೆ ಮೀನು ಕದ್ದ ಆರೋಪ.... ಪುಟ 3 ರಿಂದ

ವಿದ್ಯಾರ್ಥಿಗಳ ಮಧ್ಯೆ ನಡೆದ ಪೋಟೋ ಕ್ಷಿಕ್ಕಿಸಿದ ಘಟನೆ, ಹಿಜಾಬ ಘಟನೆಯನ್ನು ಆಧಾರವಾಗಿಸಿ ರಾಜಕೀಯ ಮಾಡಿದ್ದೆ ಇವರ ಸಾಧನೆ. ಜಿಲ್ಲೆಯ ಪ್ರಮುಖ ಸಹಕಾರಿ ಸಂಘದಲ್ಲಿ ನಡೆದ ಅವ್ಯವಹಾರದಲ್ಲಿ ಪ್ರಮುಖ ರೂವಾರಿ ಕೂಡ, ಈ ಮಲ್ಪೆ ಬಂದರಿನ ಹಲ್ಲೆ ವಿಷಯದಲ್ಲಿ ತಪ್ಪು ಎಸಗಿದ ಸ್ವ ಸಮುದಾಯದವರ ಪರವೇ ನಿಂತಿರುವುದು ನಿಚ್ಚಳವಾಗಿದೆ. ಇದೀಗ ಸ್ಥಳೀಯ ಮೀನುಗಾರರ ಸಂಘಟನೆ ಈ ಘಟನೆಯಿಂದ ನಮ್ಮ ಸಮುದಾಯದ ಮಾನ ಹಾನಿಯಾಗಿದೆ. ಈ ಘಟನೆ ಆಕಸ್ಮಿಕವಾಗಿ ನಡೆದಿದೆ. ಈ ವಿಷಯದಲ್ಲಿ ರಾಜಿಯಾಗಿ ವಿಷಯ ಇತ್ಯರ್ಥ ಮಾಡೋಣ ಎಂಬ ಇರಾದೆಯೊಂದಿಗೆ ಒಂದು ದಿನದ ಮೀನುಗಾರಿಕೆ ಬಂದ್ ಘೋಷಿಸಿದೆ. ಇದಕ್ಕೆ ಶಾಸಕರ ಬೆಂಬಲವೂ ಇದೆ ಎನ್ನುವುದು ಗುಮಾನಿ.

ನೈತಿಕ ಪೊಲೀಸ್‌ಗಿರಿ


ಉಡುಪಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣ ಸಣ್ಣ ಕಾರಣಗಳಿಗೂ ಅಲ್ಪ ಸಂಖ್ಯಾತರ ಮೇಲೆ ಗುಂಪು ಹಲ್ಲೆ ನಡೆಸುವ ಪ್ರವೃತ್ತಿ ಪ್ರಾರಂಭ ಆದದ್ದೆ ಬಿಜೆಪಿ ಹಾಗೂ ಸಂಘಪರಿವಾರ ಮುನ್ನಲೆಗೆ ಬಂದ ಮೇಲೆ ಆಗಿದೆ. ನೈತಿಕ ಪೊಲೀಸ್‌ಗಿರಿ ಎಗ್ಗಿಲ್ಲದೇ ನಡೆದಿದೆ. ಇದಕ್ಕೆ ಜಿಲ್ಲಾಡಳಿತದ ಅಪ್ರತ್ಯಕ್ಷ ಬೆಂಬಲವೂ ಇದೆ. ರಾಜಕೀಯ ಧ್ರುವೀಕರಣಕ್ಕೆ ಇದೊಂದು ಮೆಟ್ಟಿಲಾಗಿದೆ. ಇಲ್ಲಿಯವರೆಗೆ ಅಲ್ಪ ಸಂಖ್ಯಾತರನ್ನು ಗುರಿಯಾಗಿಸಿಕೊಂಡದ್ದು ಇದೀಗ ದಲಿತ ಸಮುದಾಯ ಗುರಿಯಾಗಿಸಿಕೊಂಡಿದೆ. ಗುಲ್ವಾಡಿ ಪ್ರದೇಶದಲ್ಲಿ ಮೀನುಗಾರಿಕೆ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದ ಅಲೆಮಾರಿ ಶಿಳ್ಳೆಕ್ಯಾತ ಸಮುದಾಯದ ಮೇಲೆ ಸ್ಥಳೀಯ ಸಂಘಪರಿವಾರದ ಗುಂಡಾಗಳು ದಾಳಿ ಮಾಡಿ ಕೇಸ್ ಹಾಕಿಸಿಕೊಂಡಿದ್ದನ್ನು ನೆನಪಿಸಿಕೊಳ್ಳಬಹುದು.

ಸೂಕ್ತ ಭದ್ರತೆಯ ಭರವಸೆ ಮೂಡಿಸಬೇಕಿದೆ

ಈ ಬಾರಿ ಮಲ್ಪೆ ಹಲ್ಲೆ ಘಟನೆ ಬಗ್ಗೆ ವ್ಯಾಪಕ ಪ್ರತಿರೋಧ ಮತ್ತು ಆಕ್ರೋಶ ಸಾರ್ವಜನಿಕರಲ್ಲಿ ಕಂಡು ಬಂದಿದ್ದು ಸ್ವಾಗತಾರ್ಹ. ಜಿಲ್ಲಾಡಳಿತವು ಈ ಘಟನೆಯಲ್ಲಿ ಯಾವುದೇ ರಾಜಿಗೆ ಒಪ್ಪದೆ ಹಲ್ಲೆ ಮಾಡಿದವರಿಗೆ ಹಾಗೂ ಅದನ್ನು ಪ್ರೋತ್ಸಾಹಿಸಿದವರಿಗೂ ಕಠಿಣ ಶಿಕ್ಷೆಗೆ ಒಳಪಡಿಸುವುದೇ ಹಲ್ಲೆಕೋರರಿಗೆ ನೀಡುವ ಸೂಕ್ತ ಎಚ್ಚರಿಕೆಯಾಗಿದೆ.

ಈ ರೀತಿ ವಲಸೆ ಬಂದು ಕೆಲಸ ಮಾಡುವ ಕಾರ್ಮಿಕರಿಗೆ ಸೂಕ್ತ ಭದ್ರತೆಯ ಭರವಸೆಯ ಬೆಳಕು ಮೂಡಿಸಬೇಕಾಗಿದೆ.

ವರದಿ: ವಿ.ಚಂದ್ರ ಶೇಖರ, ಕುಂದಾಪುರ



"ಶೋಷಣೆ, ದಬ್ಬಾಳಿಕೆ ಮತ್ತು ಅಸಮಾನತೆ ಮುಕ್ತ ಸಮಾಜ ಸ್ಥಾಪನೆಗೆ ನಾವು ನಮ್ಮ ಜನರನ್ನು ಸಿದ್ಧಪಡಿಸಬೇಕು. ಈ ಕ್ರಾಂತಿಯ ಬೀಜಗಳನ್ನು ಬಿತ್ತಲು, ಪ್ರಸ್ತುತ ಎಲ್ಲಾ ಕಳೆಗಳನ್ನು ನಾಶಪಡಿಸಬೇಕು. ಮುಳ್ಳುಗಳನ್ನು ಬೇರುಸಹಿತ ಕಿತ್ತು ಸುಡಬೇಕು. ಬಂಡೆಗಳನ್ನು ಜಲ್ಲಿಕಲ್ಲುಗಳಾಗಿ ಒಡೆಯಬೇಕು. ಬಿದ್ದವರನ್ನು ಮೇಲೆತ್ತಬೇಕು. ಅರಾಜಕತಾವಾದಿಗಳಿಗೆ ಸಭ್ಯತೆಯನ್ನು ಕಲಿಸಬೇಕು. ದುಡಿಯುವ ಜನರನ್ನು ಒಗ್ಗೂಡಿಸಬೇಕು. ಇದಕ್ಕೆ ಅಡ್ಡಿಯಾಗಿರುವ ಜಾತಿ ಮತ್ತು ಧರ್ಮದ ಗೋಡೆಗಳನ್ನು ಕೆಡವಬೇಕು" ಭಗತ್ ಸಿಂಗ್ ಅವರ ನಿರ್ದೇಶನ ಇದಾಗಿತ್ತು. ಹೋರಾಟದಲ್ಲಿ ಅವರ ಏಕೈಕ ರಾಜಕೀಯ ಗುರಿ ಬ್ರಿಟಿಷ್ ಆಳ್ವಿಕೆಯಿಂದ ವಿಮೋಚನೆ ಸಾಧಿಸುವುದಾಗಿತ್ತು. ಆದರೆ ಅದರಾಚೆಗಿನ ಅವರ ಸೈದ್ಧಾಂತಿಕ ಅಡಿಪಾಯ ಮತ್ತು ವಿಶ್ವ ದೃಷ್ಟಿಕೋನದ ಬಗ್ಗೆ ಎಷ್ಟು ಜನರಿಗೆ ತಿಳಿದಿದೆ? ದೇಶ ಈಗ ಅದನ್ನು ತಿಳಿದುಕೊಳ್ಳುವುದು ಬಹಳ ಅವಶ್ಯಕ.

ಭಗತ್ ಸಿಂಗ್: ಕಾಲದ ಹಣೆಯ ಮೇಲೆ ಹೊಳೆಯುವ ಸಿಂಧೂರ:

ತನ್ನ ಮರಣದಂಡನೆಗೆ ಕೆಲವು ದಿನಗಳ ಹಿಂದೆ, 1931ರ ಫೆಬ್ರವರಿ 2ರಂದು ಜೈಲಿನಿಂದ ಪ್ರಕಟವಾದ ಭಗತ್ ಸಿಂಗ್ ಅವರ ಲೇಖನದಲ್ಲಿ, "ನಮಗೆ ಸಮಾಜವಾದಿ ಕ್ರಾಂತಿ ಬೇಕು. ಅದಕ್ಕೂ ಮೊದಲು ರಾಜಕೀಯ ಕ್ರಾಂತಿ ಬರಬೇಕು. ರಾಜಕೀಯ ಕ್ರಾಂತಿ ಎಂದರೆ ಬ್ರಿಟಿಷ್ ಆಡಳಿತಗಾರರಿಂದ ಭಾರತೀಯರ ಕೈಗೆ ಅಧಿಕಾರ ವರ್ಗಾವಣೆ ಮಾತ್ರವಲ್ಲ. ವಿಶಾಲವಾದ ಜನಪ್ರಿಯ ಬೆಂಬಲ ಹೊಂದಿರುವ ಕ್ರಾಂತಿಕಾರಿ ಪಕ್ಷದ ಕೈಗೆ ಅಧಿಕಾರ ಬರಬೇಕು. ಅದರ ನಂತರ, ನಾವು ಸಮಾಜವಾದಿ ಆಧಾರದ ಮೇಲೆ ಇಡೀ ಸಮಾಜದ ಪುನರ್ನಿರ್ಮಾಣವನ್ನು ಕೈಗೊಳ್ಳಬೇಕು." ಎಂದು ಹೇಳಿದ್ದಾರೆ. ಸ್ವಾತಂತ್ರ್ಯದ ನಂತರದ ಭಾರತದ ನಿರ್ಮಾಣದ ಕುರಿತು ಭಗತ್ ಸಿಂಗ್ ಅವರ ಅಭಿಪ್ರಾಯಗಳಿವು.

ಭಗತ್ ಸಿಂಗ್ ಅವರ ಈ ಹೇಳಿಕೆಗಳು ಅವರ ಆಳವಾದ ಆಲೋಚನೆಗಳ ಸಂಕೇತವಾಗಿದೆ. ಭಗತ್ ಸಿಂಗ್ ಅವರನ್ನು ಕೇವಲ ಸ್ವಾತಂತ್ರ್ಯ ಹೋರಾಟಗಾರ ಮತ್ತು ಬ್ರಿಟಿಷ್ ಆಡಳಿತಗಾರರನ್ನು ಎದುರಿಸಿದ ಧೈರ್ಯಶಾಲಿ ಎಂದಷ್ಟೇ ನೋಡುವುದು ಅಪೂರ್ಣವಾಗುತ್ತದೆ ಎಂಬುದನ್ನು ಅವರ ಈ ಹೇಳಿಕೆಗಳು ತೋರಿಸುತ್ತದೆ.

ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವಲ್ಲಿ ಹಿಂದೆ ಬಿದ್ದಿದ್ದೇವೆ

ಭಗತ್ ಸಿಂಗ್ ಅವರಂತಹ ಚಿಂತಕ ಮತ್ತು ಕ್ರಾಂತಿಕಾರಿಯೊಬ್ಬನನ್ನು ನಿರ್ಣಯಿಸುವುದಿರಲಿ, ಇತಿಹಾಸದ ಯಾವುದೇ ವ್ಯಕ್ತಿಯನ್ನು ಪರೀಕ್ಷಿಸಲು ಆಳವಾದ ಅವಲೋಕನದ ಅಗತ್ಯವಿದೆ. ಒಬ್ಬ ವ್ಯಕ್ತಿಯ ಮೂಲಭೂತ ರಚನೆ ಮತ್ತು ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳದೆ ಆತನ ಚಿಂತನೆಯನ್ನು ಪರಿಶೀಲಿಸಿದರೆ, ನಾವು ಸತ್ಯಗಳಿಂದ ಬಹಳ ದೂರ ಹೋಗುತ್ತೇವೆ. ಭಾಗಶಃ ಸತ್ಯಗಳಿಗೆ ಸೀಮಿತವಾಗಿರುತ್ತೇವೆ ಹೊರತು, ಪೂರ್ಣ ಸತ್ಯವನ್ನು ತಿಳಿಯಲಾಗದು. ಭಗತ್ ಸಿಂಗ್ ವಿಷಯದಲ್ಲೂ ಇದೇ ಆಯಿತು. ಇದಕ್ಕೆ ಕಾರಣ ವಸಾಹತುಶಾಹಿ ಆಡಳಿತಗಾರರು ಇಟ್ಟುಕೊಂಡಿದ್ದ ತಪ್ಪಾದ ಅಧಿಕೃತ ದಾಖಲೆಗಳಾಗಿರಬಹುದು, ಸ್ವಾತಂತ್ರ್ಯಾ ನಂತರದ ಆಳುವ ವರ್ಗಗಳು, ಭಗತ್ ಸಿಂಗ್ ಅವರ ವಿಚಾರಗಳ ಹರಡುವಿಕೆಯನ್ನು ತಡೆಯುವ ಉದ್ದೇಶಗಳಾಗಿರಬಹುದು ಅಥವಾ ಬಲಪಂಥೀಯ ಶಕ್ತಿಗಳ ಕುತಂತ್ರವಾಗಿರಬಹುದು. ಕಾರಣಗಳು ಏನೇ ಇರಲಿ, ಭಗತ್ ಸಿಂಗ್ ಅವರನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವಲ್ಲಿ ನಾವು ಹಿಂದೆ ಬಿದ್ದಿದ್ದೇವೆ.

ಪರಿಣಾಮವಾಗಿ, ನಮ್ಮಲ್ಲಿ ಅನೇಕರು ಅವರನ್ನು ಒಬ್ಬ ಮಹಾನ್ ದೇಶಭಕ್ತ, ಹೋರಾಟಗಾರ ಮತ್ತು ತ್ಯಾಗಿ ಎಂದು ನೆನಪಿಸಿಕೊಳ್ಳುತ್ತಾರೆ. ಹೋರಾಟದಲ್ಲಿ ಅವರ ಏಕೈಕ ರಾಜಕೀಯ ಗುರಿ ಬ್ರಿಟಿಷ್ ಆಳ್ವಿಕೆಯಿಂದ ವಿಮೋಚನೆ ಸಾಧಿಸುವುದಾಗಿತ್ತು. ಆದರೆ ಅದರಾಚೆಗಿನ ಅವರ ಸೈದ್ಧಾಂತಿಕ ಅಡಿಪಾಯ ಮತ್ತು ವಿಶ್ವ ದೃಷ್ಟಿಕೋನದ ಬಗ್ಗೆ ಎಷ್ಟು ಜನರಿಗೆ ತಿಳಿದಿದೆ? ದೇಶ ಈಗ ಅದನ್ನು ತಿಳಿದುಕೊಳ್ಳುವುದು ಬಹಳ ಮುಖ್ಯ.

ಯುವ ಕ್ರಾಂತಿಕಾರಿಗಳಾದ ಭಗತ್ ಸಿಂಗ್, ರಾಜಗುರು, ಸುಖದೇವ್, ಅವರನ್ನು ಬ್ರಿಟೀಷರು ಗಲ್ಲಿಗೇರಿಸಿದ ದಿನ ಮಾರ್ಚ್ 23. ಈ ಪ್ರಯುಕ್ತ ಈ ಲೇಖನ.

ನಮಗೆ ಬೌದ್ಧಿಕ ಪರಂಪರೆಯನ್ನು ನೀಡಿದ ಭಗತ್ ಸಿಂಗ್

ಇಂದು ದೇಶದಲ್ಲಿ ಸತ್ಯವನ್ನು ದೂಷಿಸಲಾಗುತ್ತಿದೆ. ಸುಳ್ಳುಗಳು ಕಾಡ್ಗಿಚ್ಚಿನಂತೆ ಹರಡುತ್ತಿವೆ. ಮನುಷ್ಯರು ಮನುಷ್ಯರಾಗಿಯೇ ಮುಂದುವರಿಯಬಹುದಾದ ಪರಿಸ್ಥಿತಿಗಳು ಕಡಿಮೆಯಾಗುತ್ತಿವೆ. ಜನರ ಮನಸ್ಸಿನಲ್ಲಿ ವಂಚನೆ ಮತ್ತು ದ್ವೇಷವನ್ನು ತುಂಬಲಾಗುತ್ತಿದೆ. ದೇಶವನ್ನು ಬಹು ಪ್ರಾಬಲ್ಯ ಮತ್ತು ಅಜ್ಞಾನದ ಮೂಢನಂಬಿಕೆಗಳಿಂದ ರಕ್ಷಿಸಬೇಕಾದ ಮತ್ತು ವಿಜ್ಞಾನವನ್ನು ಉತ್ತೇಜಿಸಬೇಕಾದ ಆಡಳಿತಗಾರರು ಮತ್ತು ಸರ್ಕಾರಗಳೇ ನಾಗರಿಕರನ್ನು ಹಿಂಜರಿಕೆಗೆ ದೂಡುತ್ತಿವೆ. ಇಂದು ನಾಗರಿಕ ಸ್ವಾತಂತ್ರ್ಯಗಳು ಮತ್ತು ಪ್ರಜಾಪ್ರಭುತ್ವವನ್ನು ಮುತ್ತಿಗೆ ಹಾಕಲಾಗುತ್ತಿರುವ ಸಮಯ. ಧರ್ಮವು ರಾಜ್ಯದೊಂದಿಗೆ ಬೇರ್ಪಡಿಸಲಾಗದಂತೆ ಸಂಬಂಧ ಹೊಂದಿರುವ ಮತ್ತು ಧರ್ಮದ ಆಧಾರದ ಮೇಲೆ ರಾಜಕೀಯ ಹೊಂದಾಣಿಕೆಗಳು ಮಾಡಲ್ಪಡುತ್ತಿರುವ ದಿನಗಳಿವು. ನಂಬಿಕೆ ದ್ವೇಷವಾಗಿ ಬದಲಾಗುತ್ತಿದ್ದು, ನಮ್ಮ ಸಂವಿಧಾನದ ಆಶಯವನ್ನೇ ಪ್ರಶ್ನಿಸುತ್ತಿದೆ. ನಮ್ಮ ಪ್ರಜಾಪ್ರಭುತ್ವವು ಹಿಂದೆಂದೂ ಕಂಡಿರದಷ್ಟು ಅಪಾಯದಲ್ಲಿದೆ. ಸಮಾಜದಲ್ಲಿ ಸಾಮರಸ್ಯ ಹಾಳಾಗುತ್ತಿದೆ. ಸಾರ್ವಜನಿಕ ಜೀವನದಲ್ಲಿ ಭಯವು ಸರ್ವೋಚ್ಚವಾಗಿದೆ. ಜನರಲ್ಲಿ ಅಭದ್ರತೆಯ ಭಾವನೆ ಕಾಡುತ್ತಿದೆ. ಸುಳ್ಳಿನ ಅಡಿಪಾಯದ ಮೇಲೆ ಸುಳ್ಳು ಇತಿಹಾಸವನ್ನು ನಿರ್ಮಿಸುವ ಮಧ್ಯಮ-ಧಾರ್ಮಿಕ ರಾಜಕೀಯವು ಸಮಾಜವನ್ನು ದಾರಿ ತಪ್ಪಿಸುತ್ತಿದೆ. ಇದನ್ನು ಪ್ರಶ್ನಿಸಬೇಕಾದ ನಾಗರಿಕ ಸಮಾಜ ಮೌನವಾಗಿ ನೋಡುತ್ತಿದೆ.

ಈ ಇಡೀ ಸಂದರ್ಭವನ್ನು ನಾವು ಹೇಗೆ ನೋಡಬೇಕು? ಹೇಗೆ ನಿಭಾಯಿಸುವುದು? ಜಾತ್ಯತೀತ, ಪ್ರಜಾಸತ್ತಾತ್ಮಕ ಶಕ್ತಿಗಳ ಪಾತ್ರ ಏನಾಗಿರಬೇಕು? ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಬಲ್ಲ ಬೌದ್ಧಿಕ ಪರಂಪರೆಯನ್ನು ಭಗತ್ ಸಿಂಗ್ ನಮಗೆ ನೀಡಿದ್ದಾರೆ. ಇದು ಸಂಪೂರ್ಣವಾಗಿ ಪ್ರಾಯೋಗಿಕ ಮತ್ತು ಸೈದ್ಧಾಂತಿಕ ಎರಡೂ ಆಗಿದೆ. ಆದ್ದರಿಂದ, ಇಂದಿನ ಪೀಳಿಗೆಗೆ ಭಗತ್ ಸಿಂಗ್ ಅವರನ್ನು ಅಧ್ಯಯನ ಮಾಡುವುದು ಬಹಳ ಮುಖ್ಯ.

"ಜಗತ್ತಿನ ಮಾನವರೆಲ್ಲರೂ ಒಂದೇ, ಯಾರೂ ಯಾರಿಗೂ ಅಪರಿಚಿತರಲ್ಲ"

"ಧಾರ್ಮಿಕ ಮೌಢ್ಯತೆಗಳು, ಮತಾಂಧತೆ ನಮ್ಮ ಪ್ರಗತಿಗೆ ದೊಡ್ಡ ಅಡೆತಡೆಗಳಾಗಿವೆ. ಅವು ದಾರಿಯಲ್ಲಿ ಅನೇಕ ಅಡೆತಡೆಗಳನ್ನು ಸೃಷ್ಟಿಸುತ್ತವೆ. ನಾವು ಅವುಗಳನ್ನು ಪಕ್ಕಕ್ಕೆ ತಳ್ಳಿ ಮುಂದುವರಿಯಬೇಕು. ಎಲ್ಲಾ ಧರ್ಮಗಳಲ್ಲಿಯೂ ಕಂಡುಬರುವ ಮೂಢನಂಬಿಕೆಗಳು, ಮೂಲಭೂತವಾದ ಮತ್ತು ಸಂಕುಚಿತ ಮನೋಭಾವದಿಂದಾಗಿ ಜನರು ಶೋಷಣೆಗೆ ಒಳಗಾಗುತ್ತಿದ್ದಾರೆ" ಎನ್ನುತ್ತಾರೆ ಭಗತ್ ಸಿಂಗ್. ಧರ್ಮವು ಶೋಷಕರ ಕೈಯಲ್ಲಿರುವ ಒಂದು ಸಾಧನ ಎಂದು ಅವರು ಅಂದೇ ಅರಿತಿದ್ದರು. ಅದಕ್ಕಾಗಿಯೇ, 1924ರಲ್ಲಿ, 17ನೇ ವಯಸ್ಸಿನಲ್ಲಿ, ಅವರು "ವಿಶ್ವಮಾನವ ಭ್ರಾತೃತ್ವ" (Universal brotherhood) ಎಂಬ ಅದ್ಭುತವಾದ ಕೃತಿಯನ್ನು ಬರೆದರು. ಅದರಲ್ಲಿ ಅವರು, "ಜಗತ್ತಿನ ಮಾನವರೆಲ್ಲರೂ ಒಂದೇ, ಯಾರೂ ಯಾರಿಗೂ ಅಪರಿಚಿತರಲ್ಲ" ಎಂದು ಹೇಳುತ್ತಾರೆ. "ಕಪ್ಪು-ಬಿಳುಪು, ನಾಗರಿಕರು-ಅನಾಗರಿಕರು, ಆಳುವವರು-ಪ್ರಜೆಗಳು, ಶ್ರೀಮಂತ-ಬಡವ, ಮೇಲ್ಜಾತಿಗಳು-ಅಸ್ಪೃಶ್ಯರು ಎನ್ನುವ ವರ್ಗಗಳು ಇರುವ ಕಾಲದವರೆಗೆ ವಿಶ್ವಮಾನವ ಭ್ರಾತೃತ್ವ ಹೇಗೆ ಸಾಧ್ಯವಾಗುತ್ತದೆ?" ಎಂದು ಪ್ರಶ್ನಿಸಿ, ಇವು ವಿಶ್ವಮಾನವ ಸಹೋದರತ್ವಕ್ಕೆ ಅಡೆತಡೆಗಳು ಎಂದು ಹೇಳಿದರು.

"ಈಗ ಈ ಪ್ರತಿಗಾಮಿ ಶಕ್ತಿಗಳಿಂದಾಗಿ ದೇಶವು ಶೋಚನೀಯ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಒಬ್ಬ ಧಾರ್ಮಿಕ ವ್ಯಕ್ತಿಗೆ ಮತ್ತೊಂದು ಧರ್ಮದ ವ್ಯಕ್ತಿ ಶತ್ರು ಎಂಬಂತಹ ಪರಿಸ್ಥಿತಿ ಇದೆ. ಎದುರಿನ ವ್ಯಕ್ತಿ ಮುಸ್ಲಿಂ ಆಗಿದ್ದರೆ ಸಾಕು ಆತನನ್ನು ಕೊಲ್ಲಲು ಹಿಂದೂಗಳಿಗೆ ಬೇರೆ ಕಾರಣ ಬೇಕಿಲ್ಲ. ಎದುರಿನ ವ್ಯಕ್ತಿ ಹಿಂದೂ ಆದರೆ ಸಾಕು, ಅವನನ್ನು ಕೊಲ್ಲಲು ಮುಸ್ಲಿಮರಿಗೆ ಬೇರೆ ಕಾರಣ ಬೇಕಾಗಿಲ್ಲ. ಅದೇ ರೀತಿ ಸಿಖ್ಖರಿಗೂ ಸಹ. ಈ ಪರಿಸ್ಥಿತಿಯು ಜನರನ್ನು ವಿಭಜಿಸುವುದಲ್ಲದೆ, ಅವರನ್ನು ಒಂದಾಗಿ ಮುನ್ನಡೆಸಲು ಸಾಧ್ಯವೇ? ಇದನ್ನು ತಡೆಯುವುದು ಮತ್ತು ಜಯಿಸುವುದು ಕ್ರಾಂತಿಕಾರಿಗಳ ಕರ್ತವ್ಯ" ಭಗತ್ ಸಿಂಗ್.

ಆ ವಯಸ್ಸಿನಲ್ಲಿ ಯಾರಾದರೂ ಇಷ್ಟೊಂದು ಚಿಂತನಶೀಲರಾಗಿ ಇರುತ್ತಾರೆ ಎಂದು ಊಹಿಸಬಹುದೇ? ಆದರೆ ಭಗತ್ ಸಿಂಗ್‌ಗೆ ಅಂತಹ ಆಲೋಚನೆಗಳಿದ್ದವು ಮಾತ್ರವಲ್ಲ, ಅವುಗಳನ್ನು ಕಾರ್ಯರೂಪಕ್ಕೆ ತರಲು ಜೀವನವನ್ನೇ ಮುಡಿಪಾಗಿಟ್ಟರು. ಮನುಷ್ಯನ ನಿಜವಾದ ಸ್ವಭಾವ ಪ್ರೀತಿ. ಸಹಜೀವನ ಸೌಂದರ್ಯ. ಇಷ್ಟಲ್ಲದೆ ಜಾತಿಯೂ, ಧರ್ಮವೂ ಅಲ್ಲ ಎಂದು ಹೇಳಲು ಬಯಸಿದ್ದರು ಭಗತ್ ಸಿಂಗ್. ಜನಜೀವನದಲ್ಲಿ ಅತ್ಯಂತ ಸ್ವಾಭಾವಿಕವಾಗಿರುವ ಜಾತ್ಯತೀತ ಮೌಲ್ಯಗಳಲ್ಲಿ ಅಚಲವಾದ ವಿಶ್ವಾಸವನ್ನು ಘೋಷಿಸಿದರು.

"ನೌಜವಾನ್ ಭಾರತ್ ಸಭಾ" ಸ್ಥಾಪನೆ

1926ರಲ್ಲಿ "ನೌಜವಾನ್ ಭಾರತ್ ಸಭಾ"ವನ್ನು ಸ್ಥಾಪಿಸುವ ಮೂಲಕ ಭಗತ್ ಸಿಂಗ್ ತಮ್ಮ ವಿಚಾರಗಳಿಗೆ ನಿರ್ಮಾಣ ರೂಪ ನೀಡಿದರು. ಪ್ರಜೆಗಳಿಗಾಗಿ, ಪ್ರಜೆಗಳಿಂದ ಕ್ರಾಂತಿಯನ್ನು ಸಾಧಿಸುವುದು ಸಭಾದ ಗುರಿ ಎಂದು ಘೋಷಿಸಿದರು. ಈ ಗುರಿಯನ್ನು ಸಾಧಿಸುವಲ್ಲಿ ಧರ್ಮವು ನಮ್ಮ ಪ್ರಗತಿಗೆ ಅತಿದೊಡ್ಡ ಅಡಚಣೆಯಾಗಿದೆ ಎಂದು ಅವರು ಸಭಾದ ಪ್ರಣಾಳಿಕೆಯಲ್ಲಿ ನಿರ್ದಿಷ್ಟವಾಗಿ ಹೇಳಿದ್ದಾರೆ. ನಾವು ನಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು, ಒಂದು ಸಾಮಾನ್ಯ ಕಾರ್ಯಸೂಚಿಯೊಂದಿಗೆ ಜಾತ್ಯತೀತ, ಪ್ರಜಾಸತ್ತಾತ್ಮಕ ಆಧಾರದ ಮೇಲೆ ಒಟ್ಟಾಗಿ ಕೆಲಸ ಮಾಡುವ ಮೂಲಕ ಮಾತ್ರವೇ ನಾವು ಪ್ರಗತಿ ಸಾಧಿಸಲು ಸಾಧ್ಯ ಎಂದು ಹೇಳಿದರು. ಧರ್ಮವನ್ನು ರಾಜಕೀಯದಿಂದ ಬೇರ್ಪಡಿಸಿದರೆ ಮಾತ್ರ ಜನರನ್ನು ಒಗ್ಗಟ್ಟಿನಿಂದ ಇಡಲು ಸಾಧ್ಯ ಎಂದು ಅವರು ಸ್ಪಷ್ಟಪಡಿಸಿದರು. ಭಾರತದ ಪ್ರಗತಿಯನ್ನು ಬಯಸುವ ಯಾರಾದರೂ ಇದನ್ನು ಅನುಸರಿಸುತ್ತಾರೆ ಎಂದರು. ಭಾರತವು ಎಲ್ಲರನ್ನೂ ಒಳಗೊಂಡ ಸಹಬಾಳ್ವೆಯ ಸಂಸ್ಕೃತಿ ಎಂದು ಅವರು ಘೋಷಿಸಿದರು. ನಿಜ ಅಲ್ಲವೇ..!

'ಭಾರತ ನನ್ನ ಮಾತೃಭೂಮಿ.' ಎಲ್ಲಾ ಭಾರತೀಯರು ನನ್ನ ಸಹೋದರರು. ನನ್ನ ದೇಶದ ಶ್ರೀಮಂತ ಮತ್ತು ವೈವಿಧ್ಯಮಯ ಪರಂಪರೆಯು ನನಗೆ ಹೆಮ್ಮೆಯ ಮೂಲವಾಗಿದೆ ಎಂದು ನಾವು ನಿರಂತರವಾಗಿ ಪ್ರತಿಜ್ಞೆ ಮಾಡುತ್ತೇವೆ. ದೇಶವು ಶತಮಾನಗಳಿಂದ ಗಳಿಸಿಕೊಂಡಿರುವ ಈ ಮೌಲ್ಯಗಳನ್ನು ಸಂರಕ್ಷಿಸುವುದು ಮತ್ತು ಎತ್ತಿಹಿಡಿಯುವುದು ಕಾಲವು ನಮ್ಮ ಮುಂದೆ ಇಟ್ಟಿರುವ ದೊಡ್ಡ ಸವಾಲಾಗಿದೆ. ಈ ಸವಾಲನ್ನು ಎದುರಿಸಲು ನಮಗೆ ಭಗತ್ ಸಿಂಗ್ ಬೇಕು. ಅವರ ಒಂದು ಸಿದ್ಧಾಂತ ಬೇಕು.

ಭಗತ್ ಸಿಂಗ್ ಅವರನ್ನು ಅರ್ಥಮಾಡಿಕೊಳ್ಳಲು, ಅವರ ಕೃತಿಗಳನ್ನು ಓದಬೇಕು. ವಿಶೇಷವಾಗಿ ಜೈಲು ನೋಟ್‌ಬುಕ್ ನಮ್ಮ ಮುಖ್ಯ ಸಂಪನ್ಮೂಲವಾಗಿದೆ. ಅವರು ಸಾಧಿಸಿದ ಸೈದ್ಧಾಂತಿಕ ಪರಿಪಕ್ವತೆಯನ್ನು ಅರ್ಥಮಾಡಿಕೊಳ್ಳಲು ಇದು ತುಂಬಾ ಉಪಯುಕ್ತವಾಗಿದೆ. ಇತರ ರಾಜಕೀಯ ಕೈದಿಗಳಂತೆ, ಅವರು ಜೈಲಿನಲ್ಲಿದ್ದಾಗ ಆತ್ಮಚರಿತ್ರೆ ಬರೆಯಲಿಲ್ಲ. ಅವರು ಈ ಜಗತ್ತನ್ನು ಅಧ್ಯಯನ ಮಾಡಿದರು. ಈ ಗಾಯಗೊಂಡ ಭೂಮಿಯನ್ನು ಸ್ವತಂತ್ರಗೊಳಿಸಲು ಮಾರ್ಗಗಳನ್ನು ಹುಡುಕಿದರು. ಅನೇಕ ಮಹಾನ್ ವ್ಯಕ್ತಿಗಳ ಬರಹಗಳು ಮತ್ತು ರಾಜಕೀಯ ಸಿದ್ಧಾಂತಗಳನ್ನು ಆಳವಾಗಿ ಪರಿಶೀಲಿಸಿದರು. ನಂತರ ಭಾರತದ ಭವಿಷ್ಯವನ್ನು ಮಾರ್ಕ್ಸ್‌ವಾದದ ಬೆಳಕಿನಲ್ಲಿ ನೋಡಿದರು. ಈ ಬಂಜರು ಭೂಮಿಗೆ ಚೈತನ್ಯ ಪುಟ 6 ಕ್ಕೆ

ಮೇ 20ರಂದು ದೇಶವ್ಯಾಪಿ ಸಾರ್ವತ್ರಿಕ ಮುಷ್ಕರ –ಕೇಂದ್ರ ಕಾರ್ಮಿಕ ಸಂಘಟನೆಗಳ ಕರೆ



“ನಾಲ್ಕು ಕಾರ್ಮಿಕ ಸಂಹಿತೆಗಳನ್ನು ರದ್ದು ಮಾಡಿ; ಭಾರತೀಯ ಕಾರ್ಮಿಕ ಸಮ್ಮೇಳನ ಆಯೋಜಿಸಿ; ಸಾರ್ವಜನಿಕ ವಲಯದ/ಸೇವೆಗಳ ಖಾಸಗೀಕರಣವನ್ನು ನಿಲ್ಲಿಸಿ”

ಮೇ 20ರಂದು ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರ ಮತ್ತು ಅದಕ್ಕೆ ಮೊದಲು ದೇಶಾದ್ಯಂತ ಎರಡು ತಿಂಗಳ ಕಾಲ ಅಭಿಯಾನವನ್ನು ನಡೆಸಲು ಕೇಂದ್ರ ಕಾರ್ಮಿಕ ಸಂಘಗಳು ಮತ್ತು ಸ್ವತಂತ್ರ ವಲಯವಾರು ಒಕ್ಕೂಟಗಳು ಮತ್ತು ಸಂಘಗಳ ವೇದಿಕೆಯು ದೇಶದ ಕಾರ್ಮಿಕರಿಗೆ ಕರೆ ನೀಡಿದೆ. ಮಾರ್ಚ್ 18, 2025ರಂದು ದಿಲ್ಲಿಯಲ್ಲಿ ಆಯೋಜಿಸಿದ್ದ ಕಾರ್ಮಿಕರ ರಾಷ್ಟ್ರೀಯ ಸಮಾವೇಶವು ಅಂಗೀಕರಿಸಿದ ಘೋಷಣೆಯು ಈ ಕರೆಯನ್ನು ನೀಡಿದೆ.

ನಾಲ್ಕು ಕಾರ್ಮಿಕ ಸಂಹಿತೆಗಳನ್ನು ರದ್ದು ಮಾಡಬೇಕು, ಭಾರತೀಯ ಕಾರ್ಮಿಕ ಸಮ್ಮೇಳನ (ಐಎಲ್‌ಸಿ)ವನ್ನು ಆಯೋಜಿಸಬೇಕು ಮತ್ತು ಸಾರ್ವಜನಿಕ ವಲಲಯದ ಉದ್ದಿಮೆಗಳ ಮತ್ತು ಸಾರ್ವಜನಿಕ ಸೇವೆಗಳ ಖಾಸಗೀಕರಣವನ್ನು ನಿಲ್ಲಿಸಬೇಕು ಎಂದು ಸಮಾವೇಶ ಆಗ್ರಹಿಸಿತು.

ಬ್ಯಾಂಕುಗಳು, ವಿಮೆ, ಕಲ್ಲಿದ್ದಲು, ಉಕ್ಕು, ಬಂದರು–ಹಡಗುಕಟ್ಟೆ, ವಿದ್ಯುತ್, ಟೆಲಿಕಾಂ, ಅಂಚೆ, ರೈಲ್ವೆ, ರಕ್ಷಣೆ, ರಸ್ತೆಮಾರ್ಗಗಳು, ಶಿಕ್ಷಣ, ಆರೋಗ್ಯ, ನೀರು, ನಾಗರಿಕ ಸೇವೆಗಳು ಇತ್ಯಾದಿ ಸರ್ಕಾರಿ ಮತ್ತು ಸಾರ್ವಜನಿಕ ವಲಯದ ನೌಕರರು ಮತ್ತು ಕಾರ್ಮಿಕರು, ಖಾಸಗಿ ಔಪಚಾರಿಕ ವಲಯದ ಕಾರ್ಮಿಕರು, ಗುತ್ತಿಗೆ ಕಾರ್ಮಿಕರು, ಅನೌಪಚಾರಿಕ/ಅಸಂಘಟಿತ ವಲಯಗಳ ಕೈಗಾರಿಕಾ ಹಾಗೂ ಗುತ್ತಿಗೆ, ಹೊರಗುತ್ತಿಗೆ ಕಾರ್ಮಿಕರು ಮತ್ತು ತುಂಡು ದರ ಕೆಲಸದಲ್ಲಿರುವ ಸ್ವಯಂ ಉದ್ಯೋಗಿಗಳು, ಗೃಹ ಕಾರ್ಮಿಕರು, ಗಿಗ್ ಮತ್ತು ಆಪ್ ಆಧಾರಿತ ಕಾರ್ಮಿಕರು, ಅಂಗನವಾಡಿ, ಆಶಾ ಮತ್ತು ಮಧ್ಯಾಹ್ನ ಊಟ ಯೋಜನೆಗಳು, ಬೀಡಿ ಮತ್ತು ನಿರ್ಮಾಣ ವಲಯ, ಲೋಡರ್‌ಗಳು–ಅನ್‌ಲೋಡರ್‌ಗಳು ಇತ್ಯಾದಿಗಳ ಸ್ಕೀಮ್ ಕಾರ್ಮಿಕರ ಸಂಘಗಳ ಮುಖಂಡರು ಮತ್ತು ಕಾರ್ಯಕರ್ತರು ಸಮಾವೇಶದಲ್ಲಿ ಭಾಗವಹಿಸಿದ್ದರು.

ಬಿಜೆಪಿ ಸರ್ಕಾರದ ಕಾರ್ಮಿಕ ವಿರೋಧಿ, ರೈತ ವಿರೋಧಿ ಮತ್ತು ಜನ ವಿರೋಧಿ ನೀತಿಗಳನ್ನು ಪ್ರತಿರೋಧಿಸುವಲ್ಲಿ ಒಗ್ಗಟ್ಟನ್ನು ಪ್ರದರ್ಶಿಸಲು ನವದೆಹಲಿಯ ಪ್ಯಾರೆಲಾಲ್ ಭವನದಲ್ಲಿ ಎಲ್ಲಾ ರಾಜ್ಯಗಳಿಂದ ಎಲ್ಲಾ ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಮತ್ತು ವಲಯ ಒಕ್ಕೂಟಗಳ ಪ್ರತಿನಿಧಿಗಳು ಭಾರೀ ಸಂಖ್ಯೆಯಲ್ಲಿ ಸೇರಿದ್ದರು.

ಒಂದು ಕಡೆ ಕಾರ್ಮಿಕ ಸಂಘಗಳು ಸತತವಾಗಿ ಎತ್ತುತ್ತಿರುವ ಬೇಡಿಕೆಗಳಿಗೆ ಒಂದು ದಶಕಕ್ಕೂ ಹೆಚ್ಚು ಕಾಲ ಉದ್ದೇಶಪೂರ್ವಕವಾಗಿ ಕಿವಿಗೊಡದಿರುವ ಕೇಂದ್ರ ಸರಕಾರದ ಖಂಡನೆಯ ದನಿಗಳು ಮತ್ತು ಇನ್ನೊಂದೆಡೆ ಇಂತಹ ಸರಕಾರದ ನೀತಿಗಳ ಸಾಮೂಹಿಕ ತಿರಸ್ಕಾರದ ದನಿಗಳು ಮೊಳಗಿ, 2025ರ ಮೇ 20ರಂದು ಒಂದು ದಿನದ ರಾಷ್ಟ್ರೀಯ ಮುಷ್ಕರಕ್ಕೆ ಸ್ಪಷ್ಟ ಕರೆ ಹೊಮ್ಮಿ ಬಂತು ಎಂದು ಈ ಸಭೆಯ ನಂತರ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಜಂಟಿಯಾಗಿ ನೀಡಿದ ಹೇಳಿಕೆಯಲ್ಲಿ ತಿಳಿಸಿವೆ.

ಈ ಸಮಾವೇಶವು ದುಡಿಯುವ ಜನರಿಗೆ ಮತ್ತು ದೇಶದ ಒಟ್ಟಾರೆ ಆರ್ಥಿಕ ಯೋಗಕ್ಷೇಮಕ್ಕೆ ಹಾನಿಕಾರಕವಾದ ಏಕಸ್ವಾಮ್ಯ ಮತ್ತು ಒಬ್ಬಿಬ್ಬ ದೊಡ್ಡ ಬಂಡವಾಳಶಾಹಿಗಳ ಸೃಷ್ಟಿ, ಬಂಟ ಬಂಡವಾಳಶಾಹಿಗಳ ಪರವಾದ ನಿರ್ಲಜ್ಜ ನೀತಿಗಳ ಮೇಲೆ ಕಟುವಾದ ದಾಳಿಯನ್ನು ಮಾಡಿತು. ಕೇಂದ್ರ ಸರ್ಕಾರವು ದುಡಿಯುವ ಜನಸಾಮಾನ್ಯರ ಐಕ್ಯ ಸಮರಘೋಷಕ್ಕೆ ಮಣಿಯದೆ ಮುಂದುವರಿಯಲು ಸಾಧ್ಯವಿಲ್ಲ ಎಂಬ ದೃಢ ಸಂದೇಶವನ್ನು ಸಮಾವೇಶವು ನಿಸ್ಸಂದಿಗ್ಧವಾದ ಧ್ವನಿ ಮತ್ತು ಅಚಲವಾದ ದೃಢನಿಶ್ಚಯದಿಂದ ರವಾನಿಸಿತು, ಭಾರತದ ದುಡಿಯುವ ಜನರು, ನಿಜವಾದ ಸಂಪತ್ತು ತಯಾರಕರು ಬಂಟ ಬಂಡವಾಳಶಾಹಿಗಳು ತಮ್ಮ ಸೃಷ್ಟಿಯ ಲೂಟಿಗೆ ಅವಕಾಶ ಕೊಡುವುದಿಲ್ಲ ಎಂದು ಸಮಾವೇಶವು ಒತ್ತಿಹೇಳಿತು ಎಂದು ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಜಂಟಿ ಹೇಳಿಕೆ ತಿಳಿಸಿದೆ.

ಸರ್ಕಾರದ ಸವಾಲನ್ನು ಸ್ವೀಕರಿಸಲು ದುಡಿಯುವ ಜನರು ಸಿದ್ಧರಾಗಬೇಕು ಎಂದು ಕರೆ ನೀಡಿದ ಈ ಸಮಾವೇಶವು, ಮೇ 20, ಇನ್ನು ಮುಂದೆ ಕಾರ್ಮಿಕರು ಮತ್ತು ರೈತರ ರಾಷ್ಟ್ರವ್ಯಾಪಿ ನಿರ್ಣಾಯಕ ಹೋರಾಟಗಳ ಸರಣಿಗೆ ಚಾಲನೆ ನೀಡುವ ವೇದಿಕೆಯಾಗಲಿದೆ. ಶೋಷಣೆ, ಆಳವಾಗುತ್ತಿರುವ ಆದಾಯ ಅಸಮಾನತೆ, ಸಾಂವಿಧಾನಿಕ ಹಕ್ಕುಗಳ ನಿರಾಕರಣೆ ಮತ್ತು ಭಾರತದ ಜನರ ಮೇಲೆ ಆಗುತ್ತಿರುವ ಒಟ್ಟಾರೆ ಅನ್ಯಾಯವನ್ನು ಹೊಸ ಶಕ್ತಿಯಿಂದ ಎದುರಿಸಲಾಗುವುದು ಎಂದು ಸಾರಿತು.

ಕಾರ್ಮಿಕ ಸಂಹಿತೆಗಳನ್ನು ರದ್ದುಗೊಳಿಸುವ ತನ್ನ ಬಹುದಿನಗಳ ಆಗ್ರಹವನ್ನು ಪುನರುಚ್ಚರಿಸುವುದರ ಜೊತೆಗೆ, ತನ್ನ 17 ಅಂಶಗಳ ಆಗ್ರಹಗಳ ಪಟ್ಟಿಯನ್ನು ಕಾರ್ಮಿಕರ ರಾಷ್ಟ್ರೀಯ ಸಮಾವೇಶದ ಘೋಷಣೆಯು ಪುನರುಚ್ಚರಿಸಿತು. ಅಲ್ಲದೆ ನವ ಉದಾರವಾದದ ವಿನಾಶಕಾರಿ ನೀತಿಗಳಿಗೆ ಪರ್ಯಾಯವನ್ನು ಸಹ ಸೂಚಿಸಿದ ಸಮಾವೇಶವು ಧರ್ಮ, ಪ್ರದೇಶ, ಜಾತಿ, ಸಂಸ್ಕೃತಿ, ಭಾಷೆ ಇತ್ಯಾದಿಗಳ ಆಧಾರದ ಮೇಲೆ ಕಾರ್ಮಿಕರನ್ನು ವಿಭಜಿಸುವ ಎನ್‌ಡಿಎ ಸರ್ಕಾರದ ಎಲ್ಲಾ ಕೊಳಕು ಪ್ರಯತ್ನಗಳನ್ನು ವಿಫಲಗೊಳಿಸುವುದಾಗಿಯೂ ಸಾರಿತು.

ಭಗತ್ ಸಿಂಗ್: ಕಾಲದ ಹಣೆಯ ಮೇಲೆ... ಪುಟ 5 ರಿಂದ

ತುಂಬಲು ಅಗತ್ಯವಾದ ಸಿದ್ಧಾಂತವನ್ನು ಅವರು ಅಭಿವೃದ್ಧಿಪಡಿಸಿದರು. "ಶೋಷಣೆ, ದಬ್ಬಾಳಿಕೆ ಮತ್ತು ಅಸಮಾನತೆ ಮುಕ್ತ ಸಮಾಜ ಸ್ಥಾಪನೆಗೆ ನಾವು ನಮ್ಮ ಜನರನ್ನು ಸಿದ್ಧಪಡಿಸಬೇಕು. ಈ ಕ್ರಾಂತಿಯ ಬೀಜಗಳನ್ನು ಬಿತ್ತಲು, ನಾವು ಪ್ರಸ್ತುತ ಎಲ್ಲಾ ಕಳೆಗಳನ್ನು ನಾಶಪಡಿಸಬೇಕು. ನಾವು ಮುಳ್ಳುಗಳನ್ನು ಬೇರುಸಹಿತ ಕಿತ್ತು ಸುಡಬೇಕು. ನಾವು ಬಂಡೆಗಳನ್ನು ಜಲ್ಲಿಕಲ್ಲುಗಳಾಗಿ ಒಡೆಯಬೇಕು. ಬಿದ್ದವರನ್ನು ಮೇಲೆತ್ತಬೇಕು. ಅರಾಜಕತಾವಾದಿಗಳಿಗೆ ನಾವು ಸಭ್ಯತೆಯನ್ನು ಕಲಿಸಬೇಕು. ನಾವು ದುಡಿಯುವ ಜನರನ್ನು ಒಗ್ಗೂಡಿಸಬೇಕು. ಇದಕ್ಕೆ ಅಡ್ಡಿಯಾಗಿರುವ ಜಾತಿ ಮತ್ತು ಧರ್ಮದ ಗೋಡೆಗಳನ್ನು ಕೆಡವಬೇಕು" ಎಂದು ಅವರು ನಿರ್ದೇಶಿಸಿದರು.

ಜಾತಿವಾದ ಮತ್ತು ಧರ್ಮದ ಬಲೆಗಳಿಗೆ ಬೀಳದಂತೆ ಹೇಳಬೇಕು

ಈ ಗುರಿಯನ್ನು ಸಾಧಿಸಲು ಏನು ಮಾಡಬೇಕೆಂದು ಅವರು ವಿವರಿಸಿದರು. "ಜನರು ತಮ್ಮೊಳಗೆ ಜಗಳವಾಡಬಾರದು, ಬದಲಾಗಿ ತಮ್ಮಲ್ಲಿ ಒಂದು ವರ್ಗ ಮಾರ್ಗವನ್ನು ಸೃಷ್ಟಿಸಿಕೊಳ್ಳಬೇಕು. ಕಾರ್ಮಿಕರು ಮತ್ತು ರೈತರಿಗೆ ತಮ್ಮ ಮೊದಲ ಶತ್ರು ಬಂಡವಾಳಶಾಹಿ ಎಂದು ಹೇಳಬೇಕು. ಅವರು ಸೃಷ್ಟಿಸುವ ಜಾತಿವಾದ ಮತ್ತು ಧರ್ಮದ ಬಲೆಗಳಿಗೆ ಬೀಳದಂತೆ ಅವರಿಗೆ ವಿವರಿಸಬೇಕು. ಅವರು ಯಾವುದೇ ಜಾತಿ, ಧರ್ಮ ಅಥವಾ ಜನಾಂಗಕ್ಕೆ ಸೇರಿದವರಾಗಿದ್ದರೂ, ಎಲ್ಲರಿಗೂ ಒಂದೇ ರೀತಿಯ ಹಕ್ಕುಗಳಿವೆ ಎಂದು ಜನರಿಗೆ ಹೇಳಬೇಕು. ಆ ಹಕ್ಕುಗಳು ಅವರ ಒಗ್ಗಟ್ಟಿನಲ್ಲಿವೆ ಮತ್ತು ಅವರ ಕಲ್ಯಾಣವು ಅಧಿಕಾರವನ್ನು ತಮ್ಮ ಕೈಯಲ್ಲಿ ವಶಪಡಿಸಿಕೊಳ್ಳುವುದರಲ್ಲಿದೆ ಎಂದು ಅವರಿಗೆ ಅರ್ಥಮಾಡಿಸಬೇಕು" ಎಂದು ಅವರು ಹೇಳಿದರು.

ಕ್ರಾಂತಿಯೆಂದರೆ ಬಾಂಬು, ಬಂದೂಕುಗಳ ಆರಾಧನೆಯಲ್ಲ

ಬಂಡವಾಳಶಾಹಿ ಪ್ರಭುತ್ವಗಳ್ಯಾವುವೂ ಪ್ರಜೆಗಳನ್ನು ಜಾಗೃತರನ್ನಾಗಿ ಮಾಡಲು ಇಚ್ಛಿಸುವುದಿಲ್ಲ.ಮೇಲಾಗಿ ನಿರ್ದಯವಾಗಿ ನಿಗ್ರಹಿಸುತ್ತಾರೆ. ಆದ್ದರಿಂದ, ಈ ಪರಿಸ್ಥಿತಿಯನ್ನು ಬದಲಾಯಿಸಬೇಕಾದರೆ ಕ್ರಾಂತಿಯ ಮೂಲಕ ನಾವು ಅಧಿಕಾರವನ್ನು ವಶಪಡಿಸಿಕೊಳ್ಳಬೇಕು ಎನ್ನುತ್ತಾರೆ ಭಗತ್ ಸಿಂಗ್. ಕ್ರಾಂತಿಯೆಂದರೆ ಬಾಂಬು, ಬಂದೂಕುಗಳ ಆರಾಧನೆಯಲ್ಲ. ಅಲ್ಲಿ ಹಿಂಸೆ, ರಕ್ತಪಾತಕ್ಕೆ ಜಾಗವಿಲ್ಲ. ಅನ್ಯಾಯ, ಅಸಮಾನತೆ, ಶೋಷಣೆಯ ತಳಹದಿಯ ಮೇಲೆ ಕಟ್ಟಲ್ಪಟ್ಟಿರುವ ವ್ಯವಸ್ಥೆಯ ಅಮೂಲಾಗ್ರ ಬದಲಾವಣೆಯೇ ಕ್ರಾಂತಿ" ಎಂದು ಹೇಳಿದರು ಭಗತ್ ಸಿಂಗ್.


ಕೆಲವು ಸಂದರ್ಭಗಳಲ್ಲಿ, ಅವು ಕೂಡಾ ಗುರಿಯನ್ನು ಸಾಧಿಸುವ ಸಾಧನಗಳಾಬಹುದು. ಅಷ್ಟೇ ವಿನಃ ಅದೇ ಕ್ರಾಂತಿ ಎಂದು ಹೇಳಲಾಗದು. ಕ್ರಾಂತಿಯೆಂದರೆ ನಿಜವಾದ ಅರ್ಥ ಉತ್ತಮ ಬದಲಾವಣೆಗಾಗಿ ನಡೆಯುವ ಹೋರಾಟವಾಗಿದೆ. ಹಳೆಯದರಿಂದ ಹೊಸದಕ್ಕೆ ಪ್ರಯಾಣ.

ಮಾನವ ಪ್ರಜ್ಞೆಯ ಪ್ರತಿಗಾಮಿ ಶಕ್ತಿಗಳನ್ನು ತುಳಿದು ಪ್ರಗತಿ ಸಾಧಿಸುವುದೇ ಕ್ರಾಂತಿ ಎಂದು ಹೇಳಿದರು ಭಗತ್ ಸಿಂಗ್. "ಈಗ ಈ ಪ್ರತಿಗಾಮಿ ಶಕ್ತಿಗಳಿಂದಾಗಿ ದೇಶವು ಶೋಚನೀಯ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಒಬ್ಬ ಧಾರ್ಮಿಕ ವ್ಯಕ್ತಿಗೆ ಮತ್ತೊಂದು ಧರ್ಮದ ವ್ಯಕ್ತಿ ಶತ್ರು ಎಂಬಂತಹ ಪರಿಸ್ಥಿತಿ ಇದೆ. ಎದುರಿನ ವ್ಯಕ್ತಿ ಮುಸ್ಲಿಂ ಆಗಿದ್ದರೆ ಸಾಕು ಆತನನ್ನು ಕೊಲ್ಲಲು ಹಿಂದೂಗಳಿಗೆ ಬೇರೆ ಕಾರಣ ಬೇಕಿಲ್ಲ. ಎದುರಿನ ವ್ಯಕ್ತಿ ಹಿಂದೂ ಆದರೆ ಸಾಕು, ಅವನನ್ನು ಕೊಲ್ಲಲು ಮುಸ್ಲಿಮರಿಗೆ ಬೇರೆ ಕಾರಣ ಬೇಕಾಗಿಲ್ಲ. ಅದೇ ರೀತಿ ಸಿಖ್ಖರಿಗೂ ಸಹ. ಈ ಪರಿಸ್ಥಿತಿಯು ಜನರನ್ನು ವಿಭಜಿಸುವುದಲ್ಲದೆ, ಅವರನ್ನು ↗

ಕ್ಷೇತ್ರ ಮರುವಿಂಗಡಣೆ ನ್ಯಾಯಯುತ ಪ್ರಕ್ರಿಯೆಯಾಗಲಿ

ಪ್ರಕಾಶ್ ಕಾರಟ್

2026ನೇ ವರ್ಷ ಹತ್ತಿರ ಬರುತ್ತಿರುವಂತೆ, ಸಂಸತ್ತು ಮತ್ತು ವಿಧಾನಸಭೆ ಕ್ಷೇತ್ರಗಳ ಮರುವಿಂಗಡಣೆ ವಿಚಾರ ಸಾರ್ವಜನಿಕರ ಗಮನವನ್ನು ಸೆಳೆಯುತ್ತಿದೆ ಹಾಗೂ ವಿವಾದವೂ ಸೃಷ್ಟಿಯಾಗುತ್ತಿದೆ. ಕ್ಷೇತ್ರಗಳ ಸಂಖ್ಯೆಯ ಸ್ಥಗಿತ್ಯ (ಫ್ರೀಜ್) ಕೊನೆಗೊಳ್ಳುವ ವರ್ಷ ಇದಾಗಿದೆ. ಹಾಗೂ 2026ರ ನಂತರ ಪ್ರಥಮ ಜನಗಣತಿಯ ಬೆನ್ನಲ್ಲಿ ಮರುವಿಂಗಡಣೆಯ ಮುಂದಿನ ಸುತ್ತನ್ನು ನಡೆಸಬೇಕಾದ ವರ್ಷವಿದು. 1976ರಲ್ಲಿ ತುರ್ತುಪರಿಸ್ಥಿತಿ ವೇಳೆ ತರಲಾದ ಸಂವಿಧಾನದ 42ನೇ ತಿದ್ದುಪಡಿ ಮೂಲಕ ಮರುವಿಂಗಡಣೆಯನ್ನು ಆರಂಭದಲ್ಲಿ ಫ್ರೀಜ್ ಮಾಡಲಾಗಿತ್ತು. ಅದರ ನಂತರ, ವಾಜಪೇಯಿ ಸರಕಾರದಡಿ ಸ್ಥಗಿತತೆಯನ್ನು 2026ರ ವರೆಗೆ ವಿಸ್ತರಿಸಲಾಗಿತ್ತು.



ಕ್ಷೇತ್ರ ಮರುವಿಂಗಡಣೆ ಕುರಿತು ಸಂವಿಧಾನದಲ್ಲಿ ಎರಡು ಅಂಶಗಳು ಅಡಕವಾಗಿವೆ:

1) ಪ್ರತಿ ರಾಜ್ಯದ ಜನಸಂಖ್ಯೆಯ ಅನುಗುಣವಾಗಿ, ಪ್ರತಿ ದಶಕಕ್ಕೊಮ್ಮೆ ನಡೆಯುವ ಜನಗಣತಿಯ ನಂತರ ರಾಷ್ಟ್ರೀಯ ಒಟ್ಟು ಸಂಖ್ಯೆಯ ಅನುಪಾತದಲ್ಲಿ ಇರುವಂತೆ ಲೋಕಸಭೆ ಕ್ಷೇತ್ರಗಳ ಸಂಖ್ಯೆಯನ್ನು ಪರಿಷ್ಕರಿಸುವುದು. ಅಲ್ಲದೆ, ಅನುಗುಣವಾಗಿ ಪ್ರತಿ ರಾಜ್ಯದ ವಿಧಾನಸಭೆ ಕ್ಷೇತ್ರಗಳ ಸಂಖ್ಯೆಯನ್ನು ಹೊಂದಾಣಿಕೆ ಮಾಡುವುದು.

2) ಸಂಸತ್ ಮತ್ತು ವಿಧಾನಸಭೆ ಕ್ಷೇತ್ರಗಳ ಪ್ರಾದೇಶಿಕ ಗಡಿಗಳನ್ನು ಮರುರೂಪಿಸುವುದು. ಅವುಗಳು ಜನಸಂಖ್ಯೆಗೆ ಸಮನಾಗಿ ಹಾಗೂ ತುಲನಾತ್ಮಕವಾಗಿರುವಂತೆ ಖಾತರಿಪಡಿಸುವುದು ಅದರ ಉದ್ದೇಶವಾಗಿದೆ.

ದಕ್ಷಿಣ ರಾಜ್ಯಗಳ ಆಕ್ಷೇಪಣೆಯೆಂದರೆ

1976ರ ಸಾಂವಿಧಾನಿಕ ತಿದ್ದುಪಡಿ ಮತ್ತು ಅದರ ನಂತರ 2001ರಲ್ಲಿ ವಾಜಪೇಯಿ ಸರಕಾರದ ಅವಧಿಯಲ್ಲಿ ಮಾಡಲಾದ ತಿದ್ದುಪಡಿಯ ಕಾರಣದಿಂದ, 1981, 1991 ಮತ್ತು 2001ರ ದಶವಾರ್ಷಿಕ ಜನಗಣತಿಯ ನಂತರ ಮರುವಿಂಗಡಣೆಗೆ ಯಾವುದೇ ಆಯೋಗಗಳನ್ನು ನೇಮಿಸಲಾಗಿಲ್ಲ. 2026ರಲ್ಲಿ ಫ್ರೀಜ್ ಕೊನೆಗೊಳ್ಳುವುದರಿಂದ ಸಂವಿಧಾನದ ನಿಯಮಗಳ ಪ್ರಕಾರ ಮರುವಿಂಗಡಣೆ ಮಾಡುವುದು ಅಗತ್ಯವಾಗಿರುವ ವಿಚಾರ ಈಗ ಮುನ್ನೆಲೆಗೆ ಬಂದಿದೆ. ಇತ್ತೀಚಿನ ಜನಸಂಖ್ಯೆ ಪ್ರಕಾರ ಕ್ಷೇತ್ರ ಮರುವಿಂಗಡಣೆ ಮಾಡುವುದರಿಂದ ಸಂಸತ್ತಿನಲ್ಲಿ ದಕ್ಷಿಣ ರಾಜ್ಯಗಳಿಗೆ ಪ್ರಾತಿನಿಧ್ಯ ಕಡಿಮೆಯಾಗಲಿದೆ ಎನ್ನುವುದು ಮೊದಲ ಆಕ್ಷೇಪಣೆಯಾಗಿದೆ.

ರಾಜ್ಯಗಳ ಜನಸಂಖ್ಯೆ ಬೆಳವಣಿಗೆ ದರದಲ್ಲಿ ವೈವಿಧ್ಯತೆಯಿರುವುದರಿಂದ ಈ ಅಸಮಾನತೆ ಉಂಟಾಗಿದೆ. ಕೆಲವು ರಾಜ್ಯಗಳು, ಪರಿಣಾಮಕಾರಿ ಜನಸಂಖ್ಯಾ ನಿಯಂತ್ರಣ ಕ್ರಮಗಳ ಮೂಲಕ ಜನಸಂಖ್ಯೆ ಬೆಳವಣಿಗೆಯಲ್ಲಿ ತೀವ್ರ ಕುಸಿತ ಕಂಡಿವೆ. ಅದೇ ವೇಳೆ ಇತರ ರಾಜ್ಯಗಳ ಜನಸಂಖ್ಯೆಯಲ್ಲಿ ಭಾರಿ ಬೆಳವಣಿಗೆಯಾಗಿದೆ. ಅದರ ಪರಿಣಾಮವಾಗಿ, ಜನಸಂಖ್ಯೆಯನ್ನು ಯಶಸ್ವಿಯಾಗಿ ನಿಯಂತ್ರಿಸಿದ್ದಕ್ಕೆ ಅಂಥ ರಾಜ್ಯಗಳು ಶಿಕ್ಷೆ ಅನುಭವಿಸಬೇಕಾಗಿದೆ. ಜನಸಂಖ್ಯೆ ನಿಯಂತ್ರಿಸದ ರಾಜ್ಯಗಳಿಗೆ ಹೆಚ್ಚುವರಿ ಸೀಟುಗಳ ಬಹುಮಾನ ಸಿಗಲಿದೆ. ಪಂಜಾಬ್, ಒಡಿಶಾ, ಪಶ್ಚಿಮ ಬಂಗಾಳ, ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡ ರಾಜ್ಯಗಳು ಕೂಡ ಕೆಲವು ಸ್ಥಾನಗಳನ್ನು ಕಳೆದುಕೊಳ್ಳಲಿವೆ. ಈ ಕಾರಣಕ್ಕಾಗಿಯೇ ಜನಸಂಖ್ಯೆ ನಿಯಂತ್ರಣದಲ್ಲಿ ಮುಂಚೂಣಿಯಲ್ಲಿರುವ ದಕ್ಷಿಣದ ರಾಜ್ಯಗಳು ಕ್ಷೇತ್ರಗಳ ಮರುವಿಂಗಡಣೆಗೆ ಜನಸಂಖ್ಯೆಯ ಅಂಕಿಅಂಶಗಳನ್ನು ಬಳಸುವುದನ್ನು ಬಲವಾಗಿ ವಿರೋಧಿಸುತ್ತಿವೆ.

ಅಸಮಾನ ಹಂಚಿಕೆಗೆ ವಿರೋಧ

ವ`ಾ ದ,`್ಯ ವ`ಿ ದ`ಲ್ಲಿ ವರದಿಯಾಗಿರುವಂತೆ, ಲೋಕಸಭೆಯ ಒಟ್ಟು ಸ್ಥಾನಗಳು ಕೂಡ ಈಗಿನ 543ರಿಂದ 848ಕ್ಕೆ ಏರಿದರೂ ಜನಸಂಖ್ಯೆ ಆಧಾರಿತ ಕ್ಷೇತ್ರ ಮರುವಿಂಗಡಣೆಯಾದಲ್ಲಿ ದಕ್ಷಿಣದ ಐದು ರಾಜ್ಯಗಳು ಒಟ್ಟು 40 ಹೆಚ್ಚುವರಿ ಸ್ಥಾನಗಳನ್ನು ಪಡೆಯಲಿವೆ. ಆದರೆ, ಉತ್ತರ ಪ್ರದೇಶ ರಾಜ್ಯವೊಂದೇ 63 ಸ್ಥಾನ ಹಾಗೂ ಬಿಹಾರ 39 ಕ್ಷೇತ್ರಗಳನ್ನು ಹೆಚ್ಚುವರಿಯಾಗಿ ಗಳಿಸಲಿವೆ. ದಕ್ಷಿಣದ ರಾಜ್ಯಗಳು ವಿರೋಧಿಸುತ್ತಿರುವುದು ಈ ಅಸಮಾನ ಹಂಚಿಕೆಯನ್ನೇ.

ಇತ್ತೀಚಿನ ಜನಗಣತಿ ಅಂಕಿಸಂಖ್ಯೆ ಆಧರಿಸಿದ ಕ್ಷೇತ್ರ ಮರುವಿಂಗಡಣೆಗೆ ಬಂದಿರುವ ಆಕ್ಷೇಪಣೆಗಳಿಗೆ ಪ್ರತಿಕ್ರಿಯೆಯಾಗಿ ಮಾತನಾಡಿರುವ ಕೇಂದ್ರ ಗೃಹ ಸಚಿವ ಅಮಿತ್ ಷಾ, ದಕ್ಷಿಣದ ರಾಜ್ಯಗಳು ಸೀಟು ಕಳೆದುಕೊಳ್ಳುವುದಿಲ್ಲ; ಆದರೆ ಪ್ರಮಾಣಿತ (ಪ್ರೊ–ರೇಟ್) ಸ್ಥಾನಮಾನದ ಆಧಾರದಲ್ಲಿ ಹೆಚ್ಚುವರಿ ಸ್ಥಾನಗಳನ್ನು ಪಡೆಯಲಿವೆ ಎಂದು ಹೇಳಿದ್ದಾರೆ. ಆದರೆ, ಪ್ರೊ–ರೇಟಾ ಲೆಕ್ಕಾಚಾರವು ಪ್ರಸಕ್ತ ಸೀಟುಗಳ ಆಧಾರದಲ್ಲಿ ಇರುತ್ತದೋ ಅಥವಾ ಇತ್ತೀಚಿನ ಜನಸಂಖ್ಯೆ ಆಧಾರದಲ್ಲಿ ಇರುತ್ತದೆಯೋ ಎಂಬುದನ್ನು ಅವರ ಹೇಳಿಕೆ ಸ್ಪಷ್ಟಪಡಿಸದೇ ಇರುವುದರಿಂದ ಅದು ಅಸ್ಪಷ್ಟವಾಗಿಯೇ ಉಳಿದಿದೆ. ಒಂದು ವೇಳೆ ಈಚಿನ ಜನಸಂಖ್ಯೆ ಆಧಾರದಲ್ಲೇ ಮರುವಿಂಗಡಣೆ ಆದ ಪಕ್ಷದಲ್ಲಿ ಉತ್ತರದ ರಾಜ್ಯಗಳು ಏರಿಕೆಯಾದ ಸ್ಥಾನಗಳಲ್ಲಿ ಅಸಮಾನ ಪಾಲನ್ನು ಪಡೆಯುವುದು ಖಂಡಿತ.

ಪ್ರಸ್ತುತ ಪರಿಸ್ಥಿತಿಯಲ್ಲಿ ಉತ್ತಮ ವಿಧಾನವೆಂದರೆ

ಸದ್ಯದ ಪರಿಸ್ಥಿತಿಯಲ್ಲಿ, ಪ್ರತಿ ರಾಜ್ಯ ಹಾಲಿ ಹೊಂದಿರುವ ಸ್ಥಾನಗಳ ಆಧಾರದಲ್ಲಿ ಪ್ರೊ–ರೇಟಾ ಏರಿಕೆಯನ್ನು ಅಳವಡಿಸಿಕೊಳ್ಳುವುದು ಉತ್ತಮ ವಿಧಾನವಾಗುತ್ತದೆ. ಜನರಿಗೆ ಉತ್ತಮ ಪ್ರಾತಿನಿಧ್ಯ ಒದಗಿಸುವುದನ್ನು ಖಾತರಿಪಡಿಸುವುದು ಒಟ್ಟು ಸ್ಥಾನಗಳ ಏರಿಕೆಯ ಉದ್ದೇಶವಾಗಿದ್ದರೆ ರಾಜ್ಯಗಳು ಈಗಿರುವ ಸ್ಥಾನಗಳ ಸಂಖ್ಯೆಯನ್ನು ಉಳಿಸಿಕೊಳ್ಳಲು ನೆರವಾಗುವ ಈ ಧೋರಣೆಯನ್ನು ಅನುಸರಿಸುವುದು ಒಳ್ಳೆಯದು. ಈ ವಿಧಾನದಲ್ಲಿ, ಪ್ರತಿ ರಾಜ್ಯಕ್ಕೂ ಜನಸಂಖ್ಯೆ ಬೆಳವಣಿಗೆ ಬದಲಿಗೆ ಹಾಲಿ ಸ್ಥಾನಗಳ ಆಧಾರದಲ್ಲಿ ಹೆಚ್ಚುವರಿ ಸೀಟುಗಳು ಲಭ್ಯವಾಗಲಿದೆ.

ಉದಾಹರಣೆಗೆ ಹೇಳುವುದಾದರೆ, ಒಟ್ಟು ಸಂಖ್ಯೆಯನ್ನು 800ಕ್ಕೆ ಏರಿಸಿದರೆ ಈಗ 543ರಲ್ಲಿ 39 ಸ್ಥಾನ ಹೊಂದಿರುವ ತಮಿಳುನಾಡಿಗೆ ಹೆಚ್ಚುವರಿಯಾಗಿ 18 ಸೀಟುಗಳು ದೊರಕಿ ಒಟ್ಟು ಕ್ಷೇತ್ರಗಳ ಸಂಖ್ಯೆ 57 ಆಗಲಿದೆ. ಅದು ಈಗ ಹೊಂದಿರುವ ಒಟ್ಟಾರೆ ಸ್ಥಾನಗಳ ಅನುಪಾತದಲ್ಲಿಯೂ ಅಷ್ಟೇ ಆಗುತ್ತದೆ. ಈ ಸೂತ್ರದ ಪ್ರಕಾರ, ಕೇರಳಕ್ಕೆ ಈಗಿನ 20 ಸ್ಥಾನಕ್ಕೆ ಅತಿರಿಕ್ತವಾಗಿ 9 ಸ್ಥಾನ ಸಿಕ್ಕಿ ಒಟ್ಟು 29 ಕ್ಷೇತ್ರಗಳಾಗಲಿವೆ. ಈಗ 80 ಸೀಟುಗಳನ್ನು ಹೊಂದಿರುವ ಉತ್ತರ ಪ್ರದೇಶಕ್ಕೆ ಹೆಚ್ಚುವರಿಯಾಗಿ 38 ಸ್ಥಾನ ಲಭಿಸಿ ಒಟ್ಟು 118 ಸ್ಥಾನ ಆಗಲಿದೆ. ಬಿಹಾರಕ್ಕೆ ಹೆಚ್ಚುವರಿಯಾಗಿ 24 ಸೀಟು ಲಭ್ಯವಾಗಿ ಒಟ್ಟು 79 ಆಗಲಿದೆ.

ಇವೆಲ್ಲವೂ ಅವುಗಳು ಈಗ ಹೊಂದಿರುವ ಸ್ಥಾನಗಳ ಅದೇ ಅನುಪಾತದಲ್ಲಿ ಇರಲಿವೆ. ಹೀಗಾಗಿ, ಉತ್ತಮ ಪ್ರಾತಿನಿಧ್ಯಕ್ಕಾಗಿ ಲೋಕಸಭೆ ಸೀಟುಗಳ ಒಟ್ಟು ಸಂಖ್ಯೆಯನ್ನು ಏರಿಸುವಾಗ ಯಾವುದೇ ರಾಜ್ಯವು ಈಗ ಹೊಂದಿರುವ ಸ್ಥಾನಗಳ ಅನುಪಾತದಲ್ಲಿ ಸ್ಥಾನ ಇಳಿಕೆಯ ಸಂತ್ರಸ್ತ ರಾಜ್ಯ ಆಗುವುದಿಲ್ಲ. ಆದರೆ ಈ ಸೂತ್ರದ ಬಗ್ಗೆ ಒಮ್ಮತಕ್ಕೆ ಬರಲು ಸಾಧ್ಯವಾಗದಿದ್ದರೆ ಮರುವಿಂಗಡಣೆ ಪ್ರಕ್ರಿಯೆಯನ್ನು ಇನ್ನೂ 25 ವರ್ಷಗಳು ಮುಂದೂಡುವುದೇ ಉಳಿದಿರುವ ಪರ್ಯಾಯ ಮಾರ್ಗವಾಗಿದೆ.

ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಮಾರ್ಚ್ 22ರಂದು ದಕ್ಷಿಣ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಪಶ್ಚಿಮ ಬಂಗಾಳ, ಒಡಿಶಾ ಮತ್ತು ಪಂಜಾಬ್ ರಾಜ್ಯಗಳ ಪ್ರಮುಖ ರಾಜಕೀಯ ಪಕ್ಷಗಳ ಸಭೆಯನ್ನು ವ್ಯವಸ್ಥೆಗೊಳಿಸಿದ್ದಾರೆ. ಈ ವಿಷಯದ ಬಗ್ಗೆ ಚರ್ಚಿಸಿ ಒಮ್ಮತಕ್ಕೆ ಬರುವುದು ಅದರ ಉದ್ದೇಶವಾಗಿದೆ. ಈ ಜಂಟಿ ಸಭೆ ಕೈಗೊಳ್ಳುವ ನಿಲವು, ಮರುವಿಂಗಡಣೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವಲ್ಲಿ ಒಂದು ಪ್ರಮುಖ ಹೆಜ್ಜೆಯಾಗಬೇಕಿದೆ.

ಅನು: ವಿಶ್ವಾಸ್

↘ ಒಂದಾಗಿ ಮುನ್ನಡೆಸಲು ಸಾಧ್ಯವೇ? ಇದನ್ನು ತಡೆಯುವುದು ಮತ್ತು ಜಯಿಸುವುದು ಕ್ರಾಂತಿಕಾರಿಗಳ ಕರ್ತವ್ಯ" ಎಂದು ಭಗತ್ ಸಿಂಗ್ ಹೇಳುತ್ತಾರೆ. ಅಂದು ಲಾಹೋರ್‌ನಲ್ಲಿ ಭುಗಿಲೆದ್ದ ಕೋಮು ಗಲಭೆಯ ಸಂದರ್ಭದಲ್ಲಿ ಅವರು ಬರೆದ "ಧಾರ್ಮಿಕ ಗಲಭೆಗಳು – ಅವುಗಳ ಪರಿಹಾರಗಳು" ಎಂಬ ಲೇಖನದಲ್ಲಿ ಅವರು ಈ ಎಲ್ಲಾ ವಿಷಯಗಳನ್ನು ಸಮಗ್ರವಾಗಿ ವಿವರಿಸಿದ್ದಾರೆ.

ನೂರು ವರ್ಷಗಳ ನಂತರವೂ ಅದೇ ಪರಿಸ್ಥಿತಿ

ಸರಿಯಾಗಿ ನೂರು ವರ್ಷಗಳ ನಂತರ ಅದೇ ಪರಿಸ್ಥಿತಿ ಇಂದಿಗೂ ದೇಶದಲ್ಲಿ ಮುಂದುವರೆದಿದೆ. ಮೇಲಾಗಿ, ಧಾರ್ಮಿಕ ಮತಾಂಧತೆ ಅಧಿಕಾರದೊಳಗೆ ಬಂದು ಕುಳಿತಿದೆ. ದೇಶಾದ್ಯಂತ ವಿಭಜನೆ, ದ್ವೇಷದ ರಾಜಕೀಯ ಜನರನ್ನು ವಿಭಜಿಸುತ್ತಿದೆ. ಶಾಂತಿ, ಸಾಮರಸ್ಯವನ್ನು ಹಾಳು ಮಾಡುತ್ತಿದೆ. ಮನುವಾದವು ಮನುಷ್ಯನನ್ನು ಮತ್ತೆ ಮಧ್ಯಯುಗಕ್ಕೆ ಹಿಂದಿರುಗಿಸಲು ಪ್ರಯತ್ನಿಸುತ್ತಿದೆ. ದಾರಿಯಲ್ಲಿ ಮುಳ್ಳುಗಳು ಕಾಣಿಸಿದರೆ ಎತ್ತೆಸೆಯುವ, ಕಲ್ಲು ಮುಳ್ಳುಗಳು ಎದುರಾದಾಗ ಅವುಗಳನ್ನು ತೆಗೆದು ನಡೆಯುವ ಮನುಷ್ಯ ಈಗ ಪ್ರಜ್ಞಾಹೀನ ಜೀವಿಯಂತೆ ಬದಲಾಗುತ್ತಿದ್ದಾನೆ. ಮನುಷ್ಯ ಮನುಷ್ಯನಾಗಿ ಬದುಕುವುದಕ್ಕೆ ಅಗತ್ಯವಾದ ಸಮಾಜದ ಪರಿಸರವೇ ಇಲ್ಲದಂತಾಗುತ್ತಿದೆ. ಈ ಪರಿಸರವನ್ನು ಆವರಿಸಿರುವ ಕತ್ತಲೆಯನ್ನು ಭೇದಿಸುವ ಬೆಳಕನ್ನು ಹೊತ್ತವನು ಭಗತ್ ಸಿಂಗ್. ಅದಕ್ಕಾಗಿಯೇ ಈಗ ನಮಗೆ ಭಗತ್ ಸಿಂಗ್ ಬೇಕು. ಈ ಸ್ಥಿತಿಯನ್ನು ಅರ್ಥಮಾಡಿಕೊಳ್ಳಲು, ನಿವಾರಿಸಲು ಅಗತ್ಯವಾದ ತಿಳುವಳಿಕೆ ಮತ್ತು ಅರಿವನ್ನು ಭಗತ್ ಸಿಂಗ್ ನಮಗೆ ನೀಡಿದ್ದಾರೆ. ಅವುಗಳನ್ನು ಜನರಿಗೆ ತಲುಪಿಸಬೇಕು. ದ್ವೇಷ ಬೀದಿಗಳಲ್ಲಿ ಹರಡುತ್ತಿರುವ ಸಮಯದಲ್ಲಿ... ಪ್ರೀತಿಯನ್ನು ಎಲ್ಲೆಡೆ ಹರಡಬೇಕು. ರಕ್ತಸಿಕ್ತವಾದ ಹೃದಯಗಳಿಗೆ ಪ್ರೀತಿಯ ಮುಲಾಮು ಹಚ್ಚಬೇಕು. ನೈತಿಕತೆಗೆ ಮೂಲ ಮಾನವ ಆಗಬೇಕೇ ವಿನಃ, ಧರ್ಮ ಆಗಬಾರದು ಎಂಬುದನ್ನು ಒತ್ತಿ ಹೇಳಬೇಕು. ಭಗತ್ ಸಿಂಗ್ ಇದಕ್ಕೆ ಅಗತ್ಯವಾದ ಮಾರ್ಗದರ್ಶನ ಮತ್ತು ಹೋರಾಡಲು ಶಕ್ತಿಯನ್ನು ಒದಗಿಸುತ್ತಾನೆ. ವಿಧ್ವಂಸವಾದ ಜೀವನಗಳನ್ನು ಕ್ರಾಂತಿಕಾರಿ ಕ್ರಿಯೆಯತ್ತ ಹೇಗೆ ಕೊಂಡೊಯ್ಯಬೇಕೆಂದು ಅವರು ವಿವರಿಸುತ್ತಾರೆ. ಸದಾ ಕಾಲ ಹಣೆಯ ಮೇಲೆ ಹೊಳೆಯುವ ಕೆಂಪು ಸಿಂಧೂರವಾಗಿದ್ದಾರೆ.

ಮುಂದುವರೆಯುತ್ತಿರುವ ಇಸ್ರೇಲಿ ನರಮೇಧದ ಕೃತ್ಯಗಳು: ಮೋದಿ ಸರಕಾರ ಮೌನವಾಗಿರಲು ಸಾಧ್ಯವಿಲ್ಲ–ಪೊಲಿಟ್‌ಬ್ಯುರೊ

ಒಂದೇ ದಿನದಲ್ಲಿ 400ಕ್ಕೂ ಹೆಚ್ಚು ಜನರು, ಹೆಚ್ಚಾಗಿ ಮಹಿಳೆಯರು ಮತ್ತು ಮಕ್ಕಳನ್ನು ಸಾಯಿಸಿರುವ ಗಾಜಾದ ಮೇಲಿನ ಇಸ್ರೇಲ್ ವಾಯುದಾಳಿಗಳನ್ನುಸಿಪಿಐ(ಎಂ) ಪೊಲಿಟ್‌ಬ್ಯುರೊ ತೀವ್ರವಾಗಿ ಖಂಡಿಸಿದೆ. ಈ ಕ್ರಿಮಿನಲ್ ಆಕ್ರಮಣದ ಮೂಲಕ, ಶಾಂತಿಯನ್ನು ತರಬಹುದಾಗಿದ್ದ ಮತ್ತು ಯುದ್ಧವನ್ನು ಕೊನೆಗೊಳಿಸಬಹುದಾಗಿದ್ದ ಎರಡನೇ ಹಂತದ ಕದನ ವಿರಾಮದಿಂದ ತಾನು ಹಿಂದೆ ಸರಿಯುತ್ತಿರುವುದಾಗಿ ಇಸ್ರೇಲ್ ಸೂಚಿಸಿದೆ ಎಂದು ಅದು ಹೇಳಿದೆ.

ಮಾರ್ಚ್ 2 ರಿಂದ ಗಾಜಾಗೆ ಆಹಾರ, ಇಂಧನ, ನೀರು ಮತ್ತು ಔಷಧಗಳ ಎಲ್ಲಾ ಸರಬರಾಜುಗಳ ಸಂಪೂರ್ಣ ದಿಗ್ಬಂಧನದ ಮೇಲೆ, ಈ ಇತ್ತೀಚಿನ ಹತ್ಯಾಕಾಂಡ ಸಂಭವಿಸಿದೆ. ಗಾಜಾವನ್ನು ನೆಲಸಮಗೊಳಿಸುವ ಮತ್ತು ಜನರನ್ನು ಅವರ ತಾಯ್ನಾಡಿನಿಂದ ಹೊರಹಾಕುವ ಗುರಿಯನ್ನು ಹೊಂದಿರುವ ಇಸ್ರೇಲ್‌ನ ಈ ಇತ್ತೀಚಿನ ಆಕ್ರಮಣಕ್ಕೆ ಟ್ರಂಪ್ ಆಡಳಿತವು ಕುಮ್ಮಕ್ಕು ನೀಡುತ್ತಿದೆ. ಇಸ್ರೇಲ್‌ನ ಮಿಲಿಟರಿ ಕ್ರಮಗಳನ್ನು ತಕ್ಷಣವೇ ನಿಲ್ಲಿಸಬೇಕು ಮತ್ತು ಎರಡನೇ ಹಂತದ ಕದನ ವಿರಾಮವನ್ನು ಜಾರಿಗೆ ತರಬೇಕು. ಇದು ಪ್ರಪಂಚದಾದ್ಯಂತದ ಶಾಂತಿಪ್ರಿಯ ಜನರ ಬೇಡಿಕೆಯಾಗಿದೆ.

ಮೋದಿ ಸರ್ಕಾರ ಇಸ್ರೇಲ್‌ನ ಆಕ್ರಮಣಕಾರಿ ಕ್ರಮಗಳನ್ನು ಬಹಿರಂಗವಾಗಿ ವಿರೋಧಿಸಬೇಕು ಎಂದು ಆಗ್ರಹಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಒಂದಿಡೀ ಜನಸಮೂಹವನ್ನು ಹಸಿವು ಮತ್ತು ಸಾಮೂಹಿಕ ಸಾವುನೋವುಗಳಿಗೆ ಒಳಗಾಗುತ್ತಿರುವಾಗ ಅದು ಮೌನವಾಗಿರಲು ಸಾಧ್ಯವಿಲ್ಲ ಎಂದು ಹೇಳಿದೆ.

ಇಸ್ರೇಲಿ ನರಮೇಧ ವಿರೋಧಿಸಿ, ತಕ್ಷಣದ ಕದನ ವಿರಾಮ ಮತ್ತು ಶಾಂತಿ ಇತ್ಯರ್ಥಕ್ಕೆ ಕರೆ ನೀಡುವಂತೆ ಪೊಲಿಟ್‌ಬ್ಯುರೊ ತನ್ನ ಘಟಕಗಳಿಗೆ ಕರೆ ನೀಡಿದೆ.



ಸ್ಟಾರ್‌ಲಿಂಕ್ ಜೊತೆಗಿನ ಒಪ್ಪಂದದ ಒಳ ಮರ್ಮವೇನು?

ಭಾರತೀಯ ದೂರಸಂಪರ್ಕ ವಲಯದಲ್ಲಿ ಇತ್ತೀಚಿನ ಒಪ್ಪಂದಗಳಿಗೆ ಭೂಮಿಕೆ ಏನಿದೆ? ಯಾವ ಆಧಾರದ ಮೇಲೆ, ಯಾರ ಪ್ರಯೋಜನಕ್ಕಾಗಿ ಈ ಒಪ್ಪಂದ ನಡೆಯಿತು? ಇದು ಯಾವ ಬೆಳವಣಿಗೆಗಳಿಗೆ ಕಾರಣವಾಗುತ್ತದೆ? ನಿನ್ನೆಯವರೆಗೂ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದ ಕಂಪನಿಗಳು ಒಂದರ ನಂತರ ಒಂದರಂತೆ ಒಪ್ಪಂದಗಳನ್ನು ಮಾಡಿಕೊಳ್ಳುವುದರಲ್ಲಿನ ಮರ್ಮವೇನು? ಇವು ಬಾಹ್ಯಾಕಾಶದ ಮೇಲಿನ ಏಕಸ್ವಾಮ್ಯಕ್ಕೆ ಕಾರಣವಾಗುತ್ತಿವೆಯೇ? ಹಾಗೇನಾದರೂ ನಡೆದರೆ, ರಾಷ್ಟ್ರೀಯ ಭದ್ರತೆ ಮತ್ತು ದೇಶದ ಸಾರ್ವಭೌಮತ್ವ ಎಂಬುದಕ್ಕೆ ಅರ್ಥವೇನಿದೆ? ಸ್ಟಾರ್‌ಲಿಂಕ್ ಜೊತೆ ಜಿಯೋ ಮತ್ತು ಏರ್ಟೆಲ್‌ನ ಒಪ್ಪಂದಗಳು ಎತ್ತಿರುವ ಪ್ರಶ್ನೆಗಳಿವು.

ದೇಶದಲ್ಲಿ ಉಪಗ್ರಹ ಆಧಾರಿತ ಅತಿ ವೇಗದ (ಹೈ–ಸ್ಪೀಡ್) ಇಂಟರ್‌ನೆಟ್ ಸೇವೆಗಳನ್ನು ನೀಡಲು ಜಿಯೋ ಮತ್ತು ಏರ್ಟೆಲ್, ಎಲೋನ್ ಮಸ್ಕ್ ಅವರ ಸ್ಟಾರ್‌ಲಿಂಕ್ ಜೊತೆಗಿನ ಒಪ್ಪಂದವು, ಟ್ರಂಪ್ ಮತ್ತು ಅವರ ಭಾರತೀಯ ಮಿತ್ರ ನರೇಂದ್ರ ಮೋದಿ ಇಬ್ಬರೂ ತೆರೆಮರೆಯಲ್ಲಿ ನಡೆಸಿರುವ ತಂತ್ರವಾಗಿದ್ದು, ಟ್ರಂಪ್ ಅವರನ್ನು ಸಮಾಧಾನಪಡಿಸಲು ಸ್ಟಾರ್‌ಲಿಂಕ್ ಮಾಲೀಕ ಎಲೋನ್ ಮಸ್ಕ್ ಮೂಲಕ ಪ್ರಧಾನಿ ಮೋದಿ ಸ್ವತಃ ಈ ಪಾಲುದಾರಿಕೆಗಳನ್ನು ಏರ್ಪಾಡು ಮಾಡಿದ್ದಾರೆ ಎಂಬ ಅನುಮಾನಗಳನ್ನು ಹುಟ್ಟುಹಾಕಿದೆ.

ಎಲೋನ್ ಮಸ್ಕ್ ರಿಂದ ಹಲವು ಸಮಯದಿಂದ ಪ್ರಯತ್ನ

ಸ್ಟಾರ್‌ಲಿಂಕ್ ಎಂಬುದು ಅಮೇರಿಕನ್ ಏರೋಸ್ಪೇಸ್ ಕಂಪನಿ ಸ್ಪೇಸ್‌ಎಕ್ಸ್ ಅಭಿವೃದ್ಧಿಪಡಿಸಿದ ಇಂಟರ್‌ನೆಟ್ ಸೇವೆಗಳನ್ನು ಒದಗಿಸುವ ಉಪಗ್ರಹ ಆಧಾರಿತ ಇಂಟರ್ ನೆಟ್ ವ್ಯವಸ್ಥೆ. ವಿಶ್ವದಲ್ಲೇ ಅತ್ಯಂತ ಶ್ರೀಮಂತ ವ್ಯಕ್ತಿ ಎಲೋನ್ ಮಸ್ಕ್‌ಗೆ ಸೇರಿದ ಈ ಕಂಪನಿಯು ಭಾರತದಲ್ಲಿ ತನ್ನ ಇಂಟರ್‌ನೆಟ್ ಸೇವೆಗಳನ್ನು ವಿಸ್ತರಿಸುವುದಕ್ಕಾಗಿ ಹಲವು ಸಮಯದಿಂದ ಪ್ರಯತ್ನಿಸುತ್ತಿರುವ ಸಂಗತಿ ಗೊತ್ತೇ ಇದೆ. ಏತನ್ಮಧ್ಯೆ, ಭಾರತದ ಕುಬೇರರುಗಳಾದ ಮುಖೇಶ್ ಅಂಬಾನಿಗೆ ಸೇರಿದ ಜಿಯೋ ಮತ್ತು ಸುನಿಲ್ ಮಿತ್ತಲ್ ಗೆ ಸೇರಿದ ಏರ್ಟೆಲ್ ಕಂಪನಿಗಳು ಇದನ್ನು ತೀವ್ರವಾಗಿ ವಿರೋಧಿಸುತ್ತಾ ಬಂದಿದ್ದವು. ಅಂತಹ ಕಂಪನಿಗಳು ಇದ್ದಕ್ಕಿದ್ದಂತೆ ತಮ್ಮ ಎಲ್ಲಾ ಆಕ್ಷೇಪಣೆಗಳನ್ನು ಬದಿಗಿಟ್ಟು, ಸ್ಟಾರ್‌ಲಿಂಕ್ ಜೊತೆಗೆ ಸೇರುವುದಕ್ಕೆ ಸಿದ್ಧರಾಗಿ ಒಪ್ಪಂದಗಳನ್ನು ಮಾಡಿಕೊಂಡಿರುವುದು ಅನುಮಾನಗಳಿಗೆ ಕಾರಣವಾಗುತ್ತಿವೆ.

ಸರ್ಕಾರದ ನಿಯಂತ್ರಣದಲ್ಲಿಯೇ ಇರಬೇಕು

ದೇಶದಲ್ಲಿ ಕ್ಲಿಷ್ಟವಾದ ಪರಿಸ್ಥಿತಿ ಉಂಟಾಗಿ ಅದನ್ನು ಎದುರಿಸುವಾಗ ಸಂಪರ್ಕವನ್ನು ಯಾರು ನಿಯಂತ್ರಿಸುತ್ತಾರೆ? ಅಮೇರಿಕ್ಕೆ ಸೇರಿದ ಸ್ಟಾರ್‌ಲಿಂಕ್ ಅಥವಾ ಅದರ ಭಾರತೀಯ ಪಾಲುದಾರರಾದ ಏರ್ಟೆಲ್, ಜಿಯೋ ಸಂಸ್ಥೆಗಳಾ? ಸ್ಟಾರ್‌ಲಿಂಕ್ ಜೊತೆಗಿನ ಈ ಒಪ್ಪಂದಗಳು ಸ್ಪೆಕ್ಟ್ರಮ್ ಹಂಚಿಕೆಗಳು ಮತ್ತು ರಾಷ್ಟ್ರೀಯ ಭದ್ರತಾ ಅಂಶಗಳ ಮೇಲೆ ಕೂಡಾ ಇಂತಹ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿವೆ.

ತಂತ್ರಜ್ಞಾನದ ಬೆಳವಣಿಗೆಯು ಉತ್ತುಂಗದಲ್ಲಿರುವ ಈ ಯುಗದಲ್ಲಿ, ಉಪಗ್ರಹ ಸ್ಪೆಕ್ಟ್ರಮ್ ದೇಶದ ರಕ್ಷಣೆಗೆ ಬಹಳ ಮಹತ್ವದ್ದಾಗಿದೆ. ಇದು ಎಲ್ಲಾ ದೇಶಗಳಿಗೂ ಒಂದು ಅಭೂತಪೂರ್ವ ಸಂಪನ್ಮೂಲವಾಗಿ ಲಭ್ಯವಾಗುತ್ತಾ ಬಂದಿದೆ. ಇಂದಿನ ಆಧುನಿಕ ಪ್ರಪಂಚದಲ್ಲಿ ಇದು ಒದಗಿಸುವ ಪ್ರಯೋಜನಗಳು ಯಾವುದೇ ದೇಶಕ್ಕೆ ಅನಿವಾರ್ಯವಾದ ಅವಶ್ಯಕತೆಯಾಗಿದೆ. ಪ್ರಸಾರ ಮತ್ತು ಮೊಬೈಲ್ ನೆಟ್‌ವರ್ಕ್‌ಗಳು, ಸಂಚರಣೆ ವ್ಯವಸ್ಥೆಗಳಂತಹ ಮಾಹಿತಿ ಸೇವೆಗಳ ಜೊತೆಗೆ, ಹವಾಮಾನ ಸಂಶೋಧನೆ, ಬೆಳೆಗಳ ಸ್ಥಿತಿ, ನೈಸರ್ಗಿಕ ಸಂಪನ್ಮೂಲಗಳ ನಕಾಶೆಗಳನ್ನು ತಯಾರಿಸಲು, ರಾಷ್ಟ್ರೀಯ ರಕ್ಷಣೆ ಮತ್ತು ಸುರಕ್ಷಿತ ಮಿಲಿಟರಿ ಸಂವಹನಗಳಿಗೆ ಅದು ಒದಗಿಸುವ ಸೇವೆಗಳು ಅಸಾಧಾರಣವಾಗಿವೆ.

ಅದಕ್ಕಾಗಿಯೇ ಇದು ಸರ್ಕಾರದ ನಿಯಂತ್ರಣದಲ್ಲಿಯೇ ಇದೆ ಎಂದು, ಇದನ್ನು ಖಾಸಗಿ ಸಂಸ್ಥೆಗಳಿಗೆ ಕೇವಲ ಪಾರದರ್ಶಕವಾದ, ಬಹಿರಂಗ ಹರಾಜಿನ ಮೂಲಕ ಮಾತ್ರವೇ ತರಂಗಾಂತರ ಹಂಚಿಕೆ ಮಾಡಬೇಕೆಂದು 2ಜಿ ಸ್ಪೆಕ್ಟ್ರಮ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ. ಇದಕ್ಕೆ ವ್ಯತಿರಿಕ್ತವಾಗಿ, ಖಾಸಗಿ ಒಪ್ಪಂದಗಳ ಮೂಲಕ ಸ್ಪೆಕ್ಟ್ರಮ್ ಹಂಚಿಕೆ ಮಾಡುವುದು ಕಾನೂನುಬಾಹಿರ. ಹೀಗಿರುವಾಗ, ಯಾವ ಆಧಾರದ ಮೇಲೆ ಈ ಒಪ್ಪಂದಗಳು ನಡೆದಿವೆ? ನಡೆಯುತ್ತಿದ್ದರೂ ಸರ್ಕಾರ ಏನು ಮಾಡುತ್ತಿದೆ? ರಾಷ್ಟ್ರೀಯ ಭದ್ರತೆಗೆ ಸಹಾ ಧಕ್ಕೆ ತರುವ ಹಂತಕ್ಕೆ ಸರ್ಕಾರ ಹೋಗಬೇಕಾದ ಅನಿವಾರ್ಯತೆ ಏನಿದೆ? ಈ ಪ್ರಶ್ನೆಗಳಿಗೆ ಕೇಂದ್ರ ಸರ್ಕಾರ ಉತ್ತರಿಸಬೇಕು.

ಸ್ಪೆಕ್ಟ್ರಮ್ ಹಂಚಿಕೆಗಾಗಿ ಯಾವುದೇ ಖಾಸಗಿ ಒಪ್ಪಂದವು ದೇಶದ ಕಾನೂನಿನ ಉಲ್ಲಂಘನೆಯಾಗುತ್ತದೆ ಎಂದು ಸಿಪಿಐ(ಎಂ) ಹೇಳಿದೆ. ಉಪಗ್ರಹ ಸ್ಪೆಕ್ಟ್ರಮ್ ಬಳಕೆಯಲ್ಲಿ ಪ್ರಾಬಲ್ಯ ಹೊಂದಲು ಜಿಯೋ, ಏರ್ಟೆಲ್ ಮತ್ತು ಸ್ಟಾರ್‌ಲಿಂಕ್ ಒಂದು ಕೂಟ ರಚಿಸಿಕೊಳ್ಳಲು ಒಂದುಗೂಡಿರುವುದಕ್ಕೆ ಭಾರತದಲ್ಲಿ ಕೋಟ್ಯಂತರ ಟೆಲಿಕಾಂ ಚಂದಾದಾರರು ಬೆಲೆ ತೆರಬೇಕಾಗುತ್ತದೆ ಎಂದು ಅದು ಎಚ್ಚರಿಸಿದೆ.

ಅದನ್ನವರು ಮಿಲಿಟರಿ ಮತ್ತು ರಕ್ಷಣಾ ದತ್ತಾಂಶ ಸಂಗ್ರಹಿಸಲು ಬಳಸಿದರೆ?

ಇದು ಭಾರತ ದೇಶದ ಕಕ್ಷೆಯ ಸ್ಲಾಟ್‌ಗಳ (orbital slots) ಮೇಲೂ ಗಂಭೀರ ಪರಿಣಾಮ ಬೀರುವ ಅಂಶವಾಗಿದೆ. ಈ ಒಪ್ಪಂದದ ಮೂಲಕ ವಿದೇಶಿ ಕಂಪನಿಯೊಂದು ತನ್ನ ಉಪಗ್ರಹಗಳನ್ನು ನಮ್ಮ ನೈಸರ್ಗಿಕ ಸಂಪನ್ಮೂಲಗಳನ್ನು ನಕ್ಷೆ ಮಾಡುವುದು, ವಾಣಿಜ್ಯಿಕವಾಗಿ ಮೌಲ್ಯಯುತವಾದ ದತ್ತಾಂಶ ಸಂಗ್ರಹಣೆ, ವಿಶೇಷವಾಗಿ ನಮ್ಮ ಆಯಕಟ್ಟಿನ ಮಿಲಿಟರಿ ಮತ್ತು ರಕ್ಷಣಾ ದತ್ತಾಂಶ ಸಂಗ್ರಹಿಸಲು ಬಳಸಿದರೆ, ಅದು ನಮ್ಮ ರಾಷ್ಟ್ರೀಯ ಭದ್ರತೆಗೆ ದೊಡ್ಡ ಬೆದರಿಕೆಯಾಗುತ್ತದೆ. ಒಂದು ವಿದೇಶಿ ಕಂಪನಿಯನ್ನು ನಮ್ಮ ಉಪಗ್ರಹ ಸ್ಪೆಕ್ಟ್ರಮ್ ಅನ್ನು ಮತ್ತು ಆರ್ಬಿಟಲ್ ಸ್ಲಾಟ್ ಗಳನ್ನು ಸ್ವಾಧೀನಪಡಿಸಿಕೊಳ್ಳಲು ಅನುಮತಿ ನೀಡುವುದೆಂದರೆ, ಅದು ಬಾಹ್ಯಾಕಾಶದ ಮೇಲೆ ಏಕಸ್ವಾಮ್ಯಕ್ಕೆ ಅವಕಾಶ ನೀಡಿದಂತಾಗುತ್ತದೆ. ನಮ್ಮ ಸಾರ್ವಭೌಮತ್ವ ಮತ್ತು ರಾಷ್ಟ್ರೀಯ ಭದ್ರತೆಯ ಕುರಿತು ರಾಜಿ ಮಾಡಿಕೊಂಡಂತಾಗುತ್ತದೆ.

ಉಕ್ರೇನ್ ಮೇಲೆ ಒತ್ತಡ ಹೇರಲು ಬಳಸಿಕೊಳ್ಳಲಾಯಿತು

ಇತ್ತೀಚೆಗೆ ರಷ್ಯಾದೊಂದಿಗೆ ಮಾತುಕತೆ ನಡೆಸುವಂತೆ ಉಕ್ರೇನ್ ಮೇಲೆ ಒತ್ತಡ ಹೇರಲು, ಉಕ್ರೇನಿನ ಖನಿಜ ಸಂಪನ್ಮೂಲಗಳನ್ನು ತನಗೆ ಹಸ್ತಾಂತರಿಸುವ ಬೇಡಿಕೆಗಳನ್ನು ಒಪ್ಪಿಕೊಳ್ಳುವಂತೆ ಮಾಡುವುದಕ್ಕೆ ಸ್ಟಾರ್‌ಲಿಂಕ್ ಸೇವೆಗಳನ್ನು ಸ್ಥಗಿತಗೊಳಿಸುವುದಾಗಿ ಉಕ್ರೇನ್ ಸೇನೆಗೆ ಅಮೆರಿಕ ಎಚ್ಚರಿಕೆ ನೀಡಿದ್ದು, ಆ ಬೆದರಿಕೆಗಳಿಗೆ ಉಕ್ರೇನಿನ ಶರಣಾಗತಿ ಇದಕ್ಕೆ ಒಂದು ಉದಾಹರಣೆಯಾಗಿದೆ.

ಸಮಾಜದ ಹಿತಕ್ಕಾಗಿ ಬಳಸಬೇಕು

ಭೂ ಕಕ್ಷೆಯನ್ನು ಸುತ್ತುತ್ತಿರುವ ದೊಡ್ಡ ಉಪಗ್ರಹ ಸಮೂಹ (Mega Constellation) ಎನ್ನುವುದು ಒಂದು ಅದ್ಭುತ ಆವಿಷ್ಕಾರ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಇದರಿಂದ ಲೆಕ್ಕವಿಲ್ಲದಷ್ಟು ಪ್ರಯೋಜನಗಳಿವೆ ಎಂಬುದು ನಿಜವಾದರೂ, ಅದರ ಮೇಲೆ ನಿಯಂತ್ರಣ ಕಳೆದುಕೊಂಡರೆ ಅದಕ್ಕೂ ಮಿಗಿಲಾದ ಅಪಾಯಗಳೂ ಇವೆ ಎನ್ನುವುದು ಅಷ್ಟೇ ಸತ್ಯ. ತಂತ್ರಜ್ಞಾನವು ಒದಗಿಸುವ ಅದ್ಭುತ ಫಲಿತಾಂಶಗಳನ್ನು ಶ್ರೀಮಂತರ ಸ್ವಾರ್ಥ ಹಿತಾಸಕ್ತಿಗಳಿಗಾಗಿ ಬಳಸಬಾರದು, ಬದಲಾಗಿ ಸಮಾಜದ ಹಿತಕ್ಕಾಗಿ ಬಳಸಬೇಕು. ಬಂಡವಾಳಶಾಹಿಯು, ಶಾಶ್ವತ ಅಧಿಕಾರಕ್ಕಾಗಿ, ಪ್ರಾಬಲ್ಯ ಸಾಧಿಸುವುದಕ್ಕಾಗಿ ಆಧುನಿಕತೆಯ ಹೆಸರಿನಲ್ಲಿ ಅನಾಗರಿಕ ರೀತಿಯಲ್ಲಿ ವರ್ತಿಸುತ್ತಿದೆ. ಅದು ಲಭ್ಯವಿರುವ ತಂತ್ರಜ್ಞಾನವನ್ನು ಆಯುಧವಾಗಿ ಬಳಸುತ್ತಿದೆ. ಸರ್ಕಾರಗಳು ಇವರಿಗೆ ಸಹಾಯ ಮಾಡುತ್ತಿವೆ. ಇದಕ್ಕೆ ಈ ಟೆಲಿಕಾಂ ಒಪ್ಪಂದಗಳು ಇತ್ತೀಚಿನ ಸಾಕ್ಷಿಯಾಗಿದೆ. ಇದನ್ನು ತಡೆಯುವುದು ಮತ್ತು ನಿಯಂತ್ರಿಸುವುದು ಸಾರ್ವಜನಿಕ ಜಾಗೃತಿಯಿಂದ ಮಾತ್ರ ಸಾಧ್ಯ.

–ಸಿಚಿ

ಸ್ಟಾರ್‌ಲಿಂಕ್ ವ್ಯವಹಾರ ನಿಲ್ಲಬೇಕು: ಇದು ನಮ್ಮ ರಾಷ್ಟ್ರೀಯ ಭದ್ರತೆ ಮತ್ತು ಸಾರ್ವಭೌಮತ್ವಕ್ಕೆ ಅಪಾಯ ತರುತ್ತದೆ

ದೇಶದಲ್ಲಿ ಉಪಗ್ರಹ ಆಧಾರಿತ ಅತಿ ವೇಗದ (ಹೈ–ಸ್ಪೀಡ್) ಇಂಟರ್ನೆಟ್ ಸೇವೆಗಳನ್ನು ನೀಡಲು ಜಿಯೋ ಮತ್ತು ಏರ್‌ಟೆಲ್, ಎಲೋನ್ ಮಸ್ಕ್ ಅವರ ಸ್ಟಾರ್‌ಲಿಂಕ್ ಜೊತೆ ಒಪ್ಪಂದ ಮಾಡಿಕೊಂಡಿವೆ ಎಂಬ ಇತ್ತೀಚಿನ ವರದಿಗಳು, ಸ್ಪೆಕ್ಟ್ರಮ್(ತರಂಗಾಂತರ) ಹಂಚಿಕೆ ಮತ್ತು ರಾಷ್ಟ್ರೀಯ ಭದ್ರತಾ ಕಾಳಜಿಗಳ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿವೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ತೀವ್ರ ಆತಂಕ ವ್ಯಕ್ತಪಡಿಸಿದೆ. ಇದನ್ನು ನಿಲ್ಲಿಸಬೇಕು, ಇಲ್ಲವಾದರೆ ಇದು ನಮ್ಮ ರಾಷ್ಟ್ರೀಯ ಸಾರ್ವಭೌಮತ್ವ ಮತ್ತು ಭದ್ರತೆಯನ್ನು ಪಣಕ್ಕಿಡುತ್ತದೆ ಎಂದು ಅದು ಎಚ್ಚರಿಸಿದೆ.

ಈ ಕುರಿತಂತೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಮಾರ್ಚ್ 13ರಂದು ನೀಡಿದ ಹೇಳಿಕೆಯ ಪೂರ್ಣ ಪಾಟ ಕೆಳಗಿನಂತಿದೆ:

ದೇಶದಲ್ಲಿ ಉಪಗ್ರಹ ಆಧಾರಿತ ಅತಿ ವೇಗದ (ಹೈ–ಸ್ಪೀಡ್) ಇಂಟರ್ನೆಟ್ ಸೇವೆಗಳನ್ನು ನೀಡಲು ಜಿಯೋ ಮತ್ತು ಏರ್‌ಟೆಲ್, ಎಲೋನ್ ಮಸ್ಕ್ ಅವರ ಸ್ಟಾರ್‌ಲಿಂಕ್ ಜೊತೆ ಒಪ್ಪಂದ ಮಾಡಿಕೊಂಡಿವೆ ಎಂಬ ಇತ್ತೀಚಿನ ವರದಿಗಳು, ಸ್ಪೆಕ್ಟ್ರಮ್(ತರಂಗಾಂತರ) ಹಂಚಿಕೆ ಮತ್ತು ರಾಷ್ಟ್ರೀಯ ಭದ್ರತಾ ಕಾಳಜಿಗಳ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎತ್ತಿದೆ. ಸುಪ್ರೀಂ ಕೋರ್ಟ್ 2ಜಿ ಪ್ರಕರಣದಲ್ಲಿ ಸ್ಪೆಕ್ಟ್ರಮ್ ಒಂದು ವಿರಳ ಸಂಪನ್ಮೂಲವಾಗಿದ್ದು, ಅದನ್ನು ಖಾಸಗಿಯವರಿಗೆ ಮುಕ್ತ, ಪಾರದರ್ಶಕ ಹರಾಜಿನ ಮೂಲಕ ಮಾತ್ರ ಹಂಚಿಕೆ ಮಾಡಬಹುದು ಎಂದು ಹೇಳಿತ್ತು. ಸ್ಪೆಕ್ಟ್ರಮ್ ಹಂಚಿಕೆಗಾಗಿ ಯಾವುದೇ ಖಾಸಗಿ ಒಪ್ಪಂದವು ದೇಶದ ಕಾನೂನಿನ ಉಲ್ಲಂಘನೆಯಾಗುತ್ತದೆ. ಉಪಗ್ರಹ ಸ್ಪೆಕ್ಟ್ರಮ್ ಬಳಕೆಯಲ್ಲಿ ಪ್ರಾಬಲ್ಯ ಹೊಂದಲು ಜಿಯೋ, ಏರ್‌ಟೆಲ್ ಮತ್ತು ಸ್ಟಾರ್‌ಲಿಂಕ್ ಒಂದು ಕೂಟ ರಚಿಸಿಕೊಳ್ಳಲು ಒಂದುಗೂಡಿರುವುದಕ್ಕೆ ಭಾರತದಲ್ಲಿ ಕೋಟ್ಯಂತರ ಟೆಲಿಕಾಂ ಚಂದಾದಾರರು ಬೆಲೆ ತೆರಬೇಕಾಗುತ್ತದೆ.


ಇದಲ್ಲದೆ, ಉಪಗ್ರಹ ಸ್ಪೆಕ್ಟ್ರಮ್ ಅನ್ನು ರಕ್ಷಣಾ ಮತ್ತು ಇಸ್ರೋ ಕಾರ್ಯಾಚರಣೆಗಳಂತಹ ಆಯಕಟ್ಟಿನ ಬಳಕೆಗಳಿಗೆ ಮಾತ್ರ ಹಂಚಿಕೆ ಮಾಡಬೇಕು. ಇದು ಸ್ಪೆಕ್ಟ್ರಮ್ ಹಂಚಿಕೆಯ ಪ್ರಶ್ನೆ ಮಾತ್ರವಲ್ಲ, ಬಾಹ್ಯಾಕಾಶದಲ್ಲಿ ಒಂದು ದೇಶ ಹೊಂದಿರುವ ಕಕ್ಷೆಯ ಕಿಂಡಿ(ಸ್ಲಾಟ್)ಗಳ ಸಂಖ್ಯೆಯ ಪ್ರಶ್ನೆಯೂ ಆಗಿದೆ. ಕಕ್ಷೆಗಳಲ್ಲಿನ ಪ್ರಮುಖವಾದ ಸ್ಲಾಟ್‌ಗಳನ್ನು ಸ್ವಾಧೀನಪಡಿಸಿಕೊಳ್ಳಲು ಮತ್ತು ನಮ್ಮ ನೈಸರ್ಗಿಕ ಸಂಪನ್ಮೂಲಗಳ ನಕಾಶೆಗಳನ್ನು ತಯಾರಿಸಲು, ಬೆಲೆಬಾಳುವ ವಾಣಿಜ್ಯ ದತ್ತಾಂಶಗಳನ್ನು– ಉದಾಹರಣೆಗೆ ಹವಾಮಾನ, ಬೆಳೆಗಳ ಸ್ಥಿತಿ ಇತ್ಯಾದಿ– ಮತ್ತು ಆಯಕಟ್ಟಿನ ಮಿಲಿಟರಿ/ ರಕ್ಷಣಾ ದತ್ತಾಂಶಗಳನ್ನು ಕೂಡ ಸಂಗ್ರಹಿಸಲು, ಅಂತಹ ಉಪಗ್ರಹಗಳು ಅವುಗಳನ್ನು ಬಳಸಲು ಅವಕಾಶ ನೀಡುವುದು, ವಿಶೇಷವಾಗಿ ಇಸ್ರೋ ಮತ್ತು ಇತರ ಭಾರತೀಯ ಸಂಸ್ಥೆಗಳು ಹಾಗೆ ಮಾಡುವ ಸಾಮರ್ಥ್ಯವನ್ನು ಹೊಂದಿರುವಾಗ, ನಮ್ಮ ರಾಷ್ಟ್ರೀಯ ಮತ್ತು ಭದ್ರತಾ ಹಿತಾಸಕ್ತಿಗಳಿಗೆ ವಿರುದ್ಧವಾಗಿರುತ್ತದೆ.

ಇಂತಹ ದೂರಸಂಪರ್ಕ ಸೇವೆಗಳು ದೇಶದ ರಕ್ಷಣೆಗೆ ಸಹ ನಿರ್ಣಾಯಕವಾಗಿವೆ. ಉಕ್ರೇನ್ ಮಿಲಿಟರಿಗೆ ಸ್ಟಾರ್‌ಲಿಂಕ್ ಸೇವೆಗಳನ್ನು ನಿಲ್ಲಿಸುವ ಅಮೆರಿಕದ ಬೆದರಿಕೆ ಝಳಿಸಿ, ಉಕ್ರೇನ್ ತನ್ನ ನೈಸರ್ಗಿಕ ಸಂಪನ್ಮೂಲಗಳನ್ನು ಹಸ್ತಾಂತರಿಸಬೇಕು ಮತ್ತು ಅಮೆರಿಕದ ಆಶ್ರಯದಲ್ಲಿ ರಷ್ಯಾದೊಂದಿಗೆ ಮಾತುಕತೆ ನಡೆಸಬೇಕು ಎಂಬ ಅಮೆರಿಕದ ಬೇಡಿಕೆಗಳನ್ನು ಒಪ್ಪಿಕೊಳ್ಳುವಂತೆ ಮಾಡಿತು ಎಂದು ಈಗ ಗೊತ್ತಾಗಿದೆ. ಒಂದು ಯುಎಸ್ ಕಂಪನಿಯು ಅತ್ಯಂತ ಆಯಕಟ್ಟಿನ ಉಪಗ್ರಹ ಸ್ಪೆಕ್ಟ್ರಮ್ ಮತ್ತು ಕಕ್ಷೆಯ ಸ್ಲಾಟ್‌ಗಳನ್ನು ಪಡೆದುಕೊಳ್ಳಲು ಮತ್ತು ಒಂದು ಬಾಹ್ಯಾಕಾಶ ಏಕಸ್ವಾಮ್ಯವನ್ನು ರಚಿಸಿಕೊಳ್ಳಲು ಅವಕಾಶ ನೀಡುವುದು ನಮ್ಮ ರಾಷ್ಟ್ರೀಯ ಸಾರ್ವಭೌಮತ್ವ ಮತ್ತು ಭದ್ರತೆಯನ್ನು ಪಣಕ್ಕಿಡುತ್ತದೆ.

ರಾಜ್ಯ ಬಜೆಟ್: ಸಾರ್ವಜನಿಕ-ಖಾಸಗಿ ಸಹಭಾಗಿತ್ವದ ಬಜೆಟ್

ಬೆಂಗಳೂರು ಸುರಂಗ ಮಾರ್ಗ: ಕಿ.ಮೀ.ಗೆ 20 ರೂ. ಗಳ ಟೋಲ್ ವಸೂಲಿ!?





ಮೂಲಭೂತ ಸೌಕರ್ಯ ಅಭಿವೃದ್ಧಿ ಎಂದರೆ ಖಾಸಗಿ ಸಹಭಾಗಿತ್ವವೇ ಅಗಿರಬೇಕೇ? ಎಲ್ಲರೂ ಸುಂಕ, ಟೋಲ್, ಸೇವಾ ಶುಲ್ಕ ಹೆಸರಿನಲ್ಲಿ ಹಣ ಕೊಟ್ಟು ಮೂಲಸೌಕರ್ಯಗಳ ಪ್ರಯೋಜನಗಳನ್ನು ಪಡೆಯಬೇಕೇ? ಮೂಲಭೂತ ಸೌಕರ್ಯ ಎಂದರೆ ಹಣವುಳ್ಳವರಿಗೆ ಮಾಡುವ ಸೌಕರ್ಯಗಳೇ? ಶಿಕ್ಷಣ, ಆರೋಗ್ಯ ರಕ್ಷಣೆ ವ್ಯಾಪಾರದ ಸರಕುಗಳಂತಾಬೇಕೆ? ರಾಜಸ್ವ ಸಂಗ್ರಹ ಮತ್ತು ಹೂಡಿಕೆ ಹೆಚ್ಚಿಸಲು ಸಾರ್ವಜನಿಕ ಆಸ್ತಿಗಳ ನಗದೀಕರಣ ಮಾಡಬೇಕೆ? ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಬಜೆಟ್‌ಗಳನ್ನು ಅವಲೋಕಿಸಿದರೆ ಇಂತಹ ಪ್ರಶ್ನೆಗಳು ಮೂಡುತ್ತವೆ. ಕರ್ನಾಟಕ ರಾಜ್ಯ ಬಜೆಟ್ ಪ್ರಸ್ತಾಪದಲ್ಲಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವದ ಯೋಜನೆಗಳ ಪ್ರಸ್ತಾಪಗಳನ್ನು ನೋಡಿದರೆ, ಇದು ಸರಕಾರದ ಬಜೆಟ್ ಅಲ್ಲ, ಸಾರ್ವಜನಿಕ-ಖಾಸಗಿ ಸಹಭಾಗಿತ್ವದ ಬಜೆಟ್ ಆಗಿದೆ ಎಂಬುದನ್ನು ತೋರಿಸುತ್ತವೆ.

ಸಿ.ಸಿದ್ದಯ್ಯ

ರಾಜ್ಯದಲ್ಲಿನ ಹಲವು ಮೂಲಸೌಕರ್ಯ ಯೋಜನೆಗಳನ್ನು ಸಾರ್ವಜನಿಕ-ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ಕಾರ್ಯಗತಗೊಳಿಸಲಾಗುತ್ತದೆ ಎಂದು ಕರ್ನಾಟಕ ರಾಜ್ಯ ಬಜೆಟ್‌ನಲ್ಲಿ ಹೇಳಲಾಗಿದೆ. ಬಜೆಟ್‌ಗೂ ಮುನ್ನ 2025ರ ಜನವರಿ 30ರಂದು ಮೂಲಸೌಕರ್ಯ ಯೋಜನೆಗಳಿಗಾಗಿ ರಾಜ್ಯ ಸಾರ್ವಜನಿಕ-ಖಾಸಗಿ ಸಹಭಾಗಿತ್ವ (ಪಿಪಿಪಿ) ನೀತಿ- 2025 ಅನ್ನು ರಾಜ್ಯ ಸಚಿವ ಸಂಪುಟ ಅನುಮೋದಿಸಿದೆ. ಇದು ಕೃಷಿ-ಮೂಲಸೌಕರ್ಯ, ಶಿಕ್ಷಣ, ಇಂಧನ, ಆರೋಗ್ಯ ರಕ್ಷಣೆ, ಪ್ರವಾಸೋದ್ಯಮ, ವಸತಿ, ನಗರ ಮೂಲಸೌಕರ್ಯ, ದೂರಸಂಪರ್ಕ, ಅರಣ್ಯ/ವನ್ಯಜೀವಿಗಳಂತಹ 15 ವಲಯಗಳಿಗೆ ಅನ್ವಯಿಸುತ್ತದೆ. ಮತ್ತೊಂದಡೆ, 'ಒಂದು ಲಕ್ಷ ಕೋಟಿ ರೂ. ಹೂಡಿಕೆಗಳನ್ನು ಆಕರ್ಷಿಸುವ ಉದ್ದೇಶದಿಂದ ಒಟ್ಟು 13,692 ಕೋಟಿ ರೂ. ಆರ್ಥಿಕ ನೆರವು ಮತ್ತು ಸಹಾಯಧನವನ್ನು ಒದಗಿಸಲಾಗುತ್ತದೆ' ಎಂದು ಈ ಬಜೆಟ್‌ನಲ್ಲಿ ಹೇಳಲಾಗಿದೆ.

ಸಾರ್ವಜನಿಕ ಆಸ್ತಿಗಳ ನಗದೀಕರಣ

ರಾಜಸ್ವ ಸಂಗ್ರಹ ಮತ್ತು ಹೂಡಿಕೆ ಹೆಚ್ಚಿಸಲು ಸಾರ್ವಜನಿಕ ಆಸ್ತಿಗಳ ನಗದೀಕರಣ (Monetization of public asset) ಮಾಡಲು ರಾಜ್ಯ ಸರ್ಕಾರ ಮುಂದಾಗಿದೆ. ಅಂದರೆ, ಸರ್ಕಾರವು ತನ್ನ ಆಸ್ತಿಗಳಿಂದ - ಭೂಮಿ, ಕಟ್ಟಡಗಳು, ಪೈಪ್ ಲೈನ್ ಗಳು, ರಸ್ತೆಗಳು ಮುಂತಾದವುಗಳಿಂದ ಆದಾಯವನ್ನು ಗಳಿಸುವ ಉದ್ದೇಶ ಹೊಂದಿದೆ. ಆಗಸ್ಟ್ 2024ರಲ್ಲಿ, ಸರ್ಕಾರವು ನಿವೃತ್ತ ಐಎಎಸ್ ಅಧಿಕಾರಿ ಕೆ.ಪಿ. ಕೃಷ್ಣನ್ ಅವರ ನೇತೃತ್ವದಲ್ಲಿ ಆಸ್ತಿ ಹಣಗಳಿಕೆ ಸೇರಿದಂತೆ ವಿವಿಧ ಸಂಪನ್ಮೂಲ ಕ್ರೋಢೀಕರಣ ಆಯ್ಕೆಗಳನ್ನು ಅನ್ವೇಷಿಸಲು ಒಂದು ಸಮಿತಿಯನ್ನು ರಚಿಸಿತ್ತು. ಈ ನೀತಿಯು ಆಸ್ತಿ ನಗದೀಕರಣನ್ನು "ಒಂದು ಇಲಾಖೆ ಅಥವಾ ಸರ್ಕಾರಿ ಸಂಸ್ಥೆಯು ಹೊಂದಿರುವ ಆಸ್ತಿಯನ್ನು ಖಾಸಗಿ ವಲಯದ ಭಾಗವಹಿಸುವವರಿಗೆ ಮುಂಗಡ ಅಥವಾ ಆವರ್ತಕ ಪರಿಗಣನೆಗಾಗಿ ಅಥವಾ ಎರಡರ ಸಂಯೋಜನೆಗಾಗಿ ಸೀಮಿತ ಅವಧಿಯ ಪರವಾನಗಿ/ಗುತ್ತಿಗೆ" ಎಂದು ವ್ಯಾಖ್ಯಾನಿಸುತ್ತದೆ. ಬೆಂಗಳೂರಿನಲ್ಲಿ ಬಿಡಿಎ ಕಾಂಪ್ಲೆಕ್ಸ್‌ಗಳನ್ನು ಅಭಿವೃದ್ಧಿ ಹೆಸರಿನಲ್ಲಿ ಖಾಸಗಿ ಬಿಲ್ಡರ್ಸ್‌ಗಳಿಗೆ ಬಿಟ್ಟುಕೊಟ್ಟಿರುವುದು ಆಸ್ತಿ ನಗದೀಕರಣ ನೀತಿಯ ಭಾಗವಾಗಿದೆ.

ಎಲ್‌ಪಿಜಿ ನೀತಿಗಳಿಗೆ ಜೋತು ಬಿದ್ದ ಪಿಪಿಪಿ ಯೋಜನೆ

ರಾಜ್ಯದಲ್ಲಿ ವ್ಯಾಪಕವಾದ ಖಾಸಗೀಕರಣ ಯೋಜನೆಯನ್ನು ಪಿಪಿಪಿ ಮೂಲಕ ಜಾರಿಗೊಳಿಸಲು ರಾಜ್ಯ ಸರ್ಕಾರ ಹೊರಟಿದೆ. ರಾಜ್ಯದ ಮೂಲಸೌಕರ್ಯ ಯೋಜನೆಗಳನ್ನು ಖಾಸಗಿ ಹೂಡಿಕೆಯೊಂದಿಗೆ ಅಭಿವೃದ್ಧಿಪಡಿಸಲು ಈಗಿರುವ ಸಾರ್ವಜನಿಕ-ಖಾಸಗಿ ಸಹಭಾಗಿತ್ವ (ಪಿಪಿಪಿ) ನೀತಿ - 2018 ಅನ್ನು ಮಧ್ಯಂತರ ಪರಿಷ್ಕರಣೆ ಮಾಡುವುದಾಗಿ ಕಳೆದ ವರ್ಷ ಸರ್ಕಾರ ಪ್ರಕಟಿಸಿತ್ತು. ಈ ಸರ್ವಾಂಗೀಣ ಖಾಸಗೀಕರಣದ ಯೋಜನೆಯು ಸರ್ಕಾರದ ದುರ್ಬಲ ಆರ್ಥಿಕ ಸ್ಥಿತಿಯನ್ನು ಮತ್ತು ನವ-ಉದಾರವಾದಿ ನೀತಿಗಳಿಗೆ ಮಣೆ ಹಾಕಿರುವುದನ್ನು ಸೂಚಿಸುತ್ತದೆ.

ಸುರಂಗ ಮಾರ್ಗ; ಕಿಮೀಗೆ 20 ರೂ ಟೋಲ್!!

ಬೆಂಗಳೂರು ನಗರದಲ್ಲಿ ರೂ. 40,000 ಕೋಟಿ ವೆಚ್ಚದಲ್ಲಿ ಉತ್ತರ-ದಕ್ಷಿಣ ಮತ್ತು ಪೂರ್ವ-ಪಶ್ಚಿಮ ಸುರಂಗ ಮಾರ್ಗದ ಕಾರಿಡಾರ್ ಗಳನ್ನು ಕೈಗೊಳ್ಳಲಾಗುತ್ತದೆ. ಇದು 2025-26ನೇ ಸಾಲಿನ ಬಜೆಟ್‌ನಲ್ಲಿನ ಒಂದು ಯೋಜನೆ. ಬೆಂಗಳೂರಿಗರಿಗೆ, ಅದರಲ್ಲೂ ಸ್ವಂತ ವಾಹನಗಳನ್ನು ಹೊಂದಿರುವ ಜನರಿಗೆ ಇದು ಎಷ್ಟೊಂದು ಖುಷಿಯ ವಿಷಯವಲ್ಲವೇ? ಸಿಗ್ನಲ್‌ಗಳಿಲ್ಲದೆ, ಸಂಚಾರ ಒತ್ತಡವಿಲ್ಲದೆ, ತಲುಪಬೇಕಾದ ಸ್ಥಳಕ್ಕೆ ಬೇಗ ತಲುಪಬಹುದು ಎಂದು ಖುಷಿಯಾಗುತ್ತದೆ ಅಲ್ಲವೇ.

ಆದರೆ, ಇದನ್ನು ಉಚಿತವಾಗಿ ಬಳಸುವಂತಿಲ್ಲ. ಏಕೆಂದರೆ, ಈ ಯೋಜನೆಯ ಎಲ್ಲಾ ಹಣವನ್ನು ಸರ್ಕಾರ ಕೊಡುವುದಿಲ್ಲ. ಸರ್ಕಾರ ಶೇ. 30ರಷ್ಟು ಅನುದಾನ ಕೊಡುತ್ತದೆ ಎಂದು ಹೇಳುತ್ತದೆಯಾದರೂ, ಅದನ್ನೂ ಸಹಾ ರಾಜ್ಯ ಸರ್ಕಾರ ಕೊಡುವುದಿಲ್ಲ. ಬದಲಾಗಿ ಬೆಂಗಳೂರು ಮಹಾನಗರ ಪಾಲಿಕೆ(ಬಿಬಿಎಂಪಿ) ಕೊಡುತ್ತದೆ. ಅಷ್ಟೊಂದು ಹಣ ಬಿಬಿಎಂಪಿ ಬಳಿ ಇದೆಯೇ? ಇಲ್ಲ. ಅದಕ್ಕಾಗಿ ಬಿಬಿಎಂಪಿ 19,000 ಕೋಟಿ ರೂ.ಗಳನ್ನು ಸಾಲ ಪಡೆಯುತ್ತದೆ. ಸಾಲಕ್ಕೆ ಗ್ಯಾರಂಟಿಯನ್ನು ರಾಜ್ಯ ಸರ್ಕಾರ ಒದಗಿಸುತ್ತದೆಯಷ್ಟೆ.

ಈ ಸುರಂಗ ರಸ್ತೆ ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ, ನಿರ್ಮಾಣ-ನಿರ್ವಹಣೆ-ವರ್ಗಾವಣೆ (BOT) ಮಾದರಿಯನ್ನು ಅವಲಂಬಿಸಿ ನಿರ್ಮಾಣವಾಗುತ್ತದೆ. ಅಂದರೆ, ಈಗ ಟೋಲ್ ರಸ್ತೆಗಳಾಗಿರುವ ರಾಷ್ಟ್ರೀಯ ಹೆದ್ದಾರಿಗಳ ವಿಸ್ತರಣೆ ಮತ್ತು ಅಭಿವೃದ್ಧಿ ರೀತಿಯಲ್ಲಿ, ಬೆಂಗಳೂರು ನಗರದ ಸುರಂಗ ರಸ್ತೆ 30 ವರ್ಷಗಳ ರಿಯಾಯಿತಿ ಅವಧಿಯೊಂದಿಗೆ BOT ಮಾದರಿಯಾಗಿದೆ. ನಿರ್ಮಾಣಕ್ಕೆ ಐದು ವರ್ಷಗಳು (61 ತಿಂಗಳುಗಳು) ಬೇಕಾಗುತ್ತದೆ. ಆ ನಂತರದ 25 ವರ್ಷಗಳು ಸುರಂಗ ರಸ್ತೆಯನ್ನು ಈ ಖಾಸಗಿ ಸಂಸ್ಥೆಗಳೇ ನಿರ್ವಹಿಸುತ್ತವೆ. ಈ ಸಮಯದಲ್ಲಿ ಸುರಂಗ ರಸ್ತೆ ಬಳಕೆ ಮಾಡುವ ವಾಹನಗಳಿಂದ ಟೋಲ್ ಸಂಗ್ರಹ ಮಾಡಿ ಖಾಸಗಿ ಸಂಸ್ಥೆಯು ಆದಾಯ ಗಳಿಸುತ್ತದೆ.

ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಪ್ರಕಟಿಸಿದ ಗೆಜೆಟ್‌ನ ಆಧಾರದ ಮೇಲೆ, ಹೆಬ್ಬಾಳ ಮತ್ತು ಸಿಲ್ಕ್ ಬೋರ್ಡ್ ಜಂಕ್ಷನ್ ನಡುವಿನ ಬೆಂಗಳೂರಿನ ಅವಳಿ-ಟ್ಯೂಬ್ ಸುರಂಗ ರಸ್ತೆಯ ವಿವರವಾದ ಯೋಜನಾ ವರದಿ (ಡಿಪಿಆರ್) 16.6 ಕಿಮೀ ದೂರಕ್ಕೆ ರೂ. 330 ಟೋಲ್ ಅಂದಾಜು ಮಾಡಿದೆ. ಅಂದರೆ, ಈ ರಸ್ತೆಯನ್ನು ಬಳಕೆ ಮಾಡುವ ವಾಹನಗಳು ಕಿಮೀಗೆ 20 ರೂಪಾಯಿ ಟೋಲ್ ಕಟ್ಟಬೇಕು. "ಟೋಲ್ ಶುಲ್ಕಗಳು ಕೇವಲ ಪ್ರಾಥಮಿಕ ಅಂದಾಜುಗಳಾಗಿದ್ದು, ಯೋಜನೆ ಮುಂದುವರೆದಂತೆ ನಾವು ಅವುಗಳನ್ನು ಅಂತಿಮಗೊಳಿಸುತ್ತೇವೆ" ಎನ್ನುತ್ತಾರೆ ಬಿಬಿಎಂಪಿ ಅಧಿಕಾರಿಯೊಬ್ಬರು.

ಆಟೋರಿಕ್ಷಾ, ದ್ವಿಚಕ್ರ ವಾಹನಗಳಿಗೆ ಪ್ರವೇಶವಿಲ್ಲ(?)

ಸುರಂಗ ರಸ್ತೆ ಬಳಕೆ ಮಾಡಲು ಆಟೋ ಮತ್ತು ದ್ವಿಚಕ್ರ ವಾಹನಗಳಿಗೆ ಅವಕಾಶ ಇದೆಯೇ? ಇವುಗಳಿಗೆ ಅವಕಾಶ ನೀಡುವ ನಿರ್ಧಾರಕ್ಕೆ ಸಂಬಂಧಿಸಿದಂತೆ ಬಿಬಿಎಂಪಿ ಅಧಿಕಾರಿಯೊಬ್ಬರು, ಅದು ಸರ್ಕಾರದ ಮಟ್ಟದಲ್ಲಿ ತೆಗೆದುಕೊಳ್ಳಬೇಕಾದ ನಿರ್ಧಾರವಾಗಿದೆ ಎನ್ನುತ್ತಾರೆ. ಆದರೆ, ಮೈಸೂರು-ಬೆಂಗಳೂರು ಹೆದ್ದಾರಿಯಲ್ಲಿ ಈ ವಾಹನಗಳಿಗೆ ಪ್ರವೇಶವಿಲ್ಲ ಎಂಬುದನ್ನು ನೋಡಿದರೆ, ಸುರಂಗ ರಸ್ತೆಯಲ್ಲಿ ಖಂಡಿತಾ ಈ ವಾಹನಗಳಿಗೆ ಅವಕಾಶ ಕೊಡುವುದಿಲ್ಲ. ಅಂದರೆ, ಉಳ್ಳವರ ಅನುಕೂಲಕ್ಕಾಗಿ ಈ ಯೋಜನೆ ನಿರ್ಮಾಣ ಮಾಡುತ್ತಿದ್ದಾರೆ.

ಸಿಂಧನೂರು-ರಾಯಚೂರು ರಸ್ತೆ

ಸಿಂಧನೂರು-ರಾಯಚೂರು ನಡುವಿನ 78.45 ಕಿಮೀ ಉದ್ದದ ರಸ್ತೆಯನ್ನು ಹೈಬ್ರಿಡ್ ವರ್ಷಾಶನ ಯೋಜನೆಯಡಿ (HAM) ಅಭಿವೃದ್ಧಿ ಕಾಮಗಾರಿಯನ್ನು ರೂ. 1695.85 ಕೋಟಿಗಳ ಯೋಜನಾ ಮೊತ್ತದಲ್ಲಿ ಪಿಪಿಪಿ ಆಧಾರದಲ್ಲಿ ಅಭಿವೃದ್ಧಿ ಮಾಡಲಾಗುತ್ತಿದೆ.

ದೇವನಹಳ್ಳಿ-ಮಾಲೂರು-ತಮಿಳುನಾಡು ರಸ್ತೆ

ರೂ.3190 ಕೋಟಿ ಯೋಜನಾ ಮೊತ್ತದಲ್ಲಿ ದೇವನಹಳ್ಳಿ-ವಿಜಯಪುರ-ಹೆಚ್.ಕ್ರಾಸ್-ವೇಮಗಲ್-ಮಾಲೂರು-ತಮಿಳುನಾಡು ಗಡಿವರೆಗೆ 123 ಕಿ.ಮೀ ಉದ್ದದ ರಸ್ತೆಯನ್ನು HAM ಅಭಿವೃದ್ಧಿ ಪಡಿಸಲು ನಿರ್ಧರಿಸಲಾಗಿದೆ. ಈ ರಸ್ತೆಗಳ ನಿರ್ಮಾಣ ಮೊತ್ತದ ಶೇ. 40ರಷ್ಟನ್ನು ಸರ್ಕಾರ ಕೊಡುತ್ತದೆ. ಉಳಿದ ಹಣವನ್ನು ಖಾಸಗಿ ಕಂಪನಿಗಳು ಭರಿಸುತ್ತವೆ. 15 ವರ್ಷಗಳ ಬಿಒಟಿ ಆಧಾರದಲ್ಲಿ ಈ ಕಂಪನಿಗಳು ರಸ್ತೆ ನಿರ್ವಹಣೆ ಮಾಡಿ ಟೋಲ್ ಸಂಗ್ರಹಿಸುತ್ತವೆ. ಅಂದರೆ, ಈ ರಸ್ತೆಗಳನ್ನು ಬಳಕೆ ಮಾಡಲು ಟೋಲ್ ಕೊಡಬೇಕಾಗುತ್ತದೆ.

ಖಾಸಗಿಯವರ ತೆಕ್ಕೆಗೆ ಮೆಜೆಸ್ಟಿಕ್ ಮತ್ತು ಕೆ.ಆರ್.ಪುರ ಬಸ್ ನಿಲ್ದಾಣಗಳು

ಮೆಜೆಸ್ಟಿಕ್ ಬಸ್ ನಿಲ್ದಾಣದ ಜಾಗವನ್ನು 'ಪ್ರಾಜೆಕ್ಟ್ ಮೆಜೆಸ್ಟಿಕ್' ಯೋಜನೆಯಡಿ ಪಿಪಿಪಿ ಆಧಾರದ ಮೇಲೆ ಪುನರ್ ಅಭಿವೃದ್ಧಿಪಡಿಸಿ, ವಾಣಿಜ್ಯ ಸಂಕೀರ್ಣದೊಂದಗೆ ಸಾರಿಗೆ ಹಬ್ ನಿರ್ಮಿಸಲು ಉದ್ದೇಶಿಸಲಾಗಿದೆ. ಕೆ.ಆರ್. ಪುರಂನಲ್ಲಿ ಪಿಪಿಪಿ ಆಧಾರದಲ್ಲಿ ಹೊಸ ಸ್ಯಾಟಲೈಟ್ ಬಸ್ ನಿಲ್ದಾಣವನ್ನು ನಿರ್ಮಿಸಲಾಗುವುದು.

ಅಂದರೆ, ಸಾರ್ವಜನಿಕರ ಸ್ವತ್ತಾದ ಬೆಂಗಳೂರಿನ ಮೆಜೆಸ್ಟಿಕ್ ಬಸ್ ನಿಲ್ದಾಣದ ಜಾಗವನ್ನು ಖಾಸಗಿಯವರ ತೆಕ್ಕೆಗೆ ಒಪ್ಪಿಸಲಾಗುತ್ತದೆ ಎಂದರ್ಥ. ಮತ್ತು ಕೆ.ಆರ್.ಪುರದಲ್ಲಿ ನಿರ್ಮಾಣವಾಗಲಿರುವ ಹೊಸ ಸ್ಯಾಟಲೈಟ್ ಬಸ್ ನಿಲ್ದಾಣವನ್ನು ಖಾಸಗಿಯವರಿಗೆ ಒಪ್ಪಿಸುವುದು ಎಂದರ್ಥ.

ನಿರ್ಮಾಣ ಮತ್ತು ಅಭಿವೃದ್ಧಿ ಹೆಸರಿನಲ್ಲಿ ಈ ಎರಡೂ ಬಸ್ ನಿಲ್ದಾಣಗಳಲ್ಲಿ ಬೃಹತ್ ವಾಣಿಜ್ಯ ಸಂಕೀರ್ಣಗಳು ತಲೆ ಎತ್ತುತ್ತವೆ. ಬಂಡವಾಳ ಹೂಡಿಕೆ ಮಾಡುವ ಖಾಸಗಿಯವರು ಅವುಗಳನ್ನು ಬಾಡಿಗೆಗೆ ಕೊಟ್ಟು ಲಾಭ ಮಾಡಿಕೊಳ್ಳಲು ತೊಡಗುತ್ತಾರೆ. ಮುಂದಿನ ದಿನಗಳಲ್ಲಿ ಬಸ್ ನಿಲ್ದಾಣ ಪ್ರವೇಶ ಮಾಡುವ ಬಸ್ಸುಗಳಿಗೆ, ಪ್ರಯಾಣಿಕರಿಗೆ ಪ್ರವೇಶ ಶುಲ್ಕ ಅಥವಾ ಸೇವಾ ಶುಲ್ಕ ವಿಧಿಸಲೂಬಹುದು. ಇದನ್ನು ವಿಮಾನ ನಿಲ್ದಾಣ ಮತ್ತು ರೈಲು ನಿಲ್ದಾಣಗಳಲ್ಲಿ ಈಗಾಗಲೇ ಕಾಣುತ್ತಿದ್ದೇವೆ. ಪ್ರಯಾಣಿಕರ ಅನುಕೂಲಕ್ಕೆ ತಕ್ಕಂತೆ ಬಸ್ ನಿಲ್ದಾಣಗಳು ಅಭಿವೃದ್ಧಿಯಾಗಬೇಕೆ ವಿನಃ, ಅವುಗಳು ವಾಣಿಜ್ಯ ಕಟ್ಟಡಗಳನ್ನು ನಿರ್ಮಿಸಿ, ವಾಣಿಜ್ಯ ಚಟುವಟಿಕೆ ನಡೆಸುವ ಜಾಗವಾಗಬಾರದು. ಒಂದು ವೇಳೆ, ಅದೂ ಕೂಡ ಬಸ್ ಪ್ರಯಾಣಿಕರ ಅನುಕೂಲಕ್ಕೆ ಅವಶ್ಯಕತೆ ಇದೆ

ಪುಟ 10 ಕ್ಕೆ

ಸಿಡಿ ಮೌಢ್ಯಾಚರಣೆಯು ತಪ್ಪಿತು–ಜಾತ್ರೆಯೂ ಸುಗಮವಾಗಿ ನಡೆಯಿತು

ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಹರಿಹರಪುರದಲ್ಲಿ 22 ಮಾರ್ಚ್ 2025ರಂದು ಉಡಿಸಲಮ್ಮ ಜಾತ್ರೆಗೆ ಸಿದ್ಧತೆಯಾಗಿದ್ದ ಅಮಾನವೀಯ ಸಿಡಿ ಏರಿಸುವುದನ್ನು ತಡೆಯಲಾಗಿದ್ದು ಸಂತಸದ ಸಂಗತಿ ಎಂದು ದಲಿತ ಹಕ್ಕುಗಳ ಹಾಸನ ಜಿಲ್ಲಾ ಸಮಿತಿ ಸಂಚಾಲಕ ಪೃಥ್ವಿ ಎಂ.ಜಿ. ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿದ್ದು, ಯಾವುದೋ ಕಾರಣವೊಡ್ಡಿ, ಅದೆಷ್ಟೋ ವರ್ಷಗಳಿಂದ ಚಾಕೇನಹಳ್ಳಿ ದಲಿತರ ಬೆನ್ನಿಗೆ ಕಬ್ಬಿಣದ ಕೊಂಡಿ ಸಿಕ್ಕಿಸಿ, ಮರದ ಕಂಬಕ್ಕೆ ಜೋತು ಹಾಕಿ, ಗಿರಕಿ ಹೊಡೆಸುವ ಮೂಲಕ ಹರಿಹರಪುರದ ಜಾತ್ರೆಯಲ್ಲಿ ನೆರೆದಿದ್ದ ಜನರನ್ನು ರಂಜಿಸಿ ಮತ್ತು ಮಹಿಳೆಯರು ಬಾಯಿಗೆ ದಬ್ಬಳದಂತಹ ಸರಳನ್ನು ಚುಚ್ಚಿಕೊಂಡು (ಬಾಯಿಬೀಗ) ಮೌಢ್ಯದ ಪರಮಾವಧಿ ಮೆರೆಸಲಾಗುತ್ತಿತ್ತು. ಈ ಅಮಾನವೀಯ ಪದ್ದತಿಯನ್ನು ನಿಲ್ಲಿಸಬೇಕೆಂದು 2017 ರಿಂದಲೂ 'ದಲಿತ ಹಕ್ಕುಗಳ ಸಮಿತಿ – ಕರ್ನಾಟಕ (DHS), ಸಂಘಟನೆಗಳ ಮುಖಂಡರು ಮತ್ತು ಹಲವು ಪ್ರಜ್ಞಾವಂತರು ಸೇರಿ ಜಿಲ್ಲಾ ತಾಲ್ಲೂಕು ಆಡಳಿತ ಹಾಗು ಸರ್ಕಾರದ ಮೇಲೆ ಒತ್ತಾಯಿಸುತ್ತಾ ಬಂದಿವೆ ಎಂದರು.

ಚಾಕೇನಹಳ್ಳಿ ಗ್ರಾಮದ ಪ್ರಜ್ಞಾವಂತ ಯುವಕರೂ ಸಿಡಿ ವಿರುದ್ಧ ಧ್ವನಿ ಎತ್ತಿ, ಇನ್ನು ಮುಂದೆ ಇಂತಹ ಅನಿಷ್ಟ ಆಚರಣೆ ಮಾಡಬಾರದೆಂದು ತೀರ್ಮಾನಿಸಿದ್ದು ಎಲ್ಲರ ಹೋರಾಟಕ್ಕೆ ಬಲ ಸಿಕ್ಕಿತು. ನಂತರ ಕರ್ನಾಟಕದಲ್ಲಿ ಮೌಢ್ಯ ನಿಷೇಧ ಕಾಯ್ದೆ 2020 ರಲ್ಲಿ ಜಾರಿಗೆ ಬಂದು. ಈ ಕಾಯ್ದೆ ಪ್ರಕಾರ ಸಿಡಿ ಮತ್ತು ಬಾಯಿಬೀಗ ರೀತಿಯ ಅಮಾನವೀಯ ಆಚರಣೆ ನಿಷಿದ್ಧ ಎಂದಾಯಿತು. ಆದಾಗ್ಯೂ



ಕಾಯ್ದೆಗೆ ಕೇರ್ ಮಾಡದ ಅಲ್ಲಿಯ ಪಟ್ಟಭದ್ರ ಹಿತಾಸಕ್ತಿಗಳು 2021ರ ಜಾತ್ರೆಯಲ್ಲಿ ಸಿಡಿ ಆಡಿಸಲು ಭರ್ಜರಿ ತಯಾರಿ ಮಾಡಿಕೊಂಡು ದಲಿತರನ್ನು ಸಿಡಿಗೆ ಏರಿಸಲು ಮುಂದಾಗಿದ್ದರು ಎಂದರು.

ಇದನ್ನು ವಿರೋಧಿಸಿ ಮತ್ತೆ ಜಿಲ್ಲಾ, ತಾಲ್ಲೂಕು ಆಡಳಿತ ಹಾಗೂ ಪೊಲೀಸ್ ಇಲಾಖೆಗೆ ಒತ್ತಾಯಿಸಿ ಸಿಡಿ ಆಚರಣೆಯನ್ನು ರದ್ದು ಮಾಡುವಂತೆ ಆಗ್ರಹಿಸಿ ಮಾಧ್ಯಮ ಗೋಷ್ಠಿಯನ್ನೂ ನಡೆಸಿದ ಪರಿಣಾಮ, ಸಿಡಿಯನ್ನು ನಡೆಯುವುದನ್ನು ಹಿಂಪಡೆಯಲಾಗಿದೆ. ಇದು ಹೊರಾಟಕ್ಕೆ ಸಿಕ್ಕ ಜಯ ಎಂದರು.

ಮತ್ತೆ ಈಗ ನಾಲ್ಕು ವರ್ಷಗಳ ತರುವಾಯ ಈ ವರ್ಷ 22–03–2025ರ ಜಾತ್ರಾ ಮಹೋತ್ಸವಕ್ಕೆ ಒಳಗಿಂದೊಳಗೆ ದಲಿತ ಕುಟುಂಬಗಳಿಗೆ ಸಿಡಿ ಆಡದಿದ್ದರೆ ನಿಮಗೆ ಒಳ್ಳೆಯದಾಗುವುದಿಲ್ಲ ಎಂದು ಭಯ ಹುಟ್ಟಿಸಿ, ಸಿಡಿ ಏರಿಸಲು ಸಕಲ ಸಿದ್ಧತೆ ಮಾಡಿಕೊಂಡಿದ್ದರು. ಚಾಕೇನಹಳ್ಳಿ ದಲಿತರನ್ನು ಹೇಗಾದರೂ ಮಾಡಿ ಸಿಡಿ ಕಂಬಕ್ಕೆ ಕರೆತರಲೇಬೇಕೆಂಬ ಪ್ರಯತ್ನಗಳು ನಡೆದಿದ್ದವು. ಅಲ್ಲದೇ ಅಲ್ಲೊಬ್ಬ ಮೈಮೆಲೆ ದೇವರು ಬರಿಸಿಕೊಂಡು ಸಿಡಿ ಏರದಿದ್ದರೆ ಚಾಕೇನಹಳ್ಳಿ ದಲಿತ ಕುಟುಂಬಗಳಿಗೆ ದೇವರ ಪೂಜೆಗೂ ಅವಕಾಶ ನಿರಾಕರಿಸುವಂತೆ ಫಾರುಮಾನು ಹೊರಡಿಸಿದ್ದ ಎಂದರು.

ಕೊನೆಗೆ ಹೇಗಾದರೂ ಸಿಡಿ ಆಚರಣೆ ತಡೆಯಬೇಕೆಂಬ ಆ ಊರಿನ ಜಾಗೃತ ಗ್ರಾಮಸ್ಥರು ಯುವಕರ ಒತ್ತಾಸೆ,

ಪ್ರಜ್ಞಾವಂತರ ಹೋರಾಟಗಾರರ ಶ್ರಮ, ಎಲ್ಲರ ಪ್ರಯತ್ನ ಮತ್ತು ಒತ್ತಾಯದಿಂದಾಗಿ ಜಿಲ್ಲಾ ಮತ್ತು ತಾಲ್ಲೂಕು ಆಡಳಿತ ಕ್ರಮವಹಿಸಿದರ ಭಾಗವಾಗಿ ಅಮಾನವೀಯ ಅನಿಷ್ಟ ಸಿಡಿ ಮತ್ತು ಬಾಯಿಬೀಗ ಮೌಡ್ಯಾಚರಣೆಯನ್ನು ನಡೆಯದಂತೆ ತಡೆಯಲು ಸಾಧ್ಯವಾಗಿದೆ ಎಂದು ತಿಳಿಸಿದ್ದಾರೆ.

ಕೊನೆಗೆ ಜಾತ್ರೆಯಲ್ಲಿ ಸಿಡಿ ಮರಕ್ಕೆ ಹೂವಿನ ಹಾರ ಹಾಕಿ ಗಿರಕಿ ಹೊಡೆಸಿದ್ದಾರೆ ಅಷ್ಟೇ. ಇನ್ನೂ ಅದೆಷ್ಟೋ ಕಡೆಗಳಲ್ಲಿ ಅಮಾನವೀಯ ಸಿಡಿಯಂತಹ ಮೌಡ್ಯಾಚರಣೆಗಳಿಗೆ ದಲಿತ ತಳ ಸಮುದಾಗಳ ಜನರನ್ನು ಗುರಿಮಾಡಲಾಗುತ್ತಿದೆ.

ಇವುಗಳನ್ನು ದಿಟ್ಟತನದಿಂದ ತಡೆಯುವಂತಹ ಪ್ರಜ್ಞಾವಂತರು ಹೆಚ್ಚಾಗಬೇಕು ಎಂದರು.

ಅಮಾನವೀಯ ಅನಿಷ್ಟ ಆಚರಣೆಗಳು ಕೊನೆಗೊಳ್ಳಲಿ. ಜಾತ್ರೆ, ಹಬ್ಬ, ಸಾಂಸ್ಕೃತಿಕ ಆಚರಣೆಗಳು ಮಾನವೀಯಗೊಳ್ಳಬೇಕು ಎಂದು ಪೃಥ್ವಿ ತಿಳಿಸಿದ್ದಾರೆ.

ಬೆಂಗಳೂರು ಸುರಂಗ ಮಾರ್ಗ: ಕಿ.ಮೀ.ಗೆ 20 ರೂ.ಗಳ ಟೋಲ್........

ಪುಟ 9 ರಿಂದ

ಎನ್ನುವುದಾದರೆ, ಅದನ್ನು ಸರ್ಕಾರವೇ ಬಂಡವಾಳ ಹೂಡಿಕೆ ಮಾಡಿ ಆ ಕೆಲಸ ಮಾಡಬಹುದಲ್ಲವೇ? ಅದರಿಂದ ಬರುವ ಲಾಭವನ್ನು ಸರ್ಕಾರವೇ ಗಳಿಸಬಹುದಲ್ಲವೇ?

14,750 ಹೊಸ ವಿದ್ಯುತ್ ಚಾಲಿತ ಬಸ್ಸುಗಳ ಸೇರ್ಪಡೆ

2025–26ರಲ್ಲಿ PM E-DRIVE, PM-eBus Sewa ಮತ್ತು ಬಾಹ್ಯ ನೆರವಿನ ಯೋಜನೆಯಡಿ ಒಟ್ಟಾರೆ 14,750 ಹೊಸ ವಿದ್ಯುತ್ ಚಾಲಿತ ಬಸ್ಸುಗಳನ್ನು ಸೇರ್ಪಡೆ ಮಾಡುವು ಗುರಿ ಹೊಂದಿದ್ದು, ಇದರಲ್ಲಿ 9,000 ಬಸ್ಸುಗಳನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ಸೇರ್ಪಡೆ ಮಾಡಲು ಉದ್ದೇಶಿಸಲಾಗಿದೆ. (ಕೇಂದ್ರ ಸರ್ಕಾರದ ವಿದ್ಯುತ್ ವಾಹನ ಸಬ್ಸಿಡಿ ಯೋಜನೆ FAME-3 ಅನ್ನು PM E-ಡ್ರೈವ್ ಯೋಜನೆ ಎಂಬ ಹೊಸ ಕಾರ್ಯಕ್ರಮದಿಂದ ಬದಲಾಯಿಸಲಾಗಿದೆ. ಬೃಹತ್ ಕೈಗಾರಿಕಾ ಸಚಿವಾಲಯವು 2024ರ ಸೆಪ್ಟೆಂಬರ್ 29ರಂದು PM ಎಲೆಕ್ಟ್ರಿಕ್ ಡ್ರೈವ್ ರೆವಲ್ಯೂಷನ್ ಇನ್ ಇನ್ನೋವೇಟಿವ್ ವೆಹಿಕಲ್ ಎನ್ಹ್ಯಾನ್ಸ್ಮೆಂಟ್ ಯೋಜನೆ (PM Electric Drive Revolution in Innovative Vehicle Enhancement (PM E-DRIVE) Scheme)ಯನ್ನು ಪ್ರಕಟಿಸಿದೆ.)

ರಾಜ್ಯದ ವಿವಿಧ ಸಾರಿಗೆ ನಿಗಮಗಳಲ್ಲಿ 1,000 ಹೊಸ ಡೀಸೆಲ್ ಬಸ್ಸುಗಳನ್ನು ಒಟ್ಟು ವೆಚ್ಚ ಒಪ್ಪಂದ (GCC) ಆಧಾರದಲ್ಲಿ ಸೇರ್ಪಡೆಗೊಳಿಸಲಾಗುವುದು. ವಿದ್ಯುತ್ ಚಲನಶೀಲತೆ ಇನ್ನೂ ಆಕರ್ಷಣೆಯನ್ನು ಪಡೆಯದ ಪ್ರದೇಶಗಳಲ್ಲಿ ಜಿಸಿಸಿ ಮಾದರಿಯಲ್ಲಿ ಡೀಸೆಲ್ ಬಸ್ಸುಗಳನ್ನು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಸೇರ್ಪಡೆಗೊಳಿಸಲಾಗುತ್ತದೆ. ಜಿಸಿಸಿ ಎಂಬುದು ಒಂದು ರೀತಿಯ ಪಿಪಿಪಿ ಮಾದರಿ ಇದ್ದಂತೆ.

ಈ ಎಲೆಕ್ಟ್ರಿಕ್ ಬಸ್ಸುಗಳು ಮತ್ತು ಜಿಸಿಸಿ ಆಧಾರದಲ್ಲಿ ಸೇರ್ಪಡೆಗೊಳ್ಳುವ ಬಸ್ಸುಗಳು ಖಾಸಗಿ ಮಾಲೀಕರದ್ದಾಗಿರುತ್ತವೆ. ವಿದ್ಯುತ್ ಚಾಲಿತ ಬಸ್ಸುಗಳ ಖಾಸಗಿ ಮಾಲೀಕರಿಗೆ ಕೇಂದ್ರ ಸರ್ಕಾರ ಫೇಮ್–2 ಯೋಜನೆಯಡಿ ತಲಾ ಒಂದು ಬಸ್ಸಿಗೆ 50 ಲಕ್ಷ ರೂಪಾಯಿ ಸಹಾಯಧನ ಕೊಡುತ್ತಿತ್ತು. ಈ ಬಸ್ಸುಗಳ ಚಾಲಕರು ಖಾಸಗಿ ಮಾಲೀಕರ ನೌಕರರಾಗಿದ್ದರೆ, ಕಂಡಕ್ಟರ್‌ಗಳು ರಾಜ್ಯ ಸಾರಿಗೆ ಸಂಸ್ಥೆ ಅಥವಾ ಬಿಎಂಟಿಸಿ ನೌಕರರಾಗಿರುತ್ತಾರೆ. ರಾಜ್ಯ ಸಾರಿಗೆ ಸಂಸ್ಥೆಗಳು ಈ ಬಸ್ಸುಗಳ ಕಾರ್ಯಾಚರಣೆಗೆ ಕಿಮೀ ಒಂದಕ್ಕೆ 41 ರೂ. ದರ ಮತ್ತು ದಿನವೊಂದಕ್ಕೆ ಕನಿಷ್ಟ 180 ಕಿಮೀ ನಂತೆ ಒಪ್ಪಂದ ಮಾಡಿಕೊಂಡಿವೆ. ಪ್ರಯಾಣಿಕರ ಕೊರತೆಯಿಂದ ಈ ಬಸ್ಸುಗಳಿಂದ ಕಡಿಮೆ ಆದಾಯ ಬಂದರೂ, ಒಪ್ಪಂದದಂತೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಅಥವಾ ಬಿಎಂಟಿಸಿ ಹಣ ಕೊಡಬೇಕು.

1,000 MWh ಬ್ಯಾಟರಿ ಶಕ್ತಿ ಶೇಖರಣಾ ವ್ಯವಸ್ಥೆ

ನವೀಕರಿಸಬಹುದಾದ ಮೂಲಗಳಿಂದ ಉತ್ಪಾದನೆಯಾಗುವ ಇಂಧನದ ಶೇಖರಣೆಗಾಗಿ, ಕೆಪಿಟಿಸಿಎಲ್ ಮೂಲಕ ಏಳು ಸಬ್ ಸ್ಟೇಷನ್‌ಗಳಲ್ಲಿ 1,000 ಮೆಗಾವ್ಯಾಟ್ ಅವರ್ (MWh) ಬ್ಯಾಟರಿ ಶಕ್ತಿ ಶೇಖರಣಾ ವ್ಯವಸ್ಥೆಯನ್ನು 1,846 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಪಿಪಿಪಿ ಮಾದರಿಯಲ್ಲಿ ಸ್ಥಾಪಿಸಲಾಗುವುದು ಎಂದು ಹೇಳಲಾಗಿದೆ.

ಸೋಲಾರ್ ಮೈಕ್ರೋ–ಗ್ರಿಡ್ ಗಳ ಸ್ಥಾಪನೆ

ಸೌರಶಕ್ತಿಯನ್ನು ಬಳಸಿ ಗ್ರಾಮ ಪಂಚಾಯತಿಗಳ ವಿದ್ಯುತ್ ಬಿಲ್ಲಿನ ಹೊರೆಯನ್ನು ತಗ್ಗಿಸಲು ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ಸೋಲಾರ್ ಮೈಕ್ರೋ–ಗ್ರಿಡ್‌ಗಳನ್ನು ಸ್ಥಾಪಿಸಲಾಗುವುದು ಎಂದು ಹೇಳಲಾಗಿದೆ.

ಗೋದ್ನಾ ಶಾಖೋತ್ಪನ್ನ ವಿದ್ಯುತ್ ಸ್ಥಾವರ

ಗೋದ್ನಾ ಶಾಖೋತ್ಪನ್ನ ವಿದ್ಯುತ್ ಸ್ಥಾವರವನ್ನು ಟಿಬಿಸಿಬಿ (Tariff based competitive bidding– ಸುಂಕ ಆಧಾರಿತ ಸ್ಪರ್ಧಾತ್ಮಕ ಹರಾಜು) ಮಾದರಿಯಲ್ಲಿ ಕಾರ್ಯಗತಗೊಳಿಸಲು ನಿರ್ಧಾರ ಮಾಡಲಾಗಿದೆ. ಸ್ಪರ್ಧಾತ್ಮಕ ಬಿಡ್ಡಿಂಗ್ ಮಾರ್ಗಸೂಚಿಗಳನ್ನು ವಿದ್ಯುತ್ ಸಚಿವಾಲಯವು 2003ರ ವಿದ್ಯುತ್ ಕಾಯ್ದೆಯ ಸೆಕ್ಷನ್ 63ರ ಪ್ರಕಾರ ರೂಪಿಸಿದೆ. ಈ ಮಾರ್ಗಸೂಚಿಗಳು ಸ್ಪರ್ಧೆಯನ್ನು ಉತ್ತೇಜಿಸುವುದು, ಖಾಸಗಿ ವಲಯದ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವ ಗುರಿಯನ್ನು ಹೊಂದಿವೆ ಎಂದು ಹೇಳಲಾಗಿದೆ. ಅಂದರೆ, ಟಿಬಿಸಿಬಿ ವಿದ್ಯುತ್ ಕ್ಷೇತ್ರದ ಖಾಸಗೀಕರಣದ ಒಂದು ಭಾಗವಾಗಿದೆ.

ವಿದ್ಯುತ್ ಕ್ಷೇತ್ರದಲ್ಲಿ ಉತ್ಪಾದನೆ ಮತ್ತು ಸಂಗ್ರಹಣೆಯಲ್ಲಿ ಖಾಸಗಿಯವರಿಗೆ ಅವಕಾಶ ಕೊಡುವ ಇಂತಹ ಪಿಪಿಪಿ ಯೋಜನೆಗಳು, ಸಾರ್ವಜನಿಕ ವಿದ್ಯುತ್ ವಲಯವನ್ನು ಸಂಪೂರ್ಣವಾಗಿ ಖಾಸಗೀಕರಣ ಮಾಡುವ ಕೇಂದ್ರ ಸರ್ಕಾರದ ನೀತಿಗಳ ಭಾಗವಾಗಿ ರಾಜ್ಯ ಸರ್ಕಾರ ಇದನ್ನು ಮಾಡುತ್ತಿದೆ. ಇದು ವಿದ್ಯುತ್ ದರದಲ್ಲಿ ಮತ್ತಷ್ಟು ಹೆಚ್ಚಳಕ್ಕೆ ಕಾರಣವಾಗುತ್ತದೆ.

ಮಂಗಳೂರಿನಲ್ಲಿ ಜಲಸಾರಿಗೆ ಸಂಗ್ರಹಾಲಯ

ರಾಜ್ಯ ಸರ್ಕಾರವು ಪಿಪಿಪಿ ಮಾದರಿಯಲ್ಲಿ ಮಂಗಳೂರಿನಲ್ಲಿ ಜಲ ಸಾರಿಗೆ ವಸ್ತುಸಂಗ್ರಹಾಲಯ ಮತ್ತು ಅನುಭವ ಕೇಂದ್ರವನ್ನು ಸ್ಥಾಪಿಸಲು ಯೋಜಿಸುತ್ತಿದೆ ಎಂದು ಬಜೆಟ್‌ನಲ್ಲಿ ಹೇಳಲಾಗಿದೆ. ಕರ್ನಾಟಕ ಕಡಲ ಮಂಡಳಿ (ಕೆಎಂಬಿ) ಹೊಯಿಗೆಬಜಾರ್‌ನಲ್ಲಿರುವ ಐತಿಹಾಸಿಕ ದೀಪಸ್ತಂಭದ ಬಳಿಯ ತನ್ನ 1.5 ಎಕರೆ ಭೂಮಿಯಲ್ಲಿ ಪಾರಂಪರಿಕ ಕಡಲ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಲಾಗುತ್ತದೆ. ಇದರ ಅಂದಾಜು ಯೋಜನಾ ವೆಚ್ಚ 23 ಕೋಟಿ ರೂ. ಎಂದು ಈ ಹಿಂದೆ ಸಚಿವರು ಹೇಳಿದ್ದರು.

ಸಮುದ್ರಯಾನದ ಶ್ರೀಮಂತ ಇತಿಹಾಸದ ಹೊರತಾಗಿಯೂ, ಕಡಲ ವಸ್ತು ಸಂಗ್ರಹಾಲಯವಿಲ್ಲದ ಭಾರತದ ಏಕೈಕ ಕರಾವಳಿ ರಾಜ್ಯ ಕರ್ನಾಟಕ ಎಂಬುದು ನಿಜ. ಪ್ರಸ್ತಾವಿತ ವಸ್ತುಸಂಗ್ರಹಾಲಯವು ಕಡಲ ಕಲಾಕೃತಿಗಳು, ಕಥೆಗಳು ಮತ್ತು ಸಂಪ್ರದಾಯಗಳ ಭಂಡಾರವಾಗಿ ಕಾರ್ಯನಿರ್ವಹಿಸುತ್ತದೆ. ಇದನ್ನು ಪಿಪಿಪಿ ಮಾದರಿಯಲ್ಲಿ ಅಭಿವೃದ್ಧಿಪಡಿಸಬೇಕೆ? ಸರ್ಕಾರ ಇಷ್ಟು ಹಣ ವೆಚ್ಚಮಾಡಿ ತಾನೇ ವಸ್ತು ಸಂಗ್ರಹಾಲಯ ಸ್ಥಾಪಿಸಿ, ಪ್ರವಾಸಿಗರಿಗೆ ಉಚಿತ ಪ್ರವೇಶ ನೀಡಬಹುದಲ್ಲವೇ?

ಕೋಲಾರ ಜಿಲ್ಲೆಯಲ್ಲಿ ಇಂಡಸ್ಟ್ರಿಯಲ್ ಪಾರ್ಕ್

ಕೋಲಾರ ಜಿಲ್ಲೆಯ ಶಿವಾರ ಪಟ್ಟಣದ ಕೈಗಾರಿಕಾ ಪ್ರದೇಶದಲ್ಲಿ ಮಲ್ಟಿ ಸೆಕ್ಟರ್ ನೆಟ್ ಜೀರೋ ಸಸ್ಟೈನಬಿಲಿಟಿ ಇಂಡಸ್ಟ್ರಿಯಲ್ ಪಾರ್ಕ್ ಅನ್ನು ಪಿಪಿಪಿ ಮಾದರಿಯಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ.

ತೊಟಗಾರಿಕಾ ಪ್ರವಾಸೋದ್ಯಮವನ್ನು ಉತ್ತೇಜಿಸಲು

ತೋಟಗಾರಿಕೆ ಇಲಾಖೆಯ ಅಧೀನದ ಆಯ್ದ ಕ್ಷೇತ್ರಗಳು ಮತ್ತು ನರ್ಸರಿಗಳಡಿ ಪಿಪಿಪಿ ಮಾದರಿಯಲ್ಲಿ ಹೂ–ಕೃಷಿ, ಅಲಂಕಾರಿಕ ಸಸ್ಯಗಳು, ಔಷಧೀಯ ಸಸ್ಯಗಳನ್ನು ಬೆಳೆಸಲು ಹಾಗೂ ತೊಟಗಾರಿಕಾ ಪ್ರವಾಸೋದ್ಯಮವನ್ನು ಉತ್ತೇಜಿಸಲು ಕಾರ್ಯಕ್ರಮಗಳನ್ನು ರೂಪಿಸಿಲಾಗುವುದು.

ಮಲ್ಪೆ ಮೀನುಗಾರಿಕಾ ಬಂದರಿನಲ್ಲಿ "ಮಲ್ಟಿ–ಲೆವೆಲ್" ವ್ಯವಸ್ಥೆ

ಮಲ್ಪೆ ಮೀನುಗಾರಿಕಾ ಬಂದರಿನಲ್ಲಿ ವಾಹನ ದಟ್ಟಣೆಯನ್ನು ನಿರ್ವಹಿಸಲು "ಮಲ್ಟಿ–ಲೆವೆಲ್" ವ್ಯವಸ್ಥೆಯನ್ನು ಪಿಪಿಪಿ ಮಾದರಿಯಲ್ಲಿ ನಿರ್ಮಿಸಲಾಗುವುದು.

ಕೃಷಿ ಉತ್ಪನ್ನ ಮಾರುಕಟ್ಟೆ

ಚಿಕ್ಕಬಳ್ಳಾಪುರದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ವತಿಯಿಂದ ಅಂತಾರಾಷ್ಟ್ರೀಯ ಮಟ್ಟದ ಹೈಟೆಕ್ ಹೂವಿನ ಮಾರುಕಟ್ಟೆಯನ್ನು ಹಾಗೂ ಕೆಜಿಎಫ್‌ನಲ್ಲಿ ರೈತರ ಆಧುನಿಕ ಮಾರುಕಟ್ಟೆಯನ್ನು ಪಿಪಿಪಿ ಮಾದರಿಯಲ್ಲಿ ಸ್ಥಾಪಿಸಲಾಗುವುದು.

ವೈದ್ಯಕೀಯ ಕಾಲೇಜು

ಬಾಗಲಕೋಟೆಯಲ್ಲಿ ರಾಜೀವ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಘಟಕ ವೈದ್ಯಕೀಯ ಕಾಲೇಜನ್ನು ಹಾಗೂ ಕೋಲಾರದಲ್ಲಿ ಪಿಪಿಪಿ ಆಧಾರದ ಮೇಲೆ ವೈದ್ಯಕೀಯ ಕಾಲೇಜು ಆರಂಭಿಸಲು ಉದ್ದೇಶಿಸಲಾಗಿದೆ.

ಸರ್ಕಾರ ಮಾಡಬೇಕಾದ ರಸ್ತೆ ಅಭಿವೃದ್ಧಿ, ಕೃಷಿ–ಮೂಲಸೌಕರ್ಯ, ಶಿಕ್ಷಣ, ಇಂಧನ, ಆರೋಗ್ಯ ರಕ್ಷಣೆ, ಪ್ರವಾಸೋದ್ಯಮ, ವಸತಿ, ನಗರ ಮೂಲಸೌಕರ್ಯ, ದೂರಸಂಪರ್ಕ, ಅರಣ್ಯ/ವನ್ಯಜೀವಿಗಳ ರಕ್ಷಣೆಯಂತಹ ಜವಾಬ್ದಾರಿಗಳನ್ನು ಖಾಸಗಿಯರಿಗೆ ಒಪ್ಪಿಸಲಾಗುತ್ತಿದೆ. ಜನರು ಟೋಲ್ ಕೊಟ್ಟು ರಸ್ತೆಯಲ್ಲಿ ಸಂಚರಿಸಬೇಕಾದ ವ್ಯವಸ್ಥೆ ನಮಗೆ ಬೇಕೆ? ಶಿಕ್ಷಣ, ಆರೋಗ್ಯ ರಕ್ಷಣೆ ಇವುಗಳನ್ನು ಒಂದು ವ್ಯಾಪಾರದ ಸರಕನ್ನಾಗಿ ಮಾಡುವುದು ಸರಿಯೇ? ಆಸ್ತಿ ನಗದೀಕರಣ ಹೆಸರಿನಲ್ಲಿ ಸಾರ್ವಜನಿಕ ಆಸ್ತಿಗಳನ್ನು ಖಾಸಗಿಯವರಿಗೆ ಕೊಡುವುದು ಸರಿಯೇ? ಇಂತಹ ಪ್ರಶ್ನೆಗಳನ್ನು ಎತ್ತಬೇಕಾದ ವಿರೋಧ ಪಕ್ಷ ಬಿಜೆಪಿ ನಾಯಕರು, ಹಲಾಲ್ ಬಜೆಟ್ ಎನ್ನುತ್ತಾ, ಜನರು ಈ ಕುರಿತು ಚರ್ಚಿಸದಂತೆ ಮಾಡಿದ್ದಾರೆ. ಜನರಿಂದ ಆಯ್ಕೆಯಾದ ಶಾಸಕರುಗಳು ಜನರ ಬದುಕಿಗೆ ಸಂಬಂಧಿಸಿದ ಇಂತಹ ವಿಷಯದ ಕುರಿತು ಚರ್ಚೆ ಮಾಡುತ್ತಿಲ್ಲ. ಜನರು ಹೆಚ್ಚೆತ್ತುಕೊಂಡು ಇಂತಹ ಉದಾರೀಕರಣ, ಖಾಸಗೀಕರಣ, ಜಾಗತೀಕರಣ (ಎಲ್‌ಪಿಜಿ) ನೀತಿಗಳನ್ನು ಹಿಮ್ಮೆಟ್ಟಿಸಲು ಪಣತೊಡಬೇಕಿದೆ.

ಒಕ್ಕೂಟ ಸಂಸ್ಕೃತಿಯನ್ನು ಗೌರವಿಸಿ, ಶಿಕ್ಷಣವನ್ನು ರಾಜ್ಯ ಪಟ್ಟಿಗೆ ಹಿಂತಿರುಗಿಸಿ:

"ಆಡಳಿತ ಪಕ್ಷದಲ್ಲಿರುವ ಎಲ್ಲಾ ಸದಸ್ಯರು ತುರ್ತುಪರಿಸ್ಥಿತಿಯನ್ನು ಖಂಡಿಸಿ ಮಾತನಾಡುತ್ತಾರೆ. ಆದರೆ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿಯೇ ಸಂವಿಧಾನದ 42ನೇ ತಿದ್ದುಪಡಿಯ ಮೂಲಕ ಶಿಕ್ಷಣವನ್ನು ರಾಜ್ಯ ಪಟ್ಟಿಯಿಂದ ತೆಗೆದುಹಾಕಲಾಯಿತು. ತುರ್ತುಪರಿಸ್ಥಿತಿ ಘೋಷಣೆಯ ಬಗ್ಗೆ ನೀವು (ಬಿಜೆಪಿ) ನಿಜವಾಗಿಯೂ ಪ್ರಾಮಾಣಿಕರಾಗಿದ್ದರೆ, ಶಿಕ್ಷಣವನ್ನು ರಾಜ್ಯ ಪಟ್ಟಿಗೆ ಹಿಂತಿರುಗಿಸಿ" ರಾಜ್ಯಸಭೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸದಸ್ಯ ಡಾ.ಜಾನ್ ಬ್ರಿಟ್ಟಾಸ್ ಮನವಿ.



ಸಂಸತ್ತಿನ 2025–26ರ ಬಜೆಟ್ ಅಧಿವೇಶನದ ಎರಡನೇ ಅಧಿವೇಶನದಲ್ಲಿ ಶಿಕ್ಷಣಕ್ಕೆ ಸಂಭಂದಿಸಿದ ವಿಷಯಗಳ ಕುರಿತು ಚರ್ಚಿಸುವಾಗ, ಕೇರಳದ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸ್‌ವಾದಿ) ಸಂಸದ ಜಾನ್ ಬ್ರಿಟ್ಟಾಸ್ ಅವರು, ಒಕ್ಕೂಟ ವ್ಯವಸ್ಥೆಯ ಮನೋಭಾವವನ್ನು ಗೌರವಿಸದ ಕೇಂದ್ರ ಸರ್ಕಾರದ ಧೋರಣೆಯನ್ನು ತೀವ್ರವಾಗಿ ಟೀಕಿಸಿದರು.

ತುರ್ತುಪರಿಸ್ಥಿತಿಯಲ್ಲಿ ಕಸಿದುಕೊಳ್ಳಲ್ಪಟ್ಟ ಹಕ್ಕು

ಬ್ರಿಟ್ಟಾಸ್ ತಮ್ಮ ಭಾಷಣದಲ್ಲಿ, ಐತಿಹಾಸಿಕ ಸಂಗತಿಗಳನ್ನು ಪ್ರಸ್ತುತಪಡಿಸುವ ಮೂಲಕ ಬಿಜೆಪಿಯ ದ್ವಂದ್ವ ನೀತಿಯನ್ನು ಬಹಿರಂಗಪಡಿಸಿದರು: "ಆಡಳಿತ ಪಕ್ಷದಲ್ಲಿರುವ ಎಲ್ಲಾ ಸದಸ್ಯರು ತುರ್ತುಪರಿಸ್ಥಿತಿಯನ್ನು ಖಂಡಿಸಿ ಮಾತನಾಡುತ್ತಾರೆ. ಆದರೆ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿಯೇ ಸಂವಿಧಾನದ 42ನೇ ತಿದ್ದುಪಡಿಯ ಮೂಲಕ ಶಿಕ್ಷಣವನ್ನು ರಾಜ್ಯ ಪಟ್ಟಿಯಿಂದ ತೆಗೆದುಹಾಕಲಾಯಿತು. ನೀವು (ಬಿಜೆಪಿ) ತುರ್ತುಪರಿಸ್ಥಿತಿಯನ್ನು ಖಂಡಿಸುವಲ್ಲಿ ನಿಜವಾಗಿಯೂ ಪ್ರಾಮಾಣಿಕರಾಗಿದ್ದರೆ, ಅಂದು ರಾಜ್ಯ ಪಟ್ಟಿಯಿಂದ ತೆಗೆದುಹಾಕಲಾದ ಶಿಕ್ಷಣವನ್ನು ಮತ್ತೆ ರಾಜ್ಯ ಸರ್ಕಾರಗಳಿಗೆ ಹಸ್ತಾಂತರಿಸಿ." ಎಂದು ಅವರು ಒತ್ತಾಯಪೂರ್ವಕವಾಗಿ ಮನವಿ ಮಾಡಿದರು.

ಕೇರಳ ಶಿಕ್ಷಣದಲ್ಲಿ ಮುಂಚೂಣಿಯಲ್ಲಿದೆ

"ನಾನು ಕೇರಳದಿಂದ ಬಂದಿದ್ದೇನೆ. ಶಿಕ್ಷಣದ ವಿಚಾರದಲ್ಲಿ ಭಾರತದಲ್ಲಿನ ಸರ್ಕಾರಗಳು ಹೇಗೆ ನಡೆದುಕೊಳ್ಳಬೇಕು ಎಂಬುದಕ್ಕೆ ಕೇರಳ ದಾರಿ ತೋರಿಸಿದೆ" ಎಂದು ಬ್ರಿಟ್ಟಾಸ್ ಹೆಮ್ಮೆಯಿಂದ ತಮ್ಮ ಮಾತು ಆರಂಭಿಸಿದರು. ದೇಶದ ವೈವಿಧ್ಯತೆಯನ್ನು ಗೌರವಿಸಬೇಕಾದ ಅಗತ್ಯವನ್ನು ಅವರು ಒತ್ತಿ ಹೇಳಿದರು. "ನಮ್ಮ ದೇಶವು ಶ್ರೀಮಂತ ವೈವಿಧ್ಯತೆಯನ್ನು ಹೊಂದಿರುವ ದೇಶ. ನೀವು ದೆಹಲಿಯಲ್ಲಿ ಕುಳಿತುಕೊಂಡು, ರಾಜ್ಯ ಸರ್ಕಾರಗಳಿಗೆ ಆದೇಶಗಳನ್ನು ಹೊರಡಿಸಿದರೆ, ಈ ವೈವಿಧ್ಯತೆ ಕೊನೆಗೊಳ್ಳುತ್ತದೆ" ಎಂದು ಅವರು ಎಚ್ಚರಿಸಿದರು.

ವಿಶ್ವವಿದ್ಯಾಲಯಗಳನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಯತ್ನ

ಉನ್ನತ ಶಿಕ್ಷಣದಲ್ಲಿ ಪ್ರಾಬಲ್ಯ ಸಾಧಿಸಲು ಬಿಜೆಪಿ ನೇತೃತ್ವದ ಸಮ್ಮಿಶ್ರ ಸರ್ಕಾರ ಮಾಡುತ್ತಿರುವ ಪ್ರಯತ್ನಗಳನ್ನು ಟೀಕಿಸಿದ ಬ್ರಿಟ್ಟಾಸ್, "ಈ ಸರ್ಕಾರವು ಉನ್ನತ ಶಿಕ್ಷಣ ಕ್ಷೇತ್ರವನ್ನು ಸಂಪೂರ್ಣವಾಗಿ ತನ್ನ ವಶಕ್ಕೆ ತೆಗೆದುಕೊಳ್ಳಲು ಬಯಸುತ್ತಿದೆ. ವಿಶ್ವವಿದ್ಯಾಲಯ ಅನುದಾನ ಆಯೋಗದ ಶಿಫಾರಸುಗಳು ಬಂದಿವೆ. ಈ ಶಿಫಾರಸುಗಳ ಪರಿಣಾಮಗಳು ಹೇಗಿರುತ್ತದೆ ಎಂದು ಅವರಿಗೆ ತಿಳಿದಿದೆ" ಎಂದು ಗಮನಸೆಳೆದರು.

ಜಾನ್ ಬ್ರಿಟ್ಟಾಸ್

"ದೇಶದಲ್ಲಿ 1,074 ವಿಶ್ವವಿದ್ಯಾಲಯಗಳಿವೆ. ಇವುಗಳಲ್ಲಿ 54 ಮಾತ್ರ ಕೇಂದ್ರೀಯ ವಿಶ್ವವಿದ್ಯಾಲಯಗಳಾಗಿವೆ. ಒಂದಷ್ಟು ಖಾಸಗಿ ವಿಶ್ವವಿದ್ಯಾಲಯಗಳೂ ಇವೆ. ರಾಜ್ಯಗಳ ರಕ್ತ ಮತ್ತು ಬೆವರಿನಿಂದ ನಿರ್ಮಿಸಲಾದ ಎಲ್ಲಾ ವಿಶ್ವವಿದ್ಯಾಲಯಗಳನ್ನು ಸ್ವಾಧೀನಪಡಿಸಿಕೊಳ್ಳಲು ಅವರು ಬಯಸುತ್ತಾರೆ" ಎಂದರು.

ಒಂದು ದೇಶ, ಒಂದು ಭಾಷೆ, ಒಂದು ಪಕ್ಷ ನೀತಿಗಳು ಅಪಾಯಕಾರಿ

ವೈವಿಧ್ಯತೆಯೇ ಭಾರತದ ಶಕ್ತಿ ಎಂದು ಒತ್ತಿ ಹೇಳಿದ ಬ್ರಿಟ್ಟಾಸ್, "ಈ ದೇಶದಲ್ಲಿರುವ ಪ್ರತಿಯೊಂದು ಭಾಷೆಯೂ ನಮ್ಮ ಭಾಷೆ. ಹಿಂದಿ ಕೂಡ ನಮ್ಮ ಭಾಷೆ. ಆದರೆ ಒಬ್ಬನೇ ನಾಯಕ, ಒಂದೇ ರಾಜಕೀಯ ಪಕ್ಷ, ಒಂದೇ ಭಾಷೆ ಎಂದು ಏಕರೂಪತೆ(uniformity)ಯನ್ನು ತರಲು ಬಯಸಿದರೆ, ಈ ದೇಶವು ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ. ಈ ದೇಶ ನಮ್ಮೆಲ್ಲರದ್ದು" ಎಂದು ಎಚ್ಚರಿಸಿದರು.

ಕೇಂದ್ರ ಯೋಜನೆಗಳಲ್ಲಿ ಜೋಕು

ಕೇಂದ್ರ ಸರ್ಕಾರದ ಯೋಜನೆಗಳ ನೈಜ ಸ್ವರೂಪವನ್ನು ತೆರೆದಿಟ್ಟ ಬ್ರಿಟಾಸ್, "ಕೇಂದ್ರ ಸರ್ಕಾರದ ಯೋಜನೆಗಳು ತುಂಬಾ ತಮಾಷೆಯಾಗಿವೆ. ಒಕ್ಕೂಟ ಸರ್ಕಾರವು ಕೆಲವು ಯೋಜನೆಗಳನ್ನು ಘೋಷಿಸುತ್ತದೆ. ಅದು ಸ್ವಲ್ಪವೇ ಹಣವನ್ನು ಹಂಚಿಕೆ ಮಾಡುತ್ತದೆ. ರಾಜ್ಯ ಸರ್ಕಾರಗಳು ಸಹ ಹಣವನ್ನು ಮೀಸಲಿಡಬೇಕು ಎಂದು ಅದು ಒತ್ತಾಯಿಸುತ್ತದೆ. ಆದರೆ ಇಡೀ ಯೋಜನೆಯನ್ನು ಕೇಂದ್ರ ಸರ್ಕಾರವೇ ಮಾಡುತ್ತಿದೆ ಎಂಬಂತೆ ಬಿಂಬಿಸಲಾಗಿದೆ. ರಾಜ್ಯ ಸರ್ಕಾರಗಳು ಒಟ್ಟು ಮೊತ್ತದ ನಾಲ್ಕನೇ ಮೂರು ಭಾಗವನ್ನು ವಸತಿ ಯೋಜನೆಗಳಿಗೆ ಖರ್ಚು ಮಾಡುತ್ತವೆ. ಆದರೆ ಅವರು ಆ ಯೋಜನೆಗಳನ್ನು ಕೇಂದ್ರ ಸರ್ಕಾರದ ಯೋಜನೆಗಳೆಂದು ಬ್ರಾಂಡ್ ಮಾಡಲು ಬಯಸುತ್ತಾರೆ. ಸಮಗ್ರ ಶಿಕ್ಷಾ ಅಭಿಯಾನ ಎಂಬ ಸಮಗ್ರ ಶಾಲಾ ಶಿಕ್ಷಣ ಯೋಜನೆಯು ಅಂತಹ ಒಂದು ಯೋಜನೆಯಾಗಿದೆ" ಎಂದು ಅವರು ವಿವರಿಸಿದರು.

ಕೇರಳಕ್ಕೆ ನಿಧಿ ತಡೆ

"ಕೇರಳಕ್ಕೆ ಬರಬೇಕಾದ 849 ಕೋಟಿ ರೂ.ಗಳನ್ನು ತಡೆಹಿಡಿಯಲಾಗಿದೆ. ಏಕೆ ಗೊತ್ತಾ? ನಾವು (ಕೇರಳ ಸರ್ಕಾರ) ಪಿಎಂ ಶ್ರೀ ಯೋಜನೆಯನ್ನು ಜಾರಿಗೆ ತಂದಿಲ್ಲ. ಪಿಎಂ ಶ್ರೀ ಯೋಜನೆಯು ಸಮಗ್ರ ಶಿಕ್ಷಾ ಅಭಿಯಾನದ ಭಾಗವಾಗಿರಲಿಲ್ಲ. ಪಿಎಂ ಶ್ರೀ ಯೋಜನೆಗೆ ಸಹ ರಾಜ್ಯ ಸರ್ಕಾರವು ಶೇಕಡಾ 40ರಷ್ಟು ಹಣವನ್ನು ವಿನಿಯೋಗಿಸಬೇಕಾಗಿದೆ." ಎಂದರು.

ಕೇರಳ ಪ್ರಗತಿ ಸಾಧಿಸಿದೆ

ಕೇರಳವು ಎಲ್ಲಾ ವಲಯಗಳಲ್ಲಿ ಪ್ರಗತಿ ಸಾಧಿಸುತ್ತಿದೆ. ಒಕ್ಕೂಟ ಸರ್ಕಾರದ ಕೆಲವು ಅಧಿಕಾರಿಗಳು ಕೆಲವು ಯೋಜನೆಗಳನ್ನು ಸಿದ್ಧಪಡಿಸಿ, ಅವುಗಳನ್ನು ನಾವು ಅನುಸರಿಸಬೇಕೆಂದು ಬಯಸುತ್ತಾರೆ. ನಾವು ಈಗಾಗಲೇ ಆ ಎಲ್ಲಾ ಹಂತಗಳನ್ನು ದಾಟಿದ್ದೇವೆ. ಬಿಹಾರಕ್ಕೆ ಯಾವುದು ಸೂಕ್ತವೋ, ಒಡಿಸ್ಸಾಗೆ ಯಾವುದು ಸೂಕ್ತವೋ, ಅದು ಕೇರಳಕ್ಕೆ ಅನ್ವಯವಾಗದೇ ಇರಬಹುದು. ಶಿಕ್ಷಣದ ವಿಷಯಕ್ಕೆ ಬಂದರೆ, ನಾವು ಈ ದೇಶಕ್ಕೇ ಬೆಳಕಾಗಿದ್ದೇವೆ" ಎಂದು ಅವರು ಹೆಮ್ಮೆಯಿಂದ ಹೇಳಿದರು.

ರಾಜ್ಯಗಳನ್ನು ಗೌರವಿಸಿ

ಕೊನೆಯಲ್ಲಿ, ಬ್ರಿಟಾಸ್ ಅವರು ಮೋದಿ ಸರ್ಕಾರಕ್ಕೆ ಗಂಭೀರವಾದ ಮನವಿ ಮಾಡಿದರು: "ಗೌರವಾನ್ವಿತ ಸಚಿವರು ಇಲ್ಲಿಯೇ ದೆಹಲಿಯಲ್ಲಿ ಕುಳಿತುಕೊಂಡು ಎಲ್ಲವನ್ನೂ ಕೇಂದ್ರೀಕೃತಗೊಳಿಸಿ ಕೆಲಸ ಮಾಡುವುದನ್ನು ನಿಲ್ಲಿಸಬೇಕು. ಇದನ್ನು ಸಂಪೂರ್ಣವಾಗಿ ನಿಲ್ಲಿಸಿ; ರಾಜ್ಯಗಳನ್ನು, ರಾಜ್ಯ ಸರ್ಕಾರಗಳನ್ನು ಗೌರವಿಸಿ. ಅಲ್ಲಿಯೂ ಪ್ರತಿಭಾನ್ವಿತರಿದ್ದಾರೆ ಎಂಬುದನ್ನು ಅರ್ಥಮಾಡಿಕೊಳ್ಳಿ. ಪ್ರತಿಯೊಂದು ರಾಜ್ಯ ಸರ್ಕಾರಕ್ಕೂ ಒಂದು ದೂರದೃಷ್ಟಿ ಇರುತ್ತದೆ. ದಯವಿಟ್ಟು ಭಾರತದ ಸಂವಿಧಾನದ ಭಾವನೆಗಳನ್ನು ಎತ್ತಿಹಿಡಿಯಿರಿ. ತುರ್ತುಪರಿಸ್ಥಿತಿ ಘೋಷಣೆಯ ಬಗೆಗಿನ ನಿಮ್ಮ ವಿರೋಧದಲ್ಲಿ ನೀವು (ಬಿಜೆಪಿ) ನಿಜವಾಗಿಯೂ ಪ್ರಾಮಾಣಿಕರಾಗಿದ್ದರೆ, ಶಿಕ್ಷಣವನ್ನು ಮತ್ತೆ ರಾಜ್ಯ ಪಟ್ಟಿಗೆ ತನ್ನಿ." ಎಂದು ಒಕ್ಕೂಟ ಸರ್ಕಾರಕ್ಕೆ ಮನವಿ ಮಾಡಿದರು.

ಅಲಹಾಬಾದ್ ಹೈಕೋರ್ಟ್‌ನ ಸನ್ಮಾನ್ಯ ನ್ಯಾಯಾಧೀಶರಾದ ಶ್ರೀ ರಾಮಮನೋಹರ ರಾಮಾಯಣ ಮಿಶ್ರಾ ಅವರು ಪೋಕ್ಸೋ ಕಾಯ್ದೆಗೆ ಸಂಬಂಧಪಟ್ಟಂತೆ ನೀಡಿದ ತೀರ್ಪು ಖಂಡನೀಯ

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಕರ್ನಾಟಕ ರಾಜ್ಯ ಸಮಿತಿಯು ಅಲಹಾಬಾದ್ ಹೈಕೋರ್ಟ್‌ನ ಸನ್ಮಾನ್ಯ ನ್ಯಾಯಾಧೀಶರಾದ ಶ್ರೀ ರಾಮಮನೋಹರ ರಾಮಾಯಣ ಮಿಶ್ರಾ ಅವರು ಪೋಕ್ಸೋ ಕಾಯ್ದೆಗೆ ಸಂಬಂಧಪಟ್ಟಂತೆ 11 ವರ್ಷದ ಬಾಲಕಿಯೊಬ್ಬಳ ಲೈಂಗಿಕ ದೌರ್ಜನ್ಯ ಕುರಿತು ನೀಡಿದ ತೀರ್ಪನ್ನು ಕಂಡು ಆಘಾತ ವ್ಯಕ್ತಪಡಿಸುವುದಲ್ಲದೆ ಸದರಿ ತೀರ್ಪು ಖಂಡನೀಯ ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

ಇಂಥ ತೀರ್ಪುಗಳು ಬಲತ್ಕಾರಿಗಳನ್ನು ಉತ್ತೇಜಿಸುತ್ತವೆ ಅಲ್ಲದೆ ಮಹಿಳೆಯರು ಮತ್ತು ಮಕ್ಕಳನ್ನು ಅಸುರಕ್ಷಿತ ವಲಯಕ್ಕೆ ದೂಡುತ್ತವೆ. ಮಹಿಳೆಯರ ರಕ್ಷಣೆ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತವೆ ಎಂದಿದೆ.

11 ವರ್ಷದ ಹೆಣ್ಣು ಮಗುವನ್ನು ಅವಳ ಮನೆಗೆ ಮುಟ್ಟಿಸುವ ನೆಪದಲ್ಲಿ ಬಲತ್ಕಾರಿ ದುಷ್ಟನೊಬ್ಬ ಆ ಮಗುವನ್ನು ಪಕ್ಕದ ಹುದುಲಿಗೆ ಕರೆದುಕೊಂಡು ಹೋಗಿ ಮುಟ್ಟಬಾರದ ಅಂಗವನ್ನು ಮುಟ್ಟುತ್ತ, ಮಗುವಿನ ಪೈಜಾಮದ ಲಾಡಿಯನ್ನು ಬಿಚ್ಚುತ್ತ ಅಸಹ್ಯವಾಗಿ ವರ್ತಿಸುವಷ್ಟರಲ್ಲಿ ಮಗು ಜೋರಾಗಿ ಕಿರುಚಿಕೊಂಡಾಗ ಅವಳ ಸಂಬಂಧಿಕರಾದ ದಾರಿಹೋಕರು ಚೀರುವಿಕೆಯನ್ನು ಆಲಿಸಿ ದುಷ್ಕರ್ಮಿಗಳನ್ನು ಬೆನ್ನಟ್ಟಿಸಿಕೊಂಡು ಹೋಗಿದ್ದರಿಂದ ಅವರು ಓಡಿ ಹೋಗಿದ್ದಾರೆ.

ತಕ್ಷಣವೇ ಕಾಸಗಂಜ್ ಟ್ರಾಯಲ್ ಕೋರ್ಟ್‌ನಲ್ಲಿ ದುಷ್ಕರ್ಮಿಗಳ ವಿರುದ್ಧ ಪೋಕ್ಸೋ ಕಾಯ್ದೆಯನ್ನು ಹೇರಲಾಯಿತ್ತಾದರೂ ಅಲಹಾಬಾದ್ ಉಚ್ಚ ನ್ಯಾಯಾಲಯ ಸದರಿ ಕೇಸ್‌ನ್ನು ತಿರುಗು ಮುರುಗು ಮಾಡಿದ್ದಲ್ಲದೆ ಇಡೀ ಪ್ರಕರಣವನ್ನು ದಿಕ್ಕು ತಪ್ಪಿಸಿದೆ. ಅದು ತನ್ನ ತೀರ್ಪಿನಲ್ಲಿ ಸ್ತನ ಹಿಸುಕುವುದು ಅಥವಾ ಪೈಜಾಮಾದ ಲಾಡಿ ಬಿಚ್ಚುವುದನ್ನು ಬಲತ್ಕಾರ ಎಂದು ಪರಿಗಣಿಸಲಾಗದು ಎಂದು ಹೇಳಿದೆಯಲ್ಲದೆ ಪೋಕ್ಸೋ ಕಾಯ್ದೆಗೆ ಒಳಪಡಿಸಲು ಸಮುಚಿತ ಆಧಾರಗಳು ಇಲ್ಲ. ಆದ್ದರಿಂದ ಸದರಿ ಕೇಸ್‌ನ್ನು ಪೋಕ್ಸೊ ಕಾಯ್ದೆಯಡಿಯಲ್ಲಿ ದಾಖಲಿಸದೆ ಲೈಂಗಿಕ ಕಿರಕುಳ ಮಾತ್ರವೆಂದು ಪರಿಗಣಿಸಬೇಕು ಎಂದು ಹೇಳಿದೆ.

ನಿರ್ಭಯ ಪ್ರಕರಣದ ನಂತರ ಮಹಿಳಾ ಹೋರಾಟಗಾರರು ಮತ್ತು ಸಾಮಾಜಿಕ ಕಾರ್ಯಕರ್ತರ ಸಮರಧೀರ ಹೋರಾಟದ ತರುವಾಯ ರಚನೆಯಾದ ಜೆ.ಎಸ್. ವರ್ಮಾ ಸಮಿತಿಯು ಅತ್ಯಾಚಾರದ ಪರಿಭಾಷೆಯನ್ನು ನಿರ್ದುಷ್ಟಗೊಳಿಸಿದೆ. ವರ್ಮಾ ಸಮಿತಿಯ ಶಿಫಾರಸ್ಸಿನಲ್ಲಿ ಮೆಜಿಸ್ಟ್ರೇಟ್ ಇದಿರುನಲ್ಲಿ ಅಪ್ರಾಪ್ತ ಬಾಲಕಿಯರ ಹೇಳಿಕೆಯು ಸಂಪೂರ್ಣ ಸಾಕ್ಷ್ಯವೆಂದು ಪರಿಗಣಿಸಬೇಕು ಎಂದಿದೆ. ಮಾನ್ಯ ಉಚ್ಚ ನ್ಯಾಯಾಲಯವು ಕೂಡ ತನ್ನೊಂದು ತೀರ್ಪಿನಲ್ಲಿ ಅಪ್ರಾಪ್ತ ಬಾಲಕಿಯ ಖಾಸಗಿ ಅಂಗಗಳನ್ನು ದುರುದ್ದೇಶದಿಂದ ಸ್ಪರ್ಶಿಸುವುದು ಕೂಡ ಬಲತ್ಕಾರವೆಂದೇ ಪರಿಗಣಿಸಬೇಕು ಎಂದು ಹೇಳಿದೆ. ಸುಪ್ರೀಂಕೋರ್ಟ್ ತತ್ಸಂಬಂಧಿ ಪ್ರಕರಣದಲ್ಲಿ ಮುಂಬೈ ಹೈಕೋರ್ಟ್‌ನ ತೀರ್ಪನ್ನು ಬದಲಾಯಿಸಿತ್ತು.

ಹೀಗಿರುವಾಗಲೂ ಅಲಹಾಬಾದ ಹೈಕೋರ್ಟ್ ಸಿಂಗಲ್ ಬೆಂಚಿನ ಈ ತೀರ್ಪು ಪ್ರಜ್ಞಾವಂತರನ್ನು ದಿಗ್ಭ್ರಮೆಗೊಳಿಸಿದೆ. ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆ ಮೇಲೆ ಅತ್ಯಂತ ನಕಾರಾತ್ಮಕ ಪರಿಣಾಮ ಬೀರುತ್ತದೆ. ಇಂಥ ತೀರ್ಪುಗಳು ಬಲತ್ಕಾರಿಗಳಿಗೆ ಕೆಟ್ಟ ರೀತಿಯಲ್ಲಿ ಕುಮ್ಮಕ್ಕು ನೀಡುತ್ತವೆ.

ಜನವಾದಿ ಮಹಿಳಾ ಸಂಘಟನೆಯು ಸದರಿ ತೀರ್ಪನ್ನು ಉಗ್ರವಾಗಿ ಖಂಡಿಸುತ್ತದೆ ಅಲ್ಲದೆ ಈ ದಿಸೆಯಲ್ಲಿ ಸುಪ್ರೀಂ ಕೋರ್ಟ್ ಸ್ವಯಂ ಪ್ರೇರಿತವಾಗಿ ಕೇಸ್ ನ್ನು ಕೈಗೆತ್ತಿಕೊಂಡು ಟ್ರಯಲ್ ಕೋರ್ಟ್ ನೀಡಿದ ತೀರ್ಪನ್ನು ಉರ್ಜಿತಗೊಳಿಸಿ ಬಲತ್ಕಾರಿಗಳಿಗೆ ಕಠಿಣವಾದ ಶಿಕ್ಷೆ ನೀಡಬೇಕೆಂದು ಆಗ್ರಹಿಸುತ್ತದೆ. ಇಂಥ ಮಹಿಳಾ ವಿರೋಧಿ ಹಾಗೂ ವಿವೇಚನಾರಹಿತ ತೀರ್ಪುಗಳಿಗೆ ಕಡಿವಾಣ ಹಾಕಬೇಕೆಂದು ಒತ್ತಾಯಿಸಿದೆ.

ಅಧ್ಯಕ್ಷ ಟ್ರಂಪ್ ಇತರ ದೇಶಗಳಿಂದ ಅಮೆರಿಕಕ್ಕೆ ಅನ್ಯಾಯವಾಗಿದೆ ಎಂಬ ಒಂದು ಅಸಮಾಧಾನವನ್ನು ಅಮೆರಿಕದ ಜನರಲ್ಲಿ ಉಂಟುಮಾಡಿದ್ದಾರೆ. ಆದರೆ ಇದು ನಿಜವಲ್ಲ. ವಿಶ್ವ ವ್ಯಾಪಾರ ಸಂಸ್ಥೆಯ ಮೂಲಕ ಹೇರಿದ ಜಾಗತೀಕರಣ ಅದಕ್ಕೆ ಬಹಳಷ್ಟು ಲಾಭಗಳನ್ನು ತಂದಿದೆ. ಅಧ್ಯಕ್ಷ ಟ್ರಂಪ್ ಗಮನಿಸದಿರುವ ವಿಷಯವೆಂದರೆ, ಅಮೆರಿಕವು ತನ್ನ ಗಡಿಯೊಳಗೆ ಹೆಚ್ಚು ವಸ್ತುಗಳನ್ನು ಉತ್ಪಾದಿಸಲು ಪ್ರಯತ್ನಿಸಿದರೆ, ಇತರ ರಾಷ್ಟ್ರಗಳು ಸಹ ಅದನ್ನೇ ಮಾಡುತ್ತವೆ. ಇದು ಅಮೆರಿಕಕ್ಕೆ ದೊರಕುತ್ತಿದ್ದ ಅನೇಕ ಪ್ರಯೋಜನಗಳನ್ನು ತಪ್ಪಿಸುತ್ತದೆ. ಡಾಲರೀಕರಣವು ಅಮೆರಿಕಕ್ಕೆ ತನ್ನ ವರಮಾನವನ್ನು ಮೀರಿ ಬದುಕಲು ಅನುವು ಮಾಡಿಕೊಟ್ಟಿರುವ ಸನ್ನಿವೇಶವನ್ನೂ ಬದಲಿಸುತ್ತದೆ. ಇದು ಜಗತ್ತಿಗೆ ನಿಜಕ್ಕೂ ಒಂದು ಸವಾಲು. ಇತರ ದೇಶಗಳು ಒಟ್ಟಾಗಿ ಕಾರ್ಯನಿರ್ವಹಿಸುವುದು ಸಾಧ್ಯವಾಗುತ್ತದೆಯೇ? ಜಗತ್ತು ಎಂದಿಗೂ 'ಮುಕ್ತ ವ್ಯಾಪಾರ' ಸನ್ನಿವೇಶದಲ್ಲಿ ಇರಲಿಲ್ಲ ಮತ್ತು ಈಗ ಒಂದು ವಿಭಿನ್ನ ಸನ್ನಿವೇಶ ತೆರೆದುಕೊಳ್ಳುತ್ತಿದೆ.

ಎನ್ನುತ್ತಾರೆ **ಪ್ರೊ. ಅರುಣ್ ಕುಮಾರ್**, ಹಿರಿಯ ಆರ್ಥಿಕ ತಜ್ಞ, ಜವಹರಲಾಲ್ ವಿಶ್ವವಿದ್ಯಾಲಯದ ನಿವೃತ್ತ ಅರ್ಥಶಾಸ್ತ್ರ ಪ್ರಾಧ್ಯಾಪಕರು.



ಅಮೆರಿಕದ 'ಸುಂಕ ಯುದ್ಧ –ಎಲ್ಲಿ ಹೋಯಿತು 'ಮುಕ್ತ ವ್ಯಾಪಾರ'ದ ಕಲ್ಪನೆ?

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ದಿನನಿತ್ಯವೂ ಸುಂಕ ವಿಧಿಸುವ ಬೆದರಿಕೆ ಹಾಕುತ್ತಾರೆ. ಅಂತಾರಾಷ್ಟ್ರೀಯ ವ್ಯಾಪಾರದಲ್ಲಿ ಟ್ರಂಪ್ ಮಾಡಬಯಸುವ ಬದಲಾವಣೆಗಳು ದೇಶ ದೇಶಗಳನ್ನು ಮತ್ತು ಹಣಕಾಸು ಮಾರುಕಟ್ಟೆಗಳನ್ನು ಪ್ರಕ್ಷುಬ್ಧಗೊಳಿಸಿವೆ ಮತ್ತು ಅನಿಶ್ಚಿತತೆಯನ್ನು ಸೃಷ್ಟಿಸುತ್ತಿವೆ. ಈ ಬದಲಾವಣೆಗಳಿಂದ ತೊಂದರೆಗೊಳಗಾಗುವ ದೇಶಗಳು ಈ ಬದಲಾವಣೆಗಳು ಕಾರ್ಯಗತವಾಗುತ್ತವೆಯೋ ಅಥವಾ ಇಲ್ಲವೋ? ಪ್ರತೀಕಾರದ ಕ್ರಮಗಳನ್ನು ಕೈಗೊಳ್ಳಬೇಕೇ ಅಥವಾ ಕಾಯಬೇಕೇ? ಎಂಬುದರ ಬಗ್ಗೆ ಗೊಂದಲದಲ್ಲಿವೆ. ಪ್ರತೀಕಾರದ ಕ್ರಮಗಳನ್ನು ಕೈಗೊಂಡರೆ, ಸುಂಕಗಳನ್ನು ಮತ್ತಷ್ಟು ಏರಿಸುವುದಾಗಿ ಟ್ರಂಪ್ ಒತ್ತಿ ಹೇಳುತ್ತಾರೆ. ಕಾದು ನೋಡುವ ನಿಲುವು ತಳೆದರೆ, ಅವರನ್ನು ಟ್ರಂಪ್ ಭಯಪಡಿಸುವಲ್ಲಿ ಯಶಸ್ವಿಯಾದಂತಾಗುತ್ತದೆ. ಆದರೆ, ಈ ಬಗ್ಗೆ ಭಾರತದ ಅಧಿಕಾರಿಗಳು ಮೌನವಾಗಿದ್ದಾರೆ. ಮಾತ್ರವಲ್ಲ, ಅಮೆರಿಕ ಆಸಕ್ತಿ ಹೊಂದಿರುವ ಸರಕುಗಳ ಮೇಲಿನ ಸುಂಕವನ್ನು ಭಾರತ ಅದಾಗಲೇ ಇಳಿಕೆ ಮಾಡಿಯಾಗಿದೆ.

ಯುಎಸ್ ಕಾಂಗ್ರೆಸ್‌ನ ಜಂಟಿ ಸದನಗಳನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ, ಟ್ರಂಪ್ ತಮ್ಮ ಕಾರ್ಯತಂತ್ರವನ್ನು ವಿವರಿಸಿದ್ದಾರೆ. ಸ್ನೇಹಿತರೇ ಇರಲಿ ಅಥವಾ ಶತ್ರುಗಳೇ ಇರಲಿ, ಎಲ್ಲರ ಮೇಲೂ ಅವರುಗಳು ವಿಧಿಸುವಷ್ಟೇ ಪ್ರಮಾಣದ ಸುಂಕಗಳನ್ನು ವಿಧಿಸಲಾಗುವುದು ಎಂದು ಘೋಷಿಸಿದ್ದಾರೆ. ಎರಡು ಬಾರಿ ಭಾರತದ ಹೆಸರನ್ನು ಉಲ್ಲೇಖಿಸಿದ ಅವರು, ಭಾರತವನ್ನು 'ಸುಂಕಗಳ ರಾಜ' ಎಂದು ಕರೆದಿದ್ದಾರೆ. "ಇತರ ದೇಶಗಳು ನಮ್ಮ ಮೇಲೆ ಎಷ್ಟು ಸುಂಕ ವಿಧಿಸುತ್ತಾರೋ, ಅವರ ಮೇಲೆ ನಾವೂ ಸಹ ಅಷ್ಟೇ ಸುಂಕ ವಿಧಿಸುತ್ತೇವೆ".... "ದಶಕಗಳಿಂದಲೂ ಇತರ ದೇಶಗಳು ನಮ್ಮ ವಿರುದ್ಧ ಸುಂಕಗಳನ್ನು ವಿಧಿಸುತ್ತಿವೆ. ಈಗ ಅವುಗಳ ಮೇಲೆ ಸುಂಕ ವಿಧಿಸುವ ಸರದಿ ನಮ್ಮದು".

'ಸುಂಕ' ಎಂಬುದು "ಒಂದು ಸುಂದರವಾದ ಪದ" ಎಂದರು

ಮಾರ್ಚ್ 4 ರಂದು, ಅಮೆರಿಕದ ಅತಿದೊಡ್ಡ ವ್ಯಾಪಾರ ಪಾಲುದಾರ ದೇಶಗಳಾದ ಮೆಕ್ಸಿಕೊ, ಕೆನಡಾ ಮತ್ತು ಚೀನಾದ ಮೇಲೆ ಸುಂಕಗಳನ್ನು ವಿಧಿಸಲಾಗಿದೆ. ಅಮೆರಿಕಾದಿಂದ ಆಮದು ಮಾಡಿಕೊಳ್ಳುವ ವಸ್ತುಗಳ ಮೇಲೆ ಸುಂಕ ವಿಧಿಸುವ ಮೂಲಕ, ಚೀನಾ ಮತ್ತು ಕೆನಡಾ ತಮ್ಮ ಪ್ರತೀಕಾರವನ್ನು ತೀರಿಸಿಕೊಂಡವು. ಫೆಬ್ರವರಿಯಲ್ಲಿ ಸುಂಕಗಳನ್ನು ವಿಧಿಸುವುದಾಗಿ ಘೋಷಿಸಿದಾಗ, ರಿಯಾಯಿತಿಗಳನ್ನು ಪಡೆಯಲು ಅದೊಂದು ಬೆದರಿಕೆಯ ತಂತ್ರವೆಂದು ಪರಿಗಣಿಸಲಾಯಿತು. ಎಲ್ಲರಿಗೂ ಸುಂಕಗಳು ಉಂಟುಮಾಡಬಹುದಾದ ಪ್ರತಿಕೂಲ ಪರಿಣಾಮವನ್ನು ಪರಿಗಣಿಸಿ, ಸುಂಕ ನೀತಿಯು ಅಂತಿಮವಾಗಿ ಜಾರಿಯಾಗುವುದಿಲ್ಲ ಎಂದು ಕೆಲವರು ಭಾವಿಸಿದರು. ಆದಾಗ್ಯೂ, ಮಾರ್ಚ್ 6 ರಂದು, ಒಂದು ತಿಂಗಳ ವಿರಾಮದ ನಂತರ, ಕೆನಡಾ ಮತ್ತು ಮೆಕ್ಸಿಕೊದಿಂದ ಆಮದುಮಾಡಿಕೊಳ್ಳುವ ಸರಕುಗಳ ಮೇಲೆ ಸುಂಕಗಳನ್ನು ಘೋಷಿಸಲಾಯಿತು. ಮಾರ್ಚ್ 11 ರಂದು, ಉಕ್ಕು ಮತ್ತು ಅಲ್ಯೂಮಿನಿಯಂ ಸೇರಿದಂತೆ ಎಲ್ಲಾ ಆಮದುಗಳ ಮೇಲೂ ಸುಂಕಗಳನ್ನು ವಿಧಿಸಲಾಯಿತು. ಈ ಬಗ್ಗೆ ಸ್ಪಷ್ಟತೆಯ ಬದಲಿಗೆ ಅನಿಶ್ಚಿತತೆಯೇ ಮುಂದುವರೆದಿದೆ.

ಆದರೆ, ಕೆನಡಾ ಮತ್ತು ಮೆಕ್ಸಿಕೋ ದೇಶಗಳು ಅಮೆರಿಕದೊಂದಿಗಿನ ಒಂದು ಮುಕ್ತ ವ್ಯಾಪಾರ ಒಪ್ಪಂದದ ಭಾಗವಾಗಿರುವುದರಿಂದ ಸುಂಕಗಳು ಈವರೆಗೆ ಸಮಸ್ಯೆಯಾಗಿರಲಿಲ್ಲ. ಕೃತಕ ಔಷಧ ಫೆಂಟನಿಲ್ ಕೆನಡಾ ಮತ್ತು ಮೆಕ್ಸಿಕೋ ದೇಶಗಳಿಂದ ಬರುತ್ತಿದೆ ಎಂಬುದು ಅಧ್ಯಕ್ಷ ಟ್ರಂಪ್ ಅವರ ಆಪಾದನೆ. ಆದರೆ, ಕೆನಡಾದಿಂದ ಅಮೆರಿಕಕ್ಕೆ ಪ್ರವೇಶಿಸುವ ಈ ಔಷಧವು ಒಂದು ಅತ್ಯಲ್ಪ ಪ್ರಮಾಣದಲ್ಲಿರುವುದರಿಂದ, ಕೆನಡಾದ ಅರ್ಥವ್ಯವಸ್ಥೆಯನ್ನು ಕುಸಿಯುವಂತೆ ಮಾಡುವುದೇ ಟ್ರಂಪ್ ಅವರ ನಿಜ ಉದ್ದೇಶವಾಗಿರುವುದರಿಂದ, ಅಧಿಕ ಸುಂಕ ಹೇರುವ ಕ್ರಮವು ಕೇವಲ ಒಂದು ತಂತ್ರ ಎಂದು ಕೆನಡಾದ ಪ್ರಧಾನಿ ವಾದಿಸಿದ್ದಾರೆ. ಅದೇ ಪ್ರಮಾಣದ ಸುಂಕಗಳನ್ನು ಘೋಷಿಸುವಾಗ, ಅಮೆರಿಕ ಮತ್ತು ಕೆನಡಾ ಎರಡೂ ದೇಶಗಳ ನಾಗರಿಕರಿಗೆ ತೊಂದರೆಯಾಗುತ್ತದೆಯಾದ್ದರಿಂದ ಅಮೆರಿಕದ ನಡೆಯನ್ನು "ಮೂಕ ಕ್ರಮ" ಎಂದು ಕೆನಡಾದ ಪ್ರಧಾನಿ ಕರೆದರು.

ಚೀನಾ ಕೂಡ ಫೆಂಟನಿಲ್ ಡ್ರಗ್ ವಾದವನ್ನು ಒಪ್ಪಲಿಲ್ಲ. ಅಮೆರಿಕದ ಸುಂಕಗಳನ್ನು ಬೆದರಿಕೆಯ ಮೂಲಕ ಒತ್ತಡಕ್ಕೊಳಪಡಿಸುವ ಒಂದು ಕ್ರಮ (ಬ್ಲ್ಯಾಕ್‌ಮೇಲ್) ಎಂದು ಹೇಳಿರುವ ಚೀನಾ, ವಿಶ್ವ ಉತ್ಪಾದನೆಯಲ್ಲಿ ಶೇ. 90ರಷ್ಟು ಪಾಲು ಹೊಂದಿರುವ ಅಪರೂಪದ ಲೋಹಗಳ ರಫ್ತಿನ ಮೇಲೆ ಗಮನಾರ್ಹ ನಿಯಂತ್ರಣಗಳನ್ನು ಹೇರುವ ಮೂಲಕ ತನ್ನ ಪ್ರತೀಕಾರವನ್ನು ತೀರಿಸಿಕೊಂಡಿತು. ಆದರೆ, ಅಮೆರಿಕ ಸುಂಕ ವಿಧಿಸುವ ಬಗ್ಗೆ ಮೀನ–ಮೇಷ ಎಣಿಸುತ್ತಿದ್ದಾಗ, ಮೆಕ್ಸಿಕೋ ತನ್ನ ಪ್ರತಿಸುಂಕದ ಕ್ರಮವನ್ನು ಘೋಷಿಸುವಲ್ಲಿ ವಿಳಂಬ ಮಾಡಿತು.

ಭಾರತ ಅಮೆರಿಕದೊಂದಿಗೆ ವ್ಯಾಪಾರ ಒಪ್ಪಂದದ ಬಗ್ಗೆ ಮಾತುಕತೆ ನಡೆಸುತ್ತಿದೆ. ಟ್ರಂಪ್ "ಅವರು ಈಗ ತಮ್ಮ ಸುಂಕಗಳನ್ನು ಕಡಿತಗೊಳಿಸಲು ಬಯಸುತ್ತಾರೆ ಏಕೆಂದರೆ, ಕೊನೆಗೂ ಯಾರೋ ಒಬ್ಬರು ಅವುಗಳನ್ನು ಬಹಿರಂಗಪಡಿಸಿದ್ದಾರೆ" ಎಂದು ಟ್ರಂಪ್ ಹೇಳಿದ್ದಾರೆ. ಆದರೆ, ಇದನ್ನು ಭಾರತ ಅಧಿಕೃತವಾಗಿ ನಿರಾಕರಿಸಿದೆ. ಭಾರತಕ್ಕೆ ಆಮದಾಗುವ ಅಮೆರಿಕದ ಸರಕುಗಳ ಮೇಲಿನ ಸುಂಕವನ್ನು ಕಡಿತಗೊಳಿಸುವುದರಿಂದ ಭಾರತದ ಕೃಷಿ ಮತ್ತು ಕೈಗಾರಿಕೆಗಳಿಗೆ ಹಾನಿಯಾಗುತ್ತದೆ. 2025–26ರ ಬಜೆಟ್‌ನಲ್ಲಿ, ಅಮೆರಿಕದ ಆಸಕ್ತಿಯ ವಸ್ತುಗಳ ಮೇಲಿನ ಸುಂಕಗಳನ್ನು ಕಡಿಮೆ ಮಾಡಲಾಗಿದೆ.



'ಸುಂಕ ಯುದ್ಧ'ದ ಉದ್ದೇಶ ಮತ್ತು ವೈರುಧ್ಯಮಯ ಪ್ರವೃತ್ತಿಗಳು

ಇತರ ದೇಶಗಳು ಒಟ್ಟಿಗೆ ಸೇರದಂತೆ ಮಾಡುವ ಉದ್ದೇಶದಿಂದ ಒಂದೊಂದು ದೇಶದೊಂದಿಗೂ ಪ್ರತ್ಯೇಕ ಪ್ರತ್ಯೇಕವಾಗಿ ಟ್ರಂಪ್ ವ್ಯವಹರಿಸುತ್ತಿದ್ದಾರೆಯೇ? ಅಮೆರಿಕಕ್ಕೆ ರಿಯಾಯಿತಿಗಳನ್ನು ಪಡೆಯಲು ಅವರು ಸುಂಕಗಳ ಬೆದರಿಕೆಯನ್ನು ಬಳಸುತ್ತಿದ್ದಾರೆ ಎಂಬುದು ಸ್ಪಷ್ಟವಾಗಿದೆ. ಆದರೆ, ಅದು ಅಮೆರಿಕಕ್ಕೆ ತಿರುಗುಬಾಣವೇ ಆಗಬಹುದು. ಸುಂಕಗಳನ್ನು ವಿಧಿಸುವ ಅಮೆರಿಕದ ಕ್ರಮವನ್ನು ವಾರೆನ್ ಬಫೆಟ್ "ಯುದ್ಧ ಕೃತ್ಯ" ಎಂದು ಬಣ್ಣಿಸಿದ್ದಾರೆ.

ಉದ್ದಿಮೆಗಳು ಮತ್ತೆ ಅಮೆರಿಕಕ್ಕೆ ವಾಪಸಾಗುವಂತೆ ಬಲವಂತಪಡಿಸುವ ಉದ್ದೇಶದಿಂದ ಸುಂಕ ವಿಧಿಸುವ ಬೆದರಿಕೆಯನ್ನು ಟ್ರಂಪ್ ಬಳಸುತ್ತಿದ್ದಾರೆ. ಅಮೆರಿಕ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಸುಂಕಗಳನ್ನು ವಿಧಿಸುವ ಟ್ರಂಪ್ ಅವರ ಕ್ರಮವು ಈ ಸರಕುಗಳ ಮಾರಾಟದ ಬೆಲೆಗಳನ್ನು ಏರಿಸುತ್ತದೆ. ಆಮದು ಸರಕುಗಳ ಬೆಲೆಗಳು ಬಲು ತುಟ್ಟಿಯಾಗುವುದರಿಂದ, ಬೇಡಿಕೆಯು ಅಮೆರಿಕದಲ್ಲೇ ಉತ್ಪಾದಿಸಿದ ಸರಕುಗಳಿಗೆ ಬದಲಾಗಬಹುದು ಎಂದು ನಿರೀಕ್ಷಿಸಲಾಗಿದೆ. ಆದರೆ, ವಿಷಯ ಅಷ್ಟು ಸರಳವಲ್ಲ. ಸರಕುಗಳ ಉತ್ಪಾದನೆಯನ್ನು ಆಂತರಿಕವಾಗಿ ಹೆಚ್ಚಿಸಿಕೊಳ್ಳಲು ಸಾಕಷ್ಟು ಸಮಯ ಹಿಡಿಯುತ್ತದೆ. ಅಮೆರಿಕದಲ್ಲಿ ಕೂಲಿ/ವೇತನಗಳು ಉನ್ನತವಾಗಿರುವುದರಿಂದ ಆ ಮಟ್ಟದ ಕೂಲಿ ನೀಡಿದಾಗ ಸರಕು ಬೆಲೆಗಳು ಬಲು ದುಬಾರಿಯಾಗುತ್ತವೆ. ಈ ಸರಕುಗಳನ್ನು ಇತರ ದೇಶಗಳಿಂದಲೂ ಆಮದು ಮಾಡಿಕೊಳ್ಳಬಹುದು. ಆದರೆ, ಅದೂ ಕೂಡ ಸಮಯ ತೆಗೆದುಕೊಳ್ಳುತ್ತದೆ ಮಾತ್ರವಲ್ಲ ದುಬಾರಿಯೂ ಆಗುತ್ತದೆ. ಆದ್ದರಿಂದ, ಈ ಪೂರೈಕೆ ಮಾರ್ಗಗಳು ಅಡಚಣೆಗೊಳಗಾಗುತ್ತವೆ, ಉತ್ಪಾದನೆಯ ಮೇಲೆ ಪರಿಣಾಮ ಬೀರುತ್ತವೆ, ಬೆಲೆಗಳು ದುಬಾರಿಯಾಗುತ್ತವೆ ಮತ್ತು ಬೇಡಿಕೆ ಇಳಿಕೆಯಾಗುತ್ತದೆ.

ಈ ಎಲ್ಲ ಕ್ರಮಗಳೂ ಅರ್ಥವ್ಯವಸ್ಥೆಯ ಸ್ಥಗಿತತೆ–ಹಣದುಬ್ಬರದ ಪರಿಸ್ಥಿತಿಗಳಿಗೆ ಕಾರಣವಾಗುತ್ತವೆ. ಸರ್ಕಾರದ ವ್ಯಾಪ್ತಿಯನ್ನು ಮೊಟಕುಗೊಳಿಸುವ ಟ್ರಂಪ್ ಅವರ ಬಯಕೆಯಿಂದ ಅವು ಉಲ್ಬಣಗೊಳ್ಳುತ್ತವೆ. ಇದು ಬಲಪಂಥೀಯ ಕಾರ್ಯಸೂಚಿಯೂ ಹೌದು. ಈ ಕಾರ್ಯಸೂಚಿಯನ್ನು ಸಕ್ರಿಯಗೊಳಿಸಲು ಎಲೋನ್ ಮಸ್ಕ್ ನೇತೃತ್ವದಲ್ಲಿ 'ಸರ್ಕಾರ ದಕ್ಷತಾ ಇಲಾಖೆ'(ಎಂಒಜಿಇ)ಯನ್ನು ಸ್ಥಾಪಿಸಲಾಗಿದೆ. ಸರ್ಕಾರದ ಸಿಬ್ಬಂದಿಯನ್ನು ವಜಾಗೊಳಿಸುವ ಮೂಲಕ ಮತ್ತು ಅಮೆರಿಕ ನೆರವು ಸಂಸ್ಥೆ (ಯುಎಸ್‌ಏಡ್) ಮತ್ತು ಶಿಕ್ಷಣದಂತಹ ಇಲಾಖೆಗಳನ್ನು ಮುಚ್ಚುವ ಮೂಲಕ ಸರ್ಕಾರಿ ವೆಚ್ಚವನ್ನು ಕಡಿತಗೊಳಿಸುತ್ತಿದ್ದಾರೆ. ಇದು ಬೇಡಿಕೆಯನ್ನು ಇಳಿಕೆ ಮಾಡುತ್ತದೆ ಮತ್ತು ಸಾರ್ವಜನಿಕ ಸೇವೆಗಳನ್ನು ಮೊಟಕುಗೊಳಿಸುತ್ತದೆ. ಇವೆಲ್ಲವೂ ಅಮೆರಿಕದ ಅರ್ಥವ್ಯವಸ್ಥೆಯನ್ನು ಒಂದು ಆರ್ಥಿಕ ಹಿಂಜರಿತಕ್ಕೆ ತಳ್ಳಬಹುದು. ಇಲ್ಲಿ ಎರಡು ವೈರುಧ್ಯಮಯ ಪ್ರವೃತ್ತಿಗಳಿವೆ: ಒಂದು, ಸರ್ಕಾರದ ವ್ಯಾಪ್ತಿಯನ್ನು ಮೊಟಕುಗೊಳಿಸುವ ಮೂಲಕ ಸರ್ಕಾರದ ಮಧ್ಯಪ್ರವೇಶದಿಂದ ಮಾರುಕಟ್ಟೆಯನ್ನು ಮುಕ್ತಗೊಳಿಸುವುದು. ಮತ್ತೊಂದು, ಸರ್ಕಾರದ ಬಲವನ್ನು ಬಳಸಿಕೊಂಡು ಕೈಗಾರಿಕೆಗಳು ಮರಳಿ ಅಮೆರಿಕಕ್ಕೆ ಸ್ಥಳಾಂತರಿಸುವಂತೆ ಬಲವಂತಪಡಿಸುವುದು.

ಅಮೆರಿಕಕ್ಕೆ ನಿಜವಾಗಿಯೂ ಅನ್ಯಾಯವಾಗಿದೆಯೇ?

ಅಮೆರಿಕದಿಂದ ಚೀನಾ, ಭಾರತ ಮತ್ತು ಮೆಕ್ಸಿಕೊ ದೇಶಗಳಿಗೆ ಹೊರಹೋದ

ಉದ್ಯೋಗಗಳನ್ನು ಮರಳಿ ತರಲು ಟ್ರಂಪ್ ಬಯಸುತ್ತಾರೆ. ಆದರೆ ಹಾಗೆ ಮಾಡಿದಾಗ, ಅಮೆರಿಕದಲ್ಲಿ ದೈನಂದಿನ ಅಗತ್ಯ ವಸ್ತುಗಳ ಬೆಲೆಗಳು ಏರುತ್ತಾ ಹೋಗುತ್ತವೆ. ಆದರೆ, ಅಧ್ಯಕ್ಷ ಟ್ರಂಪ್ ಇತರ ದೇಶಗಳಿಂದ ಅಮೆರಿಕಕ್ಕೆ ಅನ್ಯಾಯವಾಗಿದೆ ಎಂಬ ಒಂದು ಅಸಮಾಧಾನವನ್ನು ಅಮೆರಿಕದ ಜನರಲ್ಲಿ ಉಂಟುಮಾಡಿದ್ದಾರೆ. ಆದರೆ ಇದು ನಿಜವೇ?

1991ರ ವೇಳೆಗೆ ಸೋವಿಯತ್ ಒಕ್ಕೂಟವು ಪತನವಾದ ನಂತರ, ಅಮೆರಿಕವು ಇಡೀ ವಿಶ್ವದ ರಾಜಕೀಯ, ಆರ್ಥಿಕ ಮತ್ತು ವ್ಯಾಪಾರ ವಲಯಗಳ ಮೇಲೆ ತನ್ನ ಪ್ರಾಬಲ್ಯವನ್ನು ಚಲಾಯಿಸಿದೆ. ಅಭಿವೃದ್ಧಿಶೀಲ ದೇಶಗಳಿಗೆ ಅಮೆರಿಕ ನೇತೃತ್ವದ ಮುಂದುವರಿದ ಬಂಡವಾಳಶಾಹಿ ದೇಶಗಳ ಪ್ರಾಬಲ್ಯವನ್ನು ಒಪ್ಪಿಕೊಳ್ಳುವುದನ್ನು ಬಿಟ್ಟು ಬೇರೆ ದಾರಿಯೇ ಇರಲಿಲ್ಲ.

ಈ 'ಸುಂಕ ಯುದ್ಧ'ವು, 1990ರ ದಶಕದ ಮಧ್ಯಭಾಗದಲ್ಲಿ ವಿಶ್ವ ವ್ಯಾಪಾರ ಸಂಘಟನೆಯು ರಚನೆಯಾದ ನಂತರದ ಕಾಲಮಾನದಲ್ಲಿ ಚಾಲ್ತಿಯಲ್ಲಿದ್ದ ಜಾಗತಿಕ ವ್ಯಾಪಾರ ವ್ಯವಸ್ಥೆಗೆ ಒಂದು ದೊಡ್ಡ ಹಿನ್ನಡೆಯಾಗಿದೆ ಎಂಬುದನ್ನು ಸೂಚಿಸುತ್ತದೆ. ಗ್ಯಾಟ್ ವ್ಯವಸ್ಥೆಯನ್ನು ವಿಶ್ವ ವ್ಯಾಪಾರ ಸಂಸ್ಥೆಯೊಂದಿಗೆ ಬದಲಾಯಿಸುವ ಕ್ರಮವು 1980ರ ದಶಕದ ಆರಂಭದಲ್ಲಿ ಸೋವಿಯತ್ ಒಕ್ಕೂಟ ದುರ್ಬಲಗೊಳ್ಳಲಾರಂಭಿಸಿದಾಗ ಪ್ರಾರಂಭವಾಯಿತು. 1987ರಲ್ಲಿ ಪುಯೆಂಟಾ ಡೆಲ್ ಎಸ್ಟೆಯಲ್ಲಿ ನಡೆದ ಉರುಗ್ವೆ ಸುತ್ತಿನ ಗ್ಯಾಟ್ ಮಾತುಕತೆಗಳಲ್ಲಿ ಹೊಸ ವಿಷಯಗಳನ್ನು ಪ್ರಸ್ತಾಪಿಸಲಾಯಿತು. ಮುಂದುವರಿದ ದೇಶಗಳ ಹಿತಾಸಕ್ತಿಗಳನ್ನು ಬಹಳವಾಗಿ ಆಧರಿಸಿದ ಡಂಕೆಲ್ ಕರಡು ಪ್ರಸ್ತಾಪಗಳು 1990ರಲ್ಲಿ ಜಾರಿಗೆ ಬಂದವು ಮತ್ತು ವಿಶ್ವ ವ್ಯಾಪಾರ ಸಂಸ್ಥೆಯನ್ನು ಸಂಘಟಿಸುವ ಒಪ್ಪಂದಕ್ಕೆ ಏಪ್ರಿಲ್ 15, 1994ರಂದು ಮರ್ರಕೇಶ್‌ನಲ್ಲಿ ಸಹಿ ಮಾಡಲಾಯಿತು ಮತ್ತು ವಿಶ್ವ ವ್ಯಾಪಾರ ಸಂಸ್ಥೆಯು ಜನವರಿ 1, 1995ರಂದು ಅಸ್ತಿತ್ವಕ್ಕೆ ಬಂತು. ಗ್ಯಾಟ್ ಒಪ್ಪಂದವು ಕೈಗಾರಿಕಾ ಸರಕುಗಳ ವ್ಯಾಪಾರಕ್ಕೆ ಮಾತ್ರ ಸಂಬಂಧಿಸಿದ್ದರೂ, ವಿಶ್ವ ವ್ಯಾಪಾರ ಸಂಸ್ಥೆಯು ಕೃಷಿ, ಸೇವೆಗಳು, ಬೌದ್ಧಿಕ ಆಸ್ತಿ ಹಕ್ಕುಗಳು ಇತ್ಯಾದಿಗಳನ್ನು ವ್ಯಾಪಾರ ಮಾತುಕತೆಗಳ ವ್ಯಾಪ್ತಿಗೆ ತಂದಿತು.

ಇದು ಒಂದು ಸಮಗ್ರ ವ್ಯಾಪಾರ ಒಪ್ಪಂದವಾಗಿದ್ದು, ಮುಂದುವರಿದ ಬಂಡವಾಳಶಾಹಿ ದೇಶಗಳು ಅಭಿವೃದ್ಧಿಶೀಲ ದೇಶಗಳ ಮಾರುಕಟ್ಟೆಗಳನ್ನು ಪ್ರವೇಶಿಸಲು ಅನುವು ಮಾಡಿಕೊಡುವ ಮೂಲಕ ಅವರಿಗೆ ಹೆಚ್ಚಿನ ಅನುಕೂಲ ಮಾಡಿಕೊಟ್ಟಿತು. ಅಭಿವೃದ್ಧಿಶೀಲ ದೇಶಗಳು ಡಂಕೆಲ್ ಕರಡು ಪ್ರಸ್ತಾಪಗಳನ್ನು ವಿರೋಧಿಸಿದವು. ಅವರಿಗೆ "ಒಪ್ಪಿಕೊಳ್ಳಿ ಅಥವಾ ಬಿಟ್ಟುಬಿಡಿ", ಅಂದರೆ ವಿಶ್ವ ವ್ಯಾಪಾರ ಸಂಸ್ಥೆಗೆ ಸೇರಿಕೊಳ್ಳಿ ಅಥವಾ ಬಿಟ್ಟುಬಿಡಿ ಎಂದು ಹೇಳಲಾಯಿತು. ಅಭಿವೃದ್ಧಿಶೀಲ ದೇಶಗಳ ಅತಿ ದೊಡ್ಡ ವ್ಯಾಪಾರ ಪಾಲುದಾರರು ಮುಂದುವರಿದ ಬಂಡವಾಳಶಾಹಿ ದೇಶಗಳೇ ಆಗಿರುವುದರಿಂದ ಮತ್ತು ಅಭಿವೃದ್ಧಿಶೀಲ ದೇಶಗಳು ಅವರೊಂದಿಗೆ ದ್ವಿಪಕ್ಷೀಯವಾಗಿ ಚೌಕಾಶಿ ಮಾಡಿದ ನಂತರವೂ ಅವರು ಹೇಳಿದ್ದನ್ನೇ ಒಪ್ಪಿಕೊಳ್ಳುವುದು ಅನಿವಾರ್ಯವಾಗಿದ್ದುದರಿಂದ, ಅಭಿವೃದ್ಧಿಶೀಲ ದೇಶಗಳಿಗೆ ವಿಶ್ವ ವ್ಯಾಪಾರ ಸಂಸ್ಥೆಯನ್ನು ಸೇರದಿರುವುದು ಒಂದು ಆಯ್ಕೆಯೇ ಆಗಿರಲಿಲ್ಲ. ದ್ವಿಪಕ್ಷೀಯ ಅಥವಾ ಬಹುಪಕ್ಷೀಯ ಬಲವಂತವೇ ಅವರ ಆಯ್ಕೆಯಾಗಿತ್ತು. ಅಭಿವೃದ್ಧಿಶೀಲ ದೇಶಗಳು ಬಹುಪಕ್ಷೀಯತೆಯನ್ನು ಆಯ್ಕೆಮಾಡಿಕೊಂಡು ಮರ್ರಕೇಶ್‌ನಲ್ಲಿ ಸಹಿ ಹಾಕಿದವು.

ತನಗೆ ಬೇಕಾದ್ದನ್ನು ಪಡೆದ ಅಮೆರಿಕ

ವಿಶ್ವ ವ್ಯಾಪಾರ ಸಂಸ್ಥೆಯಲ್ಲಿ ನಡೆಯುತ್ತಿದ್ದ ಅಮೆರಿಕ ನೇತೃತ್ವದ ಮಾತುಕತೆಗಳಲ್ಲಿ ತನಗೆ ಏನು ಬೇಕಿತ್ತೋ ಅದನ್ನು ಅಮೆರಿಕ ಪಡೆಯಿತು. ಆದರೆ, ವಿಶ್ವ ವ್ಯಾಪಾರ ಸಂಘಟನೆ ಸುತ್ತಿನ ಮಾತುಕತೆಗಳಲ್ಲಿ ಏನು ನಡೆಯುತ್ತಿವೆ ಎಂಬುದು ಅಭಿವೃದ್ಧಿಶೀಲ ದೇಶಗಳಿಗೆ ಗೊತ್ತಾಗುತ್ತಲೇ ಇರಲಿಲ್ಲ. ಮುಂದುವರಿದ ದೇಶಗಳು ಅವುಗಳ ಮಾರುಕಟ್ಟೆಗಳನ್ನು ಪ್ರವೇಶಿಸುವ ಅವಕಾಶವನ್ನು ಪಡೆದವು ಮಾತ್ರವಲ್ಲದೆ, ತಮ್ಮ ಹೂಡಿಕೆಗಳಿಗೆ ಮತ್ತು ಬೌದ್ಧಿಕ ಆಸ್ತಿ ಹಕ್ಕುಗಳಿಗೂ ರಕ್ಷಣೆ ಪಡೆದವು. ತಮಗೆ ದೊರೆತ ಮಾರುಕಟ್ಟೆಯ ಅವಕಾಶಗಳಿಗೆ ಪ್ರತಿಯಾಗಿ, ಮುಂದುವರಿದ ದೇಶಗಳು ಅಭಿವೃದ್ಧಿಶೀಲ ದೇಶಗಳಿಗೆ ಅವರ ನಿರ್ಣಾಯಕ ಉತ್ಪಾದನೆಗೆ ರಕ್ಷಣೆ ಮತ್ತು ಕೆಲವು ಸರಕುಗಳಿಗೆ ತಮ್ಮ ಮಾರುಕಟ್ಟೆಯನ್ನು ಪ್ರವೇಶಿಸುವಂತಹ ಕೆಲವು ರಿಯಾಯಿತಿಗಳನ್ನು ನೀಡಿದವು. ಉದಾಹರಣೆಗೆ, ಭಾರತದ ಬಹುಪಾಲು ರೈತರು ಬಡವರಾಗಿರುವುದರಿಂದ ಭಾರತವು ತನ್ನ ಕೃಷಿಗೆ ರಕ್ಷಣೆಯನ್ನು ಕೋರಿತು. ಹಾಗಾಗಿ, ವಿಶ್ವ ವ್ಯಾಪಾರ ಸಂಸ್ಥೆಯಲ್ಲಿ ನಡೆದ ಚೌಕಾಶಿಗಳು ಅಸಮಾನರ ನಡುವೆಯೇ ನಡೆದಿದ್ದವು.

ಅಭಿವೃದ್ಧಿ ಹೊಂದಿದ ಜಗತ್ತು ಉನ್ನತ ತಂತ್ರಜ್ಞಾನದ ಮೇಲೆ ಏಕಸ್ವಾಮ್ಯವನ್ನು ಹೊಂದಿದೆ. ಆದರೆ, ಅಭಿವೃದ್ಧಿಶೀಲ ಜಗತ್ತು ಕೆಳ ಮತ್ತು ಮಧ್ಯಮ ತಂತ್ರಜ್ಞಾನಗಳೊಂದಿಗೆ ಹೊಂದಿಕೊಳ್ಳಬೇಕಾಗುತ್ತದೆ. ಆದ್ದರಿಂದ, ಅಭಿವೃದ್ಧಿ ಹೊಂದಿದ ಜಗತ್ತು ಏಕಸ್ವಾಮ್ಯ ಬೆಲೆಗಳನ್ನು ವಿಧಿಸಲು ಸಾಧ್ಯವಾಗುತ್ತದೆ. ಉದಾಹರಣೆಗೆ, ಅವರು ಕಂಪ್ಯೂಟರ್ ಚಿಪ್‌ಗಳನ್ನು, ವಿಮಾನಗಳನ್ನು ಉತ್ಪಾದಿಸುತ್ತಾರೆ. ಹಣಕಾಸು ಸೇವೆಗಳನ್ನು ಒದಗಿಸುತ್ತಾರೆ ಮತ್ತು ಅವುಗಳಿಗೆ ಏಕಸ್ವಾಮ್ಯ ಬೆಲೆಗಳನ್ನು ವಿಧಿಸುತ್ತಾರೆ. ಹಾಗಾಗಿ, ವಿಶ್ವದ ಅತ್ಯಂತ ಶ್ರೀಮಂತ ಕಂಪನಿಗಳು ತಂತ್ರಜ್ಞಾನ ಕಂಪನಿಗಳೇ ಆಗಿವೆ. ಅದರಲ್ಲಿ ಆಶ್ಚರ್ಯವೇನಿಲ್ಲ.

ಅಭಿವೃದ್ಧಿಶೀಲ ದೇಶಗಳು ಜಾಗತಿಕವಾಗಿ ಮಾರಾಟಮಾಡಲು ಪರಸ್ಪರ ಸ್ಪರ್ಧಿಸಬೇಕಾಗುತ್ತದೆ. ಹಾಗಾಗಿ, ಅವರು ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಅಗ್ಗವಾಗಿ ಮಾರಾಟ ಮಾಡುತ್ತಾರೆ. ಉದಾಹರಣೆಗೆ, ಜವಳಿ, ಬಟ್ಟೆ ಬರೆಗಳನ್ನು ಚೀನಾ, ಭಾರತ, ಬಾಂಗ್ಲಾದೇಶ, ವಿಯೆಟ್ನಾಂ ಮುಂತಾದ ದೇಶಗಳು ಉತ್ಪಾದಿಸುತ್ತವೆ. ಅವು ಪರಸ್ಪರ ಸ್ಪರ್ಧಿಸಿ ಅಗ್ಗವಾಗಿ ಮಾರಾಟ ಮಾಡುತ್ತವೆ. ಆದ್ದರಿಂದ, ವ್ಯಾಪಾರದ ನಿಯಮಗಳು ಅಭಿವೃದ್ಧಿಶೀಲ ದೇಶಗಳ ಹಿತಕ್ಕೆ ವಿರುದ್ಧವಾಗಿವೆ ಮತ್ತು ಮುಂದುವರಿದ ದೇಶಗಳಿಗೆ ಪ್ರಯೋಜನಕಾರಿಯಾಗಿವೆ. ಇದೇ ರೀತಿಯಲ್ಲಿ ಮುಂದುವರಿದ ದೇಶಗಳು ತಮ್ಮ ದಿನನಿತ್ಯದ ಬಳಕೆಯ ವಸ್ತುಗಳನ್ನೂ ಅಗ್ಗವಾಗಿಯೇ ಪಡೆಯುತ್ತಾರೆ. ಹಾಗಾಗಿ, ಅವರ ಹಣದುಬ್ಬರ ದರವು ಕೆಳಮಟ್ಟದಲ್ಲಿ ಇರುತ್ತದೆ.

ಉನ್ನತ ತಂತ್ರಜ್ಞಾನ ಮತ್ತು ಮಧ್ಯಮ ತಂತ್ರಜ್ಞಾನ ಉತ್ಪಾದನೆಯ ಕಾರ್ಮಿಕರ ನಡುವೆ ಒಂದು ವಿಭಜನೆ ಹೊರಹೊಮ್ಮಿತು. ಇದು ಮುಂದುವರಿದ ದೇಶಗಳ ಅರ್ಥವ್ಯವಸ್ಥೆಗಳಿಗೆ ಪ್ರಯೋಜನಕಾರಿಯಾಗಿದ್ದರೂ ಸಹ, ಮಧ್ಯಮ ತಂತ್ರಜ್ಞಾನದ ವಸ್ತುಗಳನ್ನು ಉತ್ಪಾದಿಸುವ ಕೈಗಾರಿಕೆಗಳನ್ನು ಮುಂದುವರಿದ ದೇಶಗಳಿಂದ ಅಭಿವೃದ್ಧಿಶೀಲ ದೇಶಗಳಿಗೆ ಸ್ಥಳಾಂತರಿಸಲಾಯಿತು. ಈ ವಿದ್ಯಮಾನವನ್ನೇ ಟ್ರಂಪ್, ನಮ್ಮ ಉದ್ಯೋಗಗಳನ್ನು ಅಭಿವೃದ್ಧಿಶೀಲ ದೇಶಗಳು ಕದ್ದಿವೆ ಎಂದು ಹೇಳುತ್ತಿರುವುದು. ಈ ಉದ್ಯೋಗಗಳನ್ನು ಚೀನಾದಿಂದ, ಭಾರತದಿಂದ ಮತ್ತು ಮೆಕ್ಸಿಕೋದಿಂದ ಮರಳಿ ತರುವುದಾಗಿ ಟ್ರಂಪ್ ಹೇಳುತ್ತಾರೆ. ಆದರೆ, ಈ ನಡುವೆ ಅಮೆರಿಕದಲ್ಲಿ ದೈನಂದಿನ ಅಗತ್ಯ ವಸ್ತುಗಳ ಬೆಲೆಗಳು ದಿನ ದಿನವೂ ಏರುತ್ತಾ ಹೋಗುತ್ತವೆ ಮತ್ತು ಅಮೆರಿಕದಲ್ಲಿ ಕೂಲಿ ದರಗಳು ಉನ್ನತವಾಗಿರುವುದರಿಂದ ಆ ಉನ್ನತ ಮಟ್ಟದ ಕೂಲಿಯಿಂದಾಗಿ ಸರಕು ಬೆಲೆಗಳು ದುಬಾರಿಯಾಗುತ್ತವೆ. 'ಅಕ್ರಮ ವಲಸಿಗರು' ಎಂದು ಕರೆಯಲ್ಪಡುವವರನ್ನು ಬಲವಂತವಾಗಿ ಅವರವರ ದೇಶಕ್ಕೆ ವಾಪಸ್ ಕಳುಹಿಸುವುದರಿಂದ ಅಮೆರಿಕದಲ್ಲಿ ಶ್ರಮ ವೆಚ್ಚಗಳು ಮತ್ತಷ್ಟು ಏರಿಕೆಯಾಗುತ್ತವೆ. ಅದರ ಪರಿಣಾಮವಾಗಿ ಹಣದುಬ್ಬರವೂ ಏರುತ್ತದೆ.

ಮುಕ್ತ ತಾರದ 'ಮುಕ್ತ ವ್ಯಾಪಾರ'

2001ರ ಡಿಸೆಂಬರ್ 17ರಂದು ಚೀನಾ ವಿಶ್ವ ವ್ಯಾಪಾರ ಸಂಸ್ಥೆಯನ್ನು ಸೇರಿತು. ತಂತ್ರಜ್ಞಾನ ರಂಗದಲ್ಲಿ ಅದು ಸಾಧಿಸಿದ ಕ್ಷಿಪ್ರ ಪ್ರಗತಿಯಿಂದಾಗಿ, ಮಾರುಕಟ್ಟೆಗಳನ್ನು ತ್ವರಿತವಾಗಿ ವಶಪಡಿಸಿಕೊಂಡಿತು. ವ್ಯಾಪಾರದ ಮಿಗುತೆಯನ್ನು ಬೃಹತ್ ಪ್ರಮಾಣದಲ್ಲಿ ಸಂಪಾದಿಸಿತು ಮತ್ತು ವಿದೇಶಿ ವಿನಿಮಯದ ಬೃಹತ್ ಮೀಸಲುಗಳನ್ನು ನಿರ್ಮಿಸಿಕೊಂಡಿತು. ಸುಧಾರಿತ ತಂತ್ರಜ್ಞಾನವನ್ನು ಚೀನಾ ಹೊಂದುವ ಅವಕಾಶವನ್ನು ನಿರ್ಬಂಧಿಸುವ ಸಲುವಾಗಿ, ಸುಂಕಗಳನ್ನು ವಿಧಿಸುವ ಮೂಲಕ ಒಂದು ಜಾಗತಿಕ ಶಕ್ತಿಯಾಗಿ ಹೊರಹೊಮ್ಮಿರುವ ಚೀನಾದ ಏರು ಗತಿಯನ್ನು ತಡೆಯಲು ಅಮೆರಿಕ ಪ್ರಯತ್ನಿಸುತ್ತಿದೆ.

ವಿಶ್ವ ವ್ಯಾಪಾರ ಸಂಸ್ಥೆಯಡಿಯಲ್ಲಿ, ಮಾರುಕಟ್ಟೆಗಳನ್ನು ತೆರೆದಿಡುವ ವಾದವು 'ಮುಕ್ತ ವ್ಯಾಪಾರ'ವೇ ಶ್ರೇಷ್ಠ ಎಂದು ನಂಬುತ್ತದೆ. ತುಲನಾತ್ಮಕ ಪ್ರಯೋಜನದಿಂದಾಗಿ, ಪ್ರತಿಯೊಬ್ಬರೂ ಪ್ರಯೋಜನ ಪಡೆಯುತ್ತಾರೆ ಎಂದು ಭಾವಿಸಲಾಗಿದೆ. ಆದರೆ, ಈ ವಾದವು 'ಮೊದಲ ಅತ್ಯುತ್ತಮ' ಪರಿಸ್ಥಿತಿ ಎಂದು ಕರೆಯಲ್ಪಡುವ ಆದರ್ಶ ಪರಿಸ್ಥಿತಿಗಳಲ್ಲಿ ಮಾತ್ರ ಅನ್ವಯಿಸುತ್ತದೆ. ವಾಸ್ತವದಲ್ಲಿ ಮಾರುಕಟ್ಟೆಗಳು ವಿರೂಪಗಳಿಂದಾಗಿ ವಿಫಲಗೊಳ್ಳುತ್ತವೆ. ಆದ್ದರಿಂದ, ಜಗತ್ತು 'ಎರಡನೇ ಅತ್ಯುತ್ತಮ' ಪರಿಸ್ಥಿತಿಯೊಂದಿಗೇ ತೃಪ್ತಿ ಹೊಂದಬೇಕಾಗುತ್ತದೆ. ಮುಕ್ತ ಮಾರುಕಟ್ಟೆಗಳು ಅತ್ಯುತ್ತಮ ಪರಿಸ್ಥಿತಿಯನ್ನು ತಲುಪುವುದಿಲ್ಲ. ಅದಕ್ಕೆ ಸರ್ಕಾರದ ಹಸ್ತಕ್ಷೇಪದ ಅಗತ್ಯವಿದೆ.

ಮುಂದುವರಿದ ತಂತ್ರಜ್ಞಾನ ಮತ್ತು ಬಂಡವಾಳದ ಕೊರತೆಯಿರುವ ಅಭಿವೃದ್ಧಿಶೀಲ ದೇಶಗಳಿಗೆ, ಅರ್ಥವ್ಯವಸ್ಥೆಯನ್ನು ತೆರೆದಿಡುವ ಕ್ರಮವು ತಮ್ಮ ದುರ್ಬಲ ಅರ್ಥವ್ಯವಸ್ಥೆಗಳು ವಿದೇಶಿ ಸರಕುಗಳಿಂದ ಮುಳುಗಿ ಹೋಗಲು ಕೊಟ್ಟ ಆಹ್ವಾನವಾಗುತ್ತದೆ. ಭಾರತವು ಸಹಿ ಮಾಡಿರುವ ಮುಕ್ತ ವ್ಯಾಪಾರ ಒಪ್ಪಂದಗಳಲ್ಲಿ ಸೋಲನ್ನು ಅನುಭವಿಸಿದೆ. ಅಗ್ಗವಾಗಿ ಉತ್ಪಾದಿಸಲು ಮತ್ತು ರಫ್ತುಗಳನ್ನು ಹೆಚ್ಚಿಸಲು ಹೆಚ್ಚಿನ ಆಮದುಗಳು ಸಹಾಯಕವಾಗುತ್ತವೆ ಎಂಬ ನಂಬಿಕೆಯು 1989ರಲ್ಲಿ ಒಂದು ತೀವ್ರ ಪಾವತಿ ಶೇಷದ ಬಿಕ್ಕಟ್ಟನ್ನು ಉಂಟುಮಾಡಿತು. ವಾಸ್ತವವಾಗಿ, ಮುಕ್ತ ವ್ಯಾಪಾರವು ಅಭಿವೃದ್ಧಿಶೀಲ ಜಗತ್ತಿನ ಹೆಚ್ಚಿನ ಭಾಗಗಳಿಗೆ ಪ್ರಯೋಜನಕಾರಿಯಾಗಿಲ್ಲ.

ಅಸಮಾನರನ್ನು ಸಮಾನವಾಗಿ ಪರಿಗಣಿಸಲಾಗದು ಎಂದು ಪರಿಗಣಿಸುವ ಬಂಡವಾಳಶಾಹಿಯ ಉದಾರ ಮುಖವನ್ನು ವಿಶ್ವ ವ್ಯಾಪಾರ ಸಂಸ್ಥೆಯು ಪ್ರತಿನಿಧಿಸುತ್ತದೆ. ಹಾಗಾಗಿ, ದುರ್ಬಲರಿಗೆ ಕೆಲವು ವಿಶೇಷ ಸವಲತ್ತುಗಳನ್ನು ಒದಗಿಸಲಾಯಿತು. ಇದರಲ್ಲಿ ಅಮೆರಿಕವೂ ಒಂದು ಪಕ್ಷವಾಗಿತ್ತು ಮತ್ತು ವಿಶ್ವ ವ್ಯಾಪಾರ ಸಂಸ್ಥೆಯಿಂದ ಲಾಭ ಪಡೆಯಿತು. ಮಾರುಕಟ್ಟೆಗಳು ತೆರೆದುಕೊಂಡವು. ಜಾಗತಿಕವಾಗಿ ಜಿಡಿಪಿಯಲ್ಲಿ ವ್ಯಾಪಾರದ ಪಾಲು ಏರಿತು.

ಬೆದರಿಸಲು ಏಕಸ್ವಾಮ್ಯದ ಬಳಕೆ

ಈಗ ನಿರ್ದಾಕ್ಷಿಣ್ಯವಾಗಿ ಮತ್ತು ಕಡಿವಾಣವಿಲ್ಲದ ಶೋಷಣೆ ನಡೆಯುತ್ತಿದೆ. ಇದು ಜಾಗತಿಕ ಬಲಪಂಥೀಯ ಚಲನೆಗೆ ಅನುಗುಣವಾಗಿದೆ. ಮಿತ್ರ ದೇಶಗಳೂ ಸೇರಿದಂತೆ ಇತರ ದೇಶಗಳನ್ನು ಬೆದರಿಸಲು ಆರ್ಥಿಕ ಬಲ ಮತ್ತು ಮಿಲಿಟರಿ ಶಕ್ತಿ ಮತ್ತು ಉನ್ನತ ತಂತ್ರಜ್ಞಾನದ ಮೇಲೆ ಹೊಂದಿರುವ ಏಕಸ್ವಾಮ್ಯವನ್ನು ಬಳಸಲಾಗುತ್ತಿದೆ.

ಕೆನಡಾದ ಅರ್ಥವ್ಯವಸ್ಥೆಯು ಒಂದು ವೇಳೆ ಕುಸಿದರೆ, ಅಮೆರಿಕದ 51ನೇ ರಾಜ್ಯವಾಗುವುದನ್ನು ಅದು ಒಪ್ಪಿಕೊಳ್ಳಬಹುದು. ಅಮೆರಿಕವು ಯೂರೋಪ್ ಒಕ್ಕೂಟದಿಂದ ರಿಯಾಯಿತಿಗಳನ್ನು ಪಡೆಯಲು ಬಯಸುತ್ತದೆ ಮತ್ತು ತಾನು ನ್ಯಾಟೋಗೆ ಒದಗಿಸುತ್ತಿರುವ ರಕ್ಷಣಾ ನೆರವನ್ನು ಕಡಿತ ಮಾಡಬಯಸುತ್ತದೆ. ಇದು ಹೆಚ್ಚು ಖರ್ಚು ಮಾಡುವಂತೆ ಯುರೋಪಿಯನ್ ದೇಶಗಳ ಮೇಲೆ ಒತ್ತಡ ಹೇರುತ್ತದೆ. ಈ ಕಾರಣದಿಂದಾಗಿ ಅಮೆರಿಕದ ಮಿಲಿಟರಿ-ಕೈಗಾರಿಕಾ ಸಂಕೀರ್ಣವು ಕುಸಿಯುತ್ತದೆ.

ಅಧ್ಯಕ್ಷ ಟ್ರಂಪ್ ಗಮನಿಸದಿರುವ ವಿಷಯವೆಂದರೆ, ಅಮೆರಿಕವು ತನ್ನ ಗಡಿಯೊಳಗೆ ಹೆಚ್ಚು ವಸ್ತುಗಳನ್ನು ಉತ್ಪಾದಿಸಲು ಪ್ರಯತ್ನಿಸಿದರೆ, ಇತರ ರಾಷ್ಟ್ರಗಳು ಸಹ ಅದನ್ನೇ ಮಾಡುತ್ತವೆ. ಜಾಗತೀಕರಣವು ತಲೆ ಕೆಳಗಾಗುತ್ತದೆ. ಈ ಅಪ-ಜಾಗತೀಕರಣದ ಪರಿಣಾಮವಾಗಿ ಜಾಗತಿಕ ಆರ್ಥಿಕ ಹಿಂಜರಿತ ಉಂಟಾಗುವ ಸಾಧ್ಯತೆ ಇರುತ್ತದೆ. ಇದು ಅಮೆರಿಕಕ್ಕೆ ದೊರಕುತ್ತಿದ್ದ ಅನೇಕ ಪ್ರಯೋಜನಗಳನ್ನು ತಪ್ಪಿಸುತ್ತದೆ. ಡಾಲರೀಕರಣವು ಅಮೆರಿಕಕ್ಕೆ ತನ್ನ ವರಮಾನವನ್ನು ಮೀರಿ ಬದುಕಲು ಅನುವು ಮಾಡಿಕೊಟ್ಟಿದೆ. ಆದ್ದರಿಂದ, ಅಮೆರಿಕಾದ ವ್ಯಾಪಾರವು ಕುಸಿಯುತ್ತಿದ್ದಂತೆಯೇ ಅಮೆರಿಕವೂ ಕುಸಿಯುತ್ತದೆ ಮತ್ತು ಅದು ಅಲ್ಲಿನ ಜನರ ಜೀವನಮಟ್ಟದ ಮೇಲೆ ಪರಿಣಾಮ ಬೀರುತ್ತದೆ.

ಅಮೆರಿಕದ ಅತಿದೊಡ್ಡ ವ್ಯಾಪಾರ ಪಾಲುದಾರರು ಪ್ರತಿಕ್ರಿಯೆ ವ್ಯಕ್ತಪಡಿಸುತ್ತಿದ್ದಾರೆ ಮತ್ತು ಅಮೆರಿಕದಿಂದ ಆಮದಾಗುವ ಸರಕುಗಳ ಮೇಲೆ ಸುಂಕಗಳನ್ನು ವಿಧಿಸುವುದಾಗಿ ಘೋಷಿಸುತ್ತಿದ್ದಾರೆ. ಅಮೆರಿಕವು ರಫ್ತು ಮಾಡುವುದಕ್ಕಿಂತ ಹೆಚ್ಚಿನ ಸರಕು-ಸೇವೆಗಳನ್ನು ಆಮದು ಮಾಡಿಕೊಳ್ಳುತ್ತಿದೆ. ಆದ್ದರಿಂದ, ಅಮೆರಿಕವು ಕುಸಿದರೆ ಜಾಗತಿಕ ವ್ಯಾಪಾರವೂ ಕುಗ್ಗುತ್ತದೆ ಮತ್ತು ಅದು ವ್ಯಾಪಾರ ಪಾಲುದಾರರ ಮೇಲೆ ಪರಿಣಾಮ ಬೀರುತ್ತದೆ. ಅಮೆರಿಕದೊಂದಿಗಿನ ವ್ಯಾಪಾರದ ನಷ್ಟವನ್ನು ಸರಿದೂಗಿಸುವ ಸಲುವಾಗಿ ದೇಶ ದೇಶಗಳು ಒಟ್ಟಾಗಿ ನಿಲ್ಲಬೇಕಾಗುತ್ತದೆ ಮತ್ತು ತಮ್ಮ ನಡುವೆ ವ್ಯಾಪಾರವನ್ನು ಹೆಚ್ಚಿಸುವ ಮೂಲಕ ತಮ್ಮ ನಷ್ಟವನ್ನು ಭಾಗಶಃ ತಗ್ಗಿಸಿಕೊಳ್ಳಬಹುದು. ಇದು ಜಗತ್ತಿಗೆ ನಿಜಕ್ಕೂ ಒಂದು ಸವಾಲು. ಇತರ ದೇಶಗಳು ಒಟ್ಟಾಗಿ ಕಾರ್ಯನಿರ್ವಹಿಸುವುದು ಸಾಧ್ಯವಾಗುತ್ತದೆಯೇ?

ಜಗತ್ತು ಎಂದಿಗೂ 'ಮುಕ್ತ ವ್ಯಾಪಾರ'ದ ಸನ್ನಿವೇಶದಲ್ಲಿ ಇರಲಿಲ್ಲ ಮತ್ತು ಈಗ ಒಂದು ವಿಭಿನ್ನ ಸನ್ನಿವೇಶ 'ನಿಭಾಯಿಸಿದ ವ್ಯಾಪಾರ'ದ ಸನ್ನಿವೇಶ ತೆರೆದುಕೊಳ್ಳುತ್ತಿದೆ.

ಅನುವಾದ: ಕೆ.ಎಂ.ನಾಗರಾಜ್

ಕೃಪೆ: ನ್ಯೂಸ್‌ಕ್ಲಿಕ್

24 ನೇ ಸಿಪಿಐ(ಎಂ) ಮಹಾಧಿವೇಶನದತ್ತ



10ನೇ ಮಹಾಧಿವೇಶನ....... ಪುಟ 16 ರಿಂದ

ಬೂರ್ಜ್ವಾ-ಭೂಮಾಲೀಕ ವರ್ಗಗಳ ಆಡಳಿತ ಪಕ್ಷಗಳು ಮತ್ತು ಪ್ರತಿಪಕ್ಷಗಳ ನಡುವಿನ ವೈರುಧ್ಯಗಳ ಆಳವನ್ನು ಅದು ಕಡಿಮೆ ಅಂದಾಜು ಮಾಡಿದೆ ಎಂದು 10ನೇ ಮಹಾಧಿವೇಶನ ಗಮನಿಸಿತು. ಪ್ರಜಾಪ್ರಭುತ್ವವನ್ನು ರಕ್ಷಿಸುವ ಮತ್ತು ಪರ್ಯಾಯ ಆರ್ಥಿಕ ನೀತಿಗಳಿಗಾಗಿ ಹೋರಾಡುವುದು ಎಡ ಮತ್ತು ಪ್ರಜಾಪ್ರಭುತ್ವ ರಂಗವನ್ನು ಬೆಸೆಯಲು ಅದು ಕರೆ ನೀಡಿತು. ಎರಡು ಎಡ-ನೇತೃತ್ವದ ರಾಜ್ಯ ಸರ್ಕಾರಗಳನ್ನು ರಕ್ಷಿಸುವಂತೆಯೂ ಮಹಾಧಿವೇಶನ ಕರೆ ನೀಡಿತು.

ಕಾಮ್ರೇಡ್ ಇ.ಎಂ.ಎಸ್. ನಂಬೂದಿರಿಪಾಡ್ ಅವರನ್ನು ಪ್ರಧಾನ ಕಾರ್ಯದರ್ಶಿಯನ್ನಾಗಿ ಹೊಂದಿದ್ದ 11 ಸದಸ್ಯರ ಪೊಲಿಟ್ ಬ್ಯೂರೋ, 40 ಸದಸ್ಯರ ಕೇಂದ್ರ ಸಮಿತಿಯನ್ನು ಆಯ್ಕೆ ಮಾಡಲಾಯಿತು.



11ನೇ ಮಹಾಧಿವೇಶನ, ಜನವರಿ 26ರಿಂದ 31, 1982, ವಿಜಯವಾಡ

1980ರಲ್ಲಿ ಜನತಾ ಪಕ್ಷದ ಸರ್ಕಾರದ ಪತನ ಮತ್ತು ಇಂದಿರಾ ಗಾಂಧಿ ಅಧಿಕಾರಕ್ಕೆ ಮರಳಿದ ನಂತರ ಹನ್ನೊಂದನೇ ಮಹಾಧಿವೇಶನ ನಡೆಯಿತು. ಐಎಂಎಫ್ ಸಾಲದ ಭಾಗವಾಗಿ ಹೇರಲ್ಪಟ್ಟ ಷರತ್ತುಗಳಿಂದಾಗಿ ದೇಶವನ್ನು ಆರ್ಥಿಕ ಬಿಕ್ಕಟ್ಟು ಆವರಿಸಿತ್ತು. ಪಾಕಿಸ್ತಾನದ ಸಕ್ರಿಯ ಬೆಂಬಲದೊಂದಿಗೆ ಅಮೆರಿಕ ಬೆಂಬಲಿತ ಪ್ರತ್ಯೇಕತಾವಾದಿ ಚಳುವಳಿಗಳು ಪಂಜಾಬ್ ಮತ್ತು ಕಾಶ್ಮೀರದಲ್ಲಿ ಹರಡುತ್ತಿದ್ದವು.

ನಾಗರಿಕ ಸ್ವಾತಂತ್ರ್ಯಗಳ ಮೇಲಿನ ದಾಳಿಗಳು, ಕೇರಳದಲ್ಲಿ ಎಲ್‌ಡಿಎಫ್ ಮಂತ್ರಿಮಂಡಲವನ್ನು ಉರುಳಿಸಿದ್ದು, ರಾಷ್ಟ್ರೀಯ ಭದ್ರತಾ ಕಾಯ್ದೆ(ಎನ್‌ಎಸ್‌ಎ) ಜಾರಿ ಇತ್ಯಾದಿಗಳು ಸರ್ವಾಧಿಕಾರಶಾಹೀ ಆಳ್ವಿಕೆಯ ಹೊಸ ಹಂತದ ಲಕ್ಷಣಗಳಾಗಿವೆ ಎಂದು ಮಹಾಧಿವೇಶನ ಗಮನಿಸಿತು. ಕೋಮುವಾದಿ ಶಕ್ತಿಗಳ ಬೆಳವಣಿಗೆಯ ಬಗ್ಗೆಯೂ ಅದು ಕಳವಳ ವ್ಯಕ್ತಪಡಿಸಿತು.

ಎಡ ಮತ್ತು ಪ್ರಜಾಪ್ರಭುತ್ವವಾದಿಗಳ ಕ್ಯತೆಯನ್ನು ಬಲಪಡಿಸುವುದರ ಜೊತೆಗೆ ಸರ್ವಾಧಿಕಾರಶಾಹಿಯ ವಿರುದ್ಧ ಒಂದು ವಿಶಾಲ ಪ್ರತಿರೋಧವನ್ನು ಕಟ್ಟಲು ಮಹಾಧಿವೇಶನ ಕರೆ ನೀಡಿತು.

42 ಸದಸ್ಯರ ಕೇಂದ್ರ ಸಮಿತಿ ಮತ್ತು 9 ಸದಸ್ಯರ ಪೊಲಿಟ್ ಬ್ಯೂರೋವನ್ನು ಆಯ್ಕೆ ಮಾಡಲಾಯಿತು, ಕಾಮ್ರೇಡ್ ಇಎಂಎಸ್ ನಂಬೂದಿರಿಪಾಡ್ ಅವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಮರು ಆಯ್ಕೆ ಮಾಡಲಾಯಿತು.



13ನೇ ಮಹಾಧಿವೇಶನ, ಡಿಸೆಂಬರ್ 27, 1988 ರಿಂದ ಜನವರಿ 1, 1989, ತಿರುವನಂತಪುರಂ

ಹದಿಮೂರನೇ ಮಹಾಧಿವೇಶನದ ಮುಂಚಿನ ವರ್ಷಗಳು ವ್ಯಾಪಕ ಬದಲಾವಣೆಗಳನ್ನು ಕಂಡವು. ಗೋರ್ಬಚೇವ್ ನೇತೃತ್ವದ ಸೋವಿಯತ್ ಒಕ್ಕೂಟವು ಪೆರೆಸ್ಟ್ರೊಯಿಕಾ ಮತ್ತು ಗ್ಲಾಸ್ನೋಸ್ಟ್‌ನ ಹಾದಿಯನ್ನು ಅನುಸರಿಸಲಾರಂಭಿಸಿತ್ತು. ಇದು ಮಾರ್ಕ್ಸ್‌ವಾದ-ಲೆನಿನ್‌ವಾದದ ಮಾರ್ಗದರ್ಶಿ ಪಾತ್ರವನ್ನು ಮತ್ತು ಸಾಮಾಜಿಕ ಪರಿವರ್ತನೆಯಲ್ಲಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಪಾತ್ರವನ್ನು ನಿರಾಕರಿಸಿದ್ದರಿಂದ ಈ ದಿಕ್ಕನ್ನು ಸಿಪಿಐ(ಎಂ) ಒಪ್ಪುವುದಿಲ್ಲ ಎಂದು ಮಹಾಧಿವೇಶನ ಹೇಳಿತು.

ದೇಶದೊಳಗೆ, ರಾಜೀವ್ ಗಾಂಧಿ ಸರ್ಕಾರವು ವಿಶ್ವಬ್ಯಾಂಕ್‌ನ ಆಗ್ರಹಗಳಿಗೆ ಶರಣಾಗುವುದನ್ನು ಮತ್ತು ವಿದೇಶಿ ಬಂಡವಾಳಕ್ಕೆ ರಿಯಾಯಿತಿಗಳನ್ನು ವಿರೋಧಿಸುವಲ್ಲಿ ಸಿಪಿಐ(ಎಂ) ಮುಂಚೂಣಿಯಲ್ಲಿತ್ತು. ಅದೇ ರೀತಿಯಲ್ಲಿ ಕೋಮುವಾದಿ, ಪ್ರತ್ಯೇಕತಾವಾದಿ ಮತ್ತು ವಿಭಜಕ ಶಕ್ತಿಗಳ ವಿರುದ್ಧವೂ.

ಕೇರಳ ಮತ್ತು ಪಶ್ಚಿಮ ಬಂಗಾಳದಲ್ಲಿ ಎಡ ಸರ್ಕಾರಗಳ ರಕ್ಷಣೆಗೆ ಮತ್ತು ಮುಂಬರಲಿದ್ದ ಚುನಾವಣೆಗಳಲ್ಲಿ ರಾಜೀವ್ ಗಾಂಧಿ ಸರ್ಕಾರವನ್ನು ಪದಚ್ಯುತಗೊಳಿಸಲು ಹಾಗೂ ಎಡ ಐಕ್ಯತೆಯನ್ನು ಬಲಪಡಿಸಲು ಮಹಾಧಿವೇಶನ ಕರೆ ನೀಡಿತು.

12ನೇ ಮಹಾಧಿವೇಶನ, ಡಿಸೆಂಬರ್ 25 ರಿಂದ 30, 1985, ಕೊಲ್ಕತ

11ನೇ 12ನೇ ಮಹಾಧಿವೇಶನಗಳ ನಡುವಿನ ಅವಧಿಯು ರಾಜಕೀಯ ಪ್ರಕ್ಷುಬ್ಧತೆ ಮತ್ತು ವ್ಯಾಪಕ ಸಾಮಾಜಿಕ ಕಲಹಗಳನ್ನು ಕಾಣುತ್ತಿದ್ದ ಅವಧಿ. ಕೋಮುವಾದಿ ಶಕ್ತಿಗಳು ರಾಮ ಜನ್ಮಭೂಮಿ ಚಳುವಳಿಯನ್ನು ಪ್ರಾರಂಭಿಸಿದ್ದವು, ಇದು ದ್ವೇಷ ಮತ್ತು ಉದ್ವಿಗ್ನತೆಯನ್ನು ಹರಡಿತು. ಇಸ್ಲಾಮಿಕ್ ಮೂಲಭೂತವಾದವೂ ಹೆಚ್ಚುತ್ತಿತ್ತು. ಪಂಜಾಬ್, ಜಮ್ಮು ಮತ್ತು ಕಾಶ್ಮೀರ, ಅಸ್ಸಾಂ, ಪಶ್ಚಿಮ ಬಂಗಾಳದ ಗೂರ್ಖಾಲ್ಯಾಂಡ್ ಮತ್ತು ಈಶಾನ್ಯದಲ್ಲಿ ಘರ್ಷಣೆಗಳು ಭುಗಿಲೆದ್ದವು. ಪ್ರತ್ಯೇಕತಾವಾದಿ ಮತ್ತು ಉಗ್ರಗಾಮಿ ಶಕ್ತಿಗಳನ್ನು ವಿರೋಧಿಸುವಾಗ ಪಕ್ಷವು ಪಂಜಾಬ್, ಅಸ್ಸಾಂ ಮತ್ತು ಡಾರ್ಜಿಲಿಂಗ್‌ನಲ್ಲಿ ಅನೇಕ ನಾಯಕರು ಮತ್ತು ಕಾರ್ಯಕರ್ತರನ್ನು ಕಳೆದುಕೊಂಡಿತು.

ಆಪರೇಷನ್ ಬ್ಲೂಸ್ಟಾರ್, ಪ್ರಧಾನಿ ಇಂದಿರಾ ಗಾಂಧಿಯವರ ಹತ್ಯೆ ಮತ್ತು ನಂತರದ ಸಿಖ್ ವಿರೋಧಿ ಹತ್ಯೆಗಳೊಂದಿಗೆ ಬಿಕ್ಕಟ್ಟು ಉಲ್ಬಣಗೊಂಡಿತು, ಅದರ ನಂತರ ಕಾಂಗ್ರೆಸ್ ಪಕ್ಷವು ಭಾರಿ ಬಹುಮತದಿಂದ ಅಧಿಕಾರಕ್ಕೆ ಬಂದಿತು.



ಮಹಾಧಿವೇಶನ ಪ್ರಜಾಪ್ರಭುತ್ವ ಮತ್ತು ರಾಷ್ಟ್ರೀಯ ಏಕತೆಗಾಗಿ ಹೋರಾಟಗಳು ಪರಸ್ಪರ ತಳುಕು ಹಾಕಿಕೊಂಡಿವೆ ಎಂದು ಒತ್ತಿಹೇಳಿತು.

ಕೇರಳದಲ್ಲಿ, ಕೋಮುವಾದಿ ಶಕ್ತಿಗಳೊಂದಿಗೆ ಯಾವುದೇ ಸಂಬಂಧವನ್ನು ಹೊಂದಿರಬಾರದು ಎಂಬ ಪಕ್ಷದ ಮಾರ್ಗಕ್ಕೆ ಅನುಗುಣವಾಗಿ ಅಖಿಲ ಭಾರತ ಮುಸ್ಲಿಂ ಲೀಗ್‌ನೊಂದಿಗೆ ಸಂಬಂಧವನ್ನು ಕಡಿದುಕೊಳ್ಳಲು ಸಿಪಿಐ(ಎಂ) ನಿರ್ಧರಿಸಿತು. ಪಶ್ಚಿಮ ಬಂಗಾಳ ಮತ್ತು ತ್ರಿಪುರದಲ್ಲಿನ ಎಡರಂಗ ಸರ್ಕಾರಗಳು ಕೇಂದ್ರ ಸರ್ಕಾರದ ವರ್ಗ ನೀತಿಗಳನ್ನು ಬಯಲಿಗೆಳೆಯುವ ಮತ್ತು ಜನರಿಗೆ ಗರಿಷ್ಠ ಪರಿಹಾರವನ್ನು ಒದಗಿಸುವ ದ್ವಿವಿಧ ಜವಾಬ್ದಾರಿಗಳನ್ನು ಹೊಂದಿವೆ ಎಂದು ಪಕ್ಷವು ಗಮನಿಸಿತು:, ಹನ್ನೆರಡನೇ ಮಹಾಧಿವೇಶನವು ಎಡ-ಐಕ್ಯತೆಯ ಸುತ್ತ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಬಲಪಡಿಸುವ ಮೂಲಕ ಸರ್ವಾಧಿಕಾರಶಾಹಿಯನ್ನು ಎದುರಿಸಲು ಒತ್ತು ನೀಡಿತು.

ಕಾಮ್ರೇಡ್ ಇಎಂಎಸ್ ನಂಬೂದಿರಿಪಾಡ್‌ರನ್ನು ಪ್ರಧಾನ ಕಾರ್ಯದರ್ಶಿಯಾಗಿ ಹೊಂದಿರುವ 66 ಸದಸ್ಯರ ಕೇಂದ್ರ ಸಮಿತಿ ಮತ್ತು 10 ಸದಸ್ಯರ ಪೊಲಿಟ್ ಬ್ಯೂರೋವನ್ನು ಆಯ್ಕೆ ಮಾಡಲಾಯಿತು.

14ನೇ ಮಹಾಧಿವೇಶನ, ಜನವರಿ 3ರಿಂದ 9,1992, ಚೆನ್ನೈ

13ನೇ ಮತ್ತು 14ನೇ ಮಹಾಧಿವೇಶನಗಳ ನಡುವಿನ ಮೂರು ವರ್ಷಗಳ ಅಂತರದಲ್ಲಿ ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯುರೋಪಿನಲ್ಲಿ ಸಮಾಜವಾದದ ಪತನ ಉಂಟಾಯಿತು, ಜೊತೆಗೆ ತಿಯನ್ಮೆನ್ ಸ್ಕ್ವೇರ್ ಘಟನೆಯ ನಂತರ ಚೀನಾದಲ್ಲಿಯೂ ಪ್ರಕ್ಷುಬ್ಧತೆ ಉಂಟಾಗಿತ್ತು. ಸಮಾಜವಾದಿ ಕ್ಯೂಬಾಕ್ಕೆ ಸೋವಿಯತ್ ನೆರವು ನಿಂತುಹೋದದ್ದು ಮತ್ತು ಯುಎಸ್ ನ ಆರ್ಥಿಕ ದಿಗ್ಬಂಧನವು ಅದಕ್ಕೆ ಅಪಾಯಗಳನ್ನು ಹೆಚ್ಚಿಸಿತು.

ಸೈದ್ಧಾಂತಿಕ ವಿಷಯಗಳ ಕುರಿತು ಹೆಚ್ಚಿನ ಅಧ್ಯಯನದ ಅಗತ್ಯವನ್ನು ಒಪ್ಪಿಕೊಂಳ್ಳುತ್ತಲೇ, ಸಿಪಿಐ(ಎಂ) ಸಮಾಜವಾದಕ್ಕೆ ಬದ್ಧವಾಗಿ ಉಳಿಯಿತು, ನಮೀಬಿಯಾದ ಸ್ವಾತಂತ್ರ್ಯ, ದಕ್ಷಿಣ ಆಫ್ರಿಕಾದಲ್ಲಿ ಪ್ರಜಾಪ್ರಭುತ್ವ ಶಕ್ತಿಗಳ ಮುನ್ನಡೆ ಮತ್ತು ನೇಪಾಳದಲ್ಲಿ ಕಮ್ಯುನಿಸ್ಟರ ಚುನಾವಣಾ ಗಳಿಕೆಗಳಂತಹ ಜಾಗತಿಕ ಬೆಳವಣಿಗೆಗಳಲ್ಲಿ ಸ್ಫೂರ್ತಿಯನ್ನು ಕಂಡಿತು. ಸಮಾಜವಾದಿ ದೇಶಗಳು, ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಲು ನಿರ್ಧರಿಸಿದ ಮೂರನೇ ಜಗತ್ತಿನ ದೇಶಗಳು ಮತ್ತು ಪ್ರಪಂಚದಾದ್ಯಂತದ ಕಾರ್ಮಿಕರ ಹೋರಾಟಗಳೊಂದಿಗೆ ಸೌಹಾರ್ದವನ್ನು ಬಲಪಡಿಸಲು ಮಹಾಧಿವೇಶನ ನಿರ್ಧರಿಸಿತು.

ದೇಶದೊಳಗೆ, 1989 ರ ಸಂಸತ್ ಚುನಾವಣೆಗಳಲ್ಲಿ ಕಾಂಗ್ರೆಸ್ (ಐ) ನೆಲೆ ಕಳೆದುಕೊಂಡಿತು, ಇದರಿಂದಾಗಿ ವಿ.ಪಿ. ಸಿಂಗ್ ಸರ್ಕಾರವನ್ನು ರಚಿಸಿದರು, ಸಿಪಿಐ(ಎಂ) ಹೊರಗಿನಿಂದ ಬೆಂಬಲ ನೀಡಿತು. ಆದರೆ

66 ಸದಸ್ಯರ ಕೇಂದ್ರ ಸಮಿತಿಯನ್ನು ಆಯ್ಕೆ ಮಾಡಲಾಯಿತು.. ಹೊಸದಾಗಿ ಆಯ್ಕೆಯಾದ ಕೇಂದ್ರ ಸಮಿತಿಯು ಕಾಮ್ರೇಡ್ ಇಎಂಎಸ್ ನಂಬೂದಿರಿಪಾಡ್ ಅವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಮತ್ತು 12 ಸದಸ್ಯರ ಪೊಲಿಟ್ ಬ್ಯೂರೋವನ್ನು ಆಯ್ಕೆ ಮಾಡಿತು. ಇದು ಐದು ಸದಸ್ಯರ ಕಾರ್ಯದರ್ಶಿ ಮಂಡಳಿಯನ್ನು ಸಹ ಆಯ್ಕೆ ಮಾಡಿತು.

ಭಗತ್ ಸಿಂಗ್ ಗಲ್ಲಿಗೇರುವ ಮುನ್ನ ಸಂಗಾತಿಗಳಿಗೆ ಬರೆದಿದ್ದ ಪತ್ರ – 22 ಮಾರ್ಚ್ 1931



1931 ಮಾರ್ಚ 22 ರಂದು ಎರಡನೆಯ ಲಾಹೋರ್ ಪಿತೂರಿ ಪ್ರಕರಣದ ಅಪರಾಧಿಗಳನ್ನು ಜೈಲಿನ ಗುಜರಿ ಕೋಣೆಯ ಪಕ್ಕದ ಒಂದು ಕೋಣೆಯಲ್ಲಿ ಕೂಡಿ ಹಾಕಿದ್ದರು. ಅವರು ಅವತ್ತು ತಮ್ಮ ಸೆಲ್‌ನಿಂದ ಭಗತ್‌ಸಿಂಗ್ ಬಳಿಗೆ ಒಂದು ಚೀಟಿ ಕಳಿಸಿ ನಿನಗೆ ಬದುಕುವ ಆಸೆಯಿಲ್ಲವೇ? ಎಂದು ಕೇಳಿದರು ಅದಕ್ಕೆ ಭಗತ್ ಸಿಂಗ್ ಉತ್ತರಿಸಿದ್ದು ಹೀಗೆ.

ಕಾಮ್ರೇಡ್ಸ್, ಬದುಕುವ ಆಸೆ ಸಹಜವಾದದ್ದು. ಅದು ನನ್ನಲ್ಲೂ ಇದೆ. ನಾನದನ್ನು ಮುಚ್ಚಿಟ್ಟುಕೊಳ್ಳಬಯಸುವುದಿಲ್ಲ. ಆದರೆ ಆ ಹಂಬಲ ಷರತ್ತುಬದ್ಧ. ನಾನು ಬಂಧಿಯಾಗಿ ನಿರ್ಬಂಧಗಳ ನಡುವೆ ಬದುಕಲು ಇಚ್ಛಿಸುವುದಿಲ್ಲ. ನನ್ನ ಹೆಸರು ಈಗ ಭಾರತದ ಕ್ರಾಂತಿಯ ಸಂಕೇತವಾಗಿದೆ. ಕ್ರಾಂತಿಯ ಪಕ್ಷದ ಆದರ್ಶ ಮತ್ತು ತ್ಯಾಗಗಳು ನನ್ನನ್ನು ಯಾವ ಎತ್ತರಕ್ಕೆ ಏರಿಸಿವೆಯೆಂದರೆ ಬದುಕಿದರೆ ನಾನು ಅದಕ್ಕಿಂತ ಎತ್ತರಕ್ಕೆ ಏರಲು ಸಾಧ್ಯವಾಗದೇ ಹೋಗಬಹುದು.

ಇವತ್ತು ಜನರಿಗೆ ನನ್ನ ದೌರ್ಬಲ್ಯಗಳ ಅರಿವಿಲ್ಲ. ನಾನು ರಣದಂಡನೆ ತಪ್ಪಿಸಿಕೊಂಡು ಬದುಕಿದರೆ ಆ ದೌರ್ಬಲ್ಯಗಳು ಅವರೆದುರು ಕಾಣಬಹುದು. ಆಗ ಕ್ರಾಂತಿಯ ಸಂಕೇತ ಮಸುಕಾಗುತ್ತದೆ. ಅಥವಾ ಖಾಯಮ್ಮಾಗಿ ಮರೆಯಾಗುತ್ತದೆ. ಅದರ ಬದಲು ನಾನೇನಾದರೂ ನಗುನಗುತ್ತ ಗಲ್ಲಿಗೇರಿದರೆ ಭಾರತದ ಅಮ್ಮಂದಿರಿಗೆ ಅದು ಸ್ಪೂರ್ತಿಯಾಗಿ ತಮ್ಮ ಮಗನೂ ಭಗತನಂತಾಗಲಿ ಎಂದು ಅವರು ಹಾರೈಸುತ್ತಾರೆ.

ಆಗ ದೇಶದ ಸ್ವಾತಂತ್ರ್ಯಕ್ಕಾಗಿ ಬಲಿದಾನಕ್ಕೂ ಸಿದ್ಧರಾಗಿರುವವರ ದೊಡ್ಡ ಪಡೆ ಬೆಳೆಯುತ್ತದೆ. ಆಗ ಸಾಮ್ರಾಜ್ಯಶಾಹಿಗಳಿಗೆ ಕ್ರಾಂತಿಯನ್ನು ತಡೆಯಲು ಸಾಧ್ಯವಾಗುವುದಿಲ್ಲ. ಅವರ ಎಲ್ಲ ಶಕ್ತಿ ಮತ್ತು ಸೈತಾನೀ ಪ್ರಯತ್ನಗಳ ಹೊರತಾಗಿಯೂ ಕ್ರಾಂತಿಯನ್ನು ನಿಲ್ಲಿಸಲು ಆಗುವುದಿಲ್ಲ.

ಹೌದು, ಒಂದು ವಿಷಯ ಇವತ್ತಿಗೂ ನನ್ನನ್ನು ಕೊರೆಯುತ್ತಿದೆ. ನನ್ನ ದೇಶಕ್ಕೆ, ಮನು ಕುಲಕ್ಕೆ ಏನಾದರೂ ಉಪಯೋಗವಾಗುವಂಥದನ್ನು ಮಾಡಬೇಕೆಂಬ ಮಹತ್ವಾಕಾಂಕ್ಷೆ ನನ್ನೆದೆಯಲ್ಲಿತ್ತು. ಆದರೆ ನನ್ನ ಹಂಬಲದ ಸಾವಿರದ ಒಂದು ಪಾಲನ್ನೂ ಸಾಧಿಸಲಾಗಲಿಲ್ಲ. ಬದುಕಿದರೆ ಬಹುಶಃ ಅವನ್ನು ಪೂರೈಸಲು ಅವಕಾಶ ಸಿಗಬಹುದು. ಅಕಾಸ್ಮಾತ್ ನನ್ನ ಮನಸಿನಲ್ಲಿ ಬದುಕುಳಿಯುವ ಹಂಬಲ ಬಂದರೂ ಅದು ಕೇವಲ ಈ ಕಾರಣಕ್ಕಾಗಿಯೇ ಆಗಿರುತ್ತದೆ.

ಇತ್ತಿಚೇನ ದಿನಗಳಲ್ಲಿ ನನ್ನ ಬಗ್ಗೆ ಹೆಮ್ಮೆಯಾಗುತ್ತಿದೆ. ಅಂತಿಮ ಪರೀಕ್ಷೆಯ ಕ್ಷಣಗಳಿಗಾಗಿ ಉದ್ವೇಗದಿಂದ ಎದುರು ನೋಡುತ್ತಿದ್ದೇನೆ. ಆ ದಿನ ಬೇಗ ಬರಲಿ ಎಂದು ಹಾರೈಸುತ್ತೇನೆ ಎಂದು ಭಗತ್ ಸಿಂಗ್ ಉತ್ತರಿಸಿದ್ದರು.

ಹೀಗೆ ಸಾಯುವ ಹೊತ್ತಿಗೂ ಶಿಕ್ಷೆ ಮಾಫಿಯಾಗಲೂ, ಆತ್ಮಹತ್ಯೆ ಮಾಡಿಕೊಳ್ಳಬೇಕೆಂದಾಗಲಿ ಯೋಚಿಸದೆ ಭಗತ್ ಸಾವಿನ ಕ್ಷಣಗಳನ್ನು ಎದುರುಗೊಳ್ಳಲು ಧೈರ್ಯದಿಂದ ಸಿದ್ಧತೆ ನಡೆಸಿದ್ದಾಗ ಮಾರ್ಚ 24, 1931 ರಂದು ಬೆಳಗಿನ ಜಾವ ಗಲ್ಲಿಗೇರಿಸುವುದೆಂದು ತೀರ್ಮಾನವಾಯಿತು. ಅಂದು ನೌಜವಾನ್ ಸಭಾ ಲಾಹೋರಿನಲ್ಲಿ ದೊಡ್ಡ ಮೆರವಣಿಗೆ ಏರ್ಪಡಿಸಿತ್ತು. ಆದರೆ ಮೆರವಣಿಗೆ ಜೈಲಿನೆಡೆಗೆ ಬಂದರೆ ನಿಯಂತ್ರಣ ಕಷ್ಟ ಎಂದು ಹೆದರಿದ ಬ್ರಿಟಿಷ್ ಸರ್ಕಾರ 23 ಮಾರ್ಚ 1931 ರಾತ್ರಿ 7:30ಕ್ಕೆ ಭಗತ್ ಸಿಂಗ್, ರಾಜಗುರು, ಸುಖದೇವ್ ಅವರನ್ನು ಗಲ್ಲಿಗೇರಿಸಿತು.

(ಭಗತ್‌ಸಿಂಗ್ ಜೈಲ್ ಡೈರಿ ಪುಸ್ತಕದಿಂದ, ಸಂ:ಚಮನ್‌ಲಾಲ್)

ಸವಿತಾ ನಾಗಭೂಷಣ ಅವರ ಯುದ್ಧ ವಿರೋಧಿ ಶಾಂತಿ ಗೀತೆಗಳು

ಬೀದಿಯಲ್ಲಿ ಚೆಲ್ಲಬಾರದು

ಎಷ್ಟೊಂದು ಹೂ ಗುಚ್ಚಗಳು
ಎಷ್ಟೊಂದು ಶವಪೆಟ್ಟಿಗೆಗಳು

ಎಷ್ಟೊಂದು ಜಯಕಾರಗಳು
ಎಷ್ಟೊಂದು ಕುಶಾಲು ತೋಪುಗಳು

ವೀರರೇಕೆ ಸಾಯಬೇಕು?
ಧೀರರೇಕೆ ಸಾಯಬೇಕು?

ಶಾಂತಿಕಾಲದಲ್ಲಿ ಸೇತುವೆ ಕಟ್ಟಿದವರು
ಯುದ್ಧಕಾಲದಲ್ಲಿ ಉಡಾಯಿಸುವರು

ಹೌದು ರಕ್ತ ದೇಹದಲ್ಲಿ ಹರಿಯಬೇಕು
ಬೀದಿಯಲ್ಲಿ ಚೆಲ್ಲಬಾರದು

(2018)



ದ್ವೇಷವನ್ನು ಬಿತ್ತಬಾರದು

ದ್ವೇಷವನ್ನು ಬಿತ್ತಿ ಬೆಳೆದು
ತಲೆಯನೆತ್ತಿ ಕತ್ತಿಯಂತೆ
ತೂಗಲು ಬಿಟ್ಟು ನೀರು ಗೊಬ್ಬರ ಕೊಟ್ಟು
ಬರ್ರೋ ಎಂದು ಬೆಳೆದು
ರೆಂಬೆ ಗೊಂಬೆ ಚಾಚಿ
ವಿಷದ ಹಣ್ಣು ತೂಗಿ ಆಸೆಗಣ್ಣು ತಾಗಿ
ಮಂದಿ ತಿಂದು ತೇಗಿ
ಮೈ ತಣ್ಣಗಾಗಿ ಕಣ್ಣ ಮುಚ್ಚಿ
ಮಣ್ಣು ಸೇರಬಾರದು

ಸುಟ್ಟು ಬಿಡು ಮೊಳಕೆಯಲ್ಲೇ
ಸಣ್ಣ ಬೆಂಕಿಯಲ್ಲಿ
ಹಗೆಯ ಹೊಗೆ ಕೂಡ ಹಬ್ಬಬಾರದು

(2018)

ಹೊಸಬಾಳು

ದ್ವೇಷ ಬಿತ್ತಿದವರು
ರೋಷ ಬಿತ್ತಿದವರು
ಅದಾಗಲೇ
ಹತರಾಗಿದ್ದಾರೆ ಗತರಾಗಿದ್ದಾರೆ
ನಾವೇಕೆ ಕತ್ತಿ ಬೀಸೋಣ
ನಾವೇಕೆ ಹಲ್ಲು ಮಸೆಯೋಣ
ಈ ಹಗೆಗೀಗ ಎಷ್ಟರ ಹರಯ?
ತಾಳು ತಾನೇ ಸಾಯುವುದು
ಕೇಡು–ಸೇಡು ಮುದಿಯಾಗಿ
ಹೂಳಿದ ಮೇಲಷ್ಟೇ ಹೊಸಬಾಳು!

(2018)

ಹೊಸಹುಟ್ಟು

ಯುದ್ಧ ಶುರುವಾದಾಗ
ಕೊಳದಲ್ಲಿ ತಾವರೆಯ
ಹೂವುಗಳು ಅರಳಿದ್ದವು

ಯುದ್ಧ ಮುಗಿದ ದಿನ
ಹೆಣಗಳು ತೇಲುತ್ತಿದ್ದವು

ಚರಮಗೀತೆ ನುಡಿಸಲೂ
ಮಂದಿ ಉಳಿದಿಲ್ಲ
ಎಲ್ಲವೂ ಹೊಸದಾಗಿ ಹುಟ್ಟಬೇಕು
ಮನುಜರೂ..

(2023)

ಕನ್ನಡದ ಹಿರಿಯ ಕವಯಿತ್ರಿ, ಚಿಂತಕಿ ಶ್ರೀಮತಿ ಸವಿತಾ ನಾಗಭೂಷಣ ಅವರ 'ಯುದ್ಧ ವಿರೋಧಿ ಶಾಂತಿ ಗೀತೆಗಳು' ಕವನ ಸಂಕಲನದಿಂದ ಆಯ್ಕೆ ಮಾಡಿದ ಕವಿತೆಗಳಿವು. ಅವರು ವಿವಿಧ ಕಾಲದಲ್ಲಿ ಬರೆದ ಕವಿತೆಗಳನ್ನು 'ಲೋಹಿಯಾ ಪ್ರಕಾಶನ, ಬಳ್ಳಾರಿ ಯವರು (ಚಿಕ್ಕನಗೌಡ್ರು ನಾಗನಗೌಡ– ಶಿವಮ್ಮ ದತ್ತಿ ಯ ಪ್ರಕಟನೆಯಾಗಿ) ಇದೀಗ ಸಂಕಲನದಲ್ಲಿ ಹೊರ ತಂದಿದ್ದಾರೆ. ಅತ್ಯಂತ ಸಕಾಲಿಕ ಮತ್ತು ಚಿಂತನಾರ್ಹ ಕವಿತೆಗಳ ಈ ಸಂಕಲನದಿಂದ ಕೆಲವನ್ನು ನಮ್ಮ ಓದುಗರಿಗೆ ನೀಡಲಾಗಿದೆ.

ಅದು ಅಂತಿಮವಾಗಿ ಕುಸಿಯಿತು. ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಸರ್ಕಾರವನ್ನು ರಚಿಸುವಲ್ಲಿ ಯಶಸ್ವಿಯಾಯಿತು, ಆದರೆ ನರಸಿಂಹ ರಾವ್ ನೇತೃತ್ವದ ಸರಕಾರದ ಆರ್ಥಿಕ ನೀತಿಗಳು ಬಿಜೆಪಿಗೆ ಗಮನಾರ್ಹ ಲಾಭಗಳನ್ನು ಗಳಿಸಲು ಅವಕಾಶ ಮಾಡಿಕೊಟ್ಟವು.

ಸಾಮೂಹಿಕ ಹೋರಾಟಗಳನ್ನು ತೀವ್ರಗೊಳಿಸಲು, ಪಕ್ಷ ಕಟ್ಟುವುದಕ್ಕೆ ಆದ್ಯತೆಯನ್ನು ಪುನಃಸ್ಥಾಪಿಸಲು ಮತ್ತು ಪಕ್ಷದ ಸೈದ್ಧಾಂತಿಕ ಕೆಲಸವನ್ನು ಉನ್ನತಗೊಳಿಸಲು ಹಾಗೂ ಪಕ್ಷದ ಮಾರ್ಗ ಮತ್ತು ನೀತಿಗಳನ್ನು ಜನಗಳ ಮುಂದೆ ಎತ್ತಿ ತೋರಬೇಕು ಎಂದು ಮಹಾಧಿವೇಶನ ಕರೆ ನೀಡಿತು. ಮಹಾಧಿವೇಶನ ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಪರಿಸ್ಥಿತಿಯಲ್ಲಿನ ಬದಲಾವಣೆಗಳನ್ನು ಬಿಂಬಿಸುವಂತೆ "ಪಕ್ಷದ ಕಾರ್ಯಕ್ರಮವನ್ನು ಸಮಕಾಲಿಕಗೊಳಿಸು"ವ ನಿರ್ಣಯವನ್ನು ಸಹ ಅಂಗೀಕರಿಸಿತು.

ಮಹಾಧಿವೇಶನ 63 ಸದಸ್ಯರ ಕೇಂದ್ರ ಸಮಿತಿಯನ್ನು ಆಯ್ಕೆ ಮಾಡಿತು, ಅದು 17 ಸದಸ್ಯರ ಪೊಲಿಟ್ ಬ್ಯೂರೋ ಮತ್ತು ಕಾಮ್ರೇಡ್ ಹರ್ಕಿಶನ್ ಸಿಂಗ್ ಸುರ್ಜೀತ್ ಅವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆ ಮಾಡಿತು.

(ಮುಂದುವರೆಯುವುದು)



NEW No. MAG(3)/NPP/205/2021-2022
JANASHAKTHI KANNADA VARA PATRIKE March 24-30, 2025 Price: Rs. 10/- Date of Publication: 21 March 2025 RNI No. KARKAN /2006/17926 Posted on 25-03-2025
Posted at BG PSO, BG - 560026 **Posted at Periodical Rate -** Rs. 2



24 ನೇ ಸಿಪಿಐ(ಎಂ) ಮಹಾಧಿವೇಶನದತ್ತ

ಸಿಪಿಐ(ಎಂ)ನ 24 ನೇ ಮಹಾಧಿವೇಶನ ತಮಿಳುನಾಡಿನ ಮಧುರೈನಲ್ಲಿ ಎಪ್ರಿಲ್ 2ರಿಂದ 6ರ ವರೆಗೆ ನಡೆಯಲಿದೆ. ಇದಕ್ಕೆ ಸಿದ್ಧತೆಗಳು ಭರದಿಂದ ನಡೆಯುತ್ತಿವೆ. ಈ ಸಂದರ್ಭದಲ್ಲಿ ಸಿಪಿಐ(ಎಂ)ನ ಇದುವರೆಗಿನ ಮಹಾಧಿವೇಶನಗಳ ಒಂದು ಹಿನ್ನೋಟ.



7ನೇ ಮಹಾಧಿವೇಶನ, ಅಕ್ಟೋಬರ್ 31–ನವಂಬರ್ 7, 1964, ಕೊಲ್ಕತ

ಸಿಪಿಐ(ಎಂ) ರಚನೆಯಾದ ಮಹಾಧಿವೇಶನ. ಭಾರತೀಯ ಪ್ರಭುತ್ವ ವಿದೇಶಿ ಹಣಕಾಸು ಬಂಡವಾಳದೊಂದಿಗೆ ಹೆಚ್ಚೆಚ್ಚಾಗಿ ಸಹಕರಿಸುವ ದೊಡ್ಡ ಬಂಡವಾಳಿಗರ ನೇತೃತ್ವದಲ್ಲಿ ಬಂಡವಾಳಶಾಹಿಗಳು ಮತ್ತು ಭೂಮಾಲೀಕರ ಆಳ್ವಿಕೆಯ ಅಂಗ ಎಂದು ನಿರೂಪಿಸುವ ಹೊಸ ಕಾರ್ಯಕ್ರಮವನ್ನು ಅಂಗೀಕರಿಸಲಾಯಿತು.

ಮಹಾಧಿವೇಶನ ಕಾರ್ಮಿಕ–ರೈತ ಮೈತ್ರಿಯ ಆಧಾರದ ಮೇಲೆ ಕಾರ್ಮಿಕ ವರ್ಗದ ನೇತೃತ್ವದಲ್ಲಿ ಜನತಾ ಪ್ರಜಾಸತ್ತಾತ್ಮಕ ಕ್ರಾಂತಿಗೆ ಕರೆ ನೀಡಿತು.

7ನೇ ಮಹಾಧಿವೇಶನ 31 ಸದಸ್ಯರಿದ್ದ ಕೇಂದ್ರ ಸಮಿತಿ ಮತ್ತು ಒಂಬತ್ತು ಸದಸ್ಯರ ಪೊಲಿಟ್ ಬ್ಯೂರೋವನ್ನು ಆಯ್ಕೆ ಮಾಡಿತು. ಕಾಮ್ರೇಡ್ ಪಿ. ಸುಂದರಯ್ಯ ಅವರನ್ನು ಮೊದಲ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಯಿತು.



8ನೇ ಮಹಾಧಿವೇಶನ, ಡಿಸೆಂಬರ್ 23 ರಿಂದ 29, 1968, ಕೊಚ್ಚಿ

ಈ ಮಹಾಧಿವೇಶನ ದೇಶ ಮತ್ತು ಕಮ್ಯುನಿಸ್ಟ್ ಚಳುವಳಿಗೆಯ ಒಂದು ಪ್ರಕ್ಷುಬ್ಧ ಅವಧಿಯಲ್ಲಿ ನಡೆಯಿತು. ಎಡ ಚಳುವಳಿ ಸರ್ಕಾರದಿಂದ ದಬ್ಬಾಳಿಕೆಯನ್ನು ಎದುರಿಸಿತ್ತು ಮತ್ತು 1967 ರ ನಕ್ಸಲ್‌ಬಾರಿ ಘಟನೆಯ ನಂತರ ಉಗ್ರ–ಎಡ ಪಂಥವಾದದಿಂದಾಗಿ ಸವಾಲುಗಳನ್ನು ಕೂಡ ಎದುರಿಸಿತು. ಈ ಸವಾಲುಗಳನ್ನು ನಿಮೀರಿ ನಿಂತು, ಎಡ–ನೇತೃತ್ವದ ರಂಗಗಳು ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿ ಚುನಾವಣೆಗಳನ್ನು ಗೆದ್ದಿದ್ದವು.

ಜಾಗತಿಕವಾಗಿ, ಎಂಟನೇ ಮಹಾಧಿವೇಶನ ಸಮಾಜವಾದಿ ಶಿಬಿರದಲ್ಲಿನ ಒಡಕನ್ನು ಗಮನಿಸಿತು, ಸೋವಿಯತ್ ಪಕ್ಷವು ಪರಿಷ್ಕರಣಾವಾದದ ಪ್ರಭಾವಕ್ಕೆ ಒಳಗಾಗುತ್ತಿತ್ತು, ಇತ್ತ ಚೀನೀ ಪಕ್ಷವು ಭಾರತೀಯ ಕ್ರಾಂತಿಯ ಹಾದಿ ಮತ್ತು ಅಗಿನ ಪರಿಸ್ಥಿತಿಯ ಬಗ್ಗೆ ತಪ್ಪಾದ ತಿಳುವಳಿಕೆಯನ್ನು ಬೆಳೆಸಿತ್ತು.

ಮಹಾಧಿವೇಶನ ಹೆಚ್ಚೆಚ್ಚೆಚ್ಚು ಸ್ವತಂತ್ರ ಸಾಮೂಹಿಕ ಹೋರಾಟಗಳು ಮತ್ತು ಎಡ ಹಾಗೂ ಬಲ ಮಾರ್ಗಚ್ಯುತಿಗಳ ವಿರುದ್ಧ ಸೈದ್ಧಾಂತಿಕ ಹೋರಾಟಗಳಿಗೆ ಕರೆ ನೀಡಿತು.

28 ಸದಸ್ಯರಿದ್ದ ಕೇಂದ್ರ ಸಮಿತಿ ಮತ್ತು ಒಂಬತ್ತು ಸದಸ್ಯರ ಪೊಲಿಟ್ ಬ್ಯೂರೋವನ್ನು ಆಯ್ಕೆ ಮಾಡಲಾಯಿತು. ಕಾಮ್ರೇಡ್ ಪಿ. ಸುಂದರಯ್ಯರವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಮರು ಆಯ್ಕೆ ಮಾಡಲಾಯಿತು.



9ನೇ ಮಹಾಧಿವೇಶನ, ಜೂನ್ 27ರಿಂದ ಜುಲೈ2, 1972, ಮಧುರೈ

ಈ ಮಹಾಧಿವೇಶನ ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿ ಸಿಪಿಐ(ಎಂ) ನೇತೃತ್ವದ ಸರ್ಕಾರಗಳ ರಚನೆ ಮತ್ತು ನಂತರ ವಜಾ, ಕಾಂಗ್ರೆಸ್ ಪಕ್ಷದ ವಿಭಜನೆ ಮತ್ತು ಇಂದಿರಾ ಗಾಂಧಿಯವರ ಬೃಹತ್ ಚುನಾವಣಾ ಗೆಲುವು ಮತ್ತು ಬಾಂಗ್ಲಾದೇಶದ ವಿಮೋಚನೆ ಮುಂತಾದ ಮಹತ್ವದ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಜರುಗಿತು.

ಈ ಬೆಳವಣಿಗೆಗಳನ್ನು ಮತ್ತು ಪಶ್ಚಿಮ ಬಂಗಾಳದಲ್ಲಿ ಮುಖ್ಯವಾಗಿ ಸಿಪಿಐ(ಎಂ) ವಿರುದ್ಧ ನಿರ್ದೇಶಿಸಲಾದ ಅರೆ–ಫ್ಯಾಸಿಸ್ಟ್ ಭಯೋತ್ಪಾದನೆ ಹಾಗೂ ಚುನಾವಣೆಗಳ ಹಿಂಸಾತ್ಮಕ ದಮನ ಮತ್ತು ಅಕ್ರಮಗಳನ್ನು ಗಮನಿಸಿದ ಮಹಾಧಿವೇಶನ, ಅಧಿಕಾರದ ಕೇಂದ್ರೀಕರಣದ ಹೆಚ್ಚುತ್ತಿರುವ ಅಪಾಯ ಮತ್ತು ಪ್ರಜಾಪ್ರಭುತ್ವಕ್ಕೆ ಬೆದರಿಕೆಯ ಬಗ್ಗೆ ಎಚ್ಚರಿಸಿತು.

ಪ್ರತ್ಯೇಕತಾವಾದಿ ಚಳುವಳಿಗಳ ಪ್ರವೃತ್ತಿ ಹೆಚ್ಚುತ್ತಿರುವುದನ್ನು ಗಮನಿಸಿದ ಮಹಾಧಿವೇಶನ ಪ್ರಸ್ತುತ ಸಂದರ್ಭಗಳಲ್ಲಿ ಸ್ವಯಂನಿರ್ಧಾರದ ಹಕ್ಕು ಪ್ರತ್ಯೇಕತೆಯ ಹಕ್ಕನ್ನು ಒಳಗೊಂಡಿಲ್ಲ ಎಂದು ಘೋಷಿಸುವ ಮೂಲಕ ರಾಷ್ಟ್ರೀಯತೆಯ ಪ್ರಶ್ನೆಯನ್ನು ಬಗೆಹರಿಸಿತು.

ಒಂಬತ್ತು ಸದಸ್ಯರ ಪೊಲಿಟ್ ಬ್ಯೂರೋವನ್ನು ಹೊಂದಿರುವ 30 ಸದಸ್ಯರ ಕೇಂದ್ರ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಕಾಮ್ರೇಡ್ ಪಿ. ಸುಂದರಯ್ಯ ಅವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಮರು ಆಯ್ಕೆ ಮಾಡಲಾಯಿತು.



10ನೇ ಮಹಾಧಿವೇಶನ, ಎಪ್ರಿಲ್ 2ರಿಂದ 8, 1978, ಜಲಂಧರ್

ಹತ್ತನೇ ಮಹಾಧಿವೇಶನ, ಇಂದಿರಾ ಗಾಂಧಿಯವರು ತುರ್ತು ಪರಿಸ್ಥಿತಿ ಹೇರಿದ್ದರಿಂದಾಗಿ, ಆರು ವರ್ಷಗಳ ನಂತರ ನಡೆಯಿತು. 1971–1977ರ ಅವಧಿಯಲ್ಲಿ ಪ್ರಜಾಪ್ರಭುತ್ವದ ಮೇಲೆ ದಾಳಿ ಮತ್ತು ವ್ಯಾಪಕ ಹಿಂಸಾತ್ಮಕ ದಮನ ನಡೆಯಿತು, ಇದರಲ್ಲಿ ಪಶ್ಚಿಮ ಬಂಗಾಳದಲ್ಲಿ 1,100 ಸಿಪಿಐ(ಎಂ) ಕಾರ್ಯಕರ್ತರು ಮತ್ತು ಕೇರಳದಲ್ಲಿ 400 ಕಾರ್ಯಕರ್ತರು ಪ್ರಾಣ ಕಳೆದುಕೊಂಡರು. 1974 ರ ರೈಲ್ವೆ ಮುಷ್ಕರ ಮತ್ತು ಜೆಪಿ ನೇತೃತ್ವದ ಚಳುವಳಿ ಸೇರಿದಂತೆ ಕಾಂಗ್ರೆಸ್ (ಐ) ಸರ್ಕಾರದ ವಿರುದ್ಧ ಬೃಹತ್ ಪ್ರತಿಭಟನೆಗಳು ನಡೆದವು. ಇಂದಿರಾ ಗಾಂಧಿ ನೇತೃತ್ವದ ಕಾಂಗ್ರೆಸ್ ಪಕ್ಷವನ್ನು 1977 ರಲ್ಲಿ ಸೋಲಿಸಲಾಯಿತು ಮತ್ತು ಜನತಾ ಪಕ್ಷ ಅಧಿಕಾರಕ್ಕೆ ಬಂದಿತು. 1978 ರಲ್ಲಿ ಎಡ–ನೇತೃತ್ವದ ರಾಜ್ಯ ಸರ್ಕಾರಗಳು ರಚನೆಯಾದವು.

ಸಿಪಿಐ (ಎಂ) ಸರ್ವಾಧಿಕಾರಶಾಹೀ ಶಕ್ತಿಗಳ ವಿರುದ್ಧ ಧೈರ್ಯದಿಂದ ಹೋರಾಡಿದರೂ, ಪುಟ 14 ಕ್ಕೆ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**